ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಗತಿ ಬಂಧು ಸ್ವ-ಸಹಾಯ ಸಂಘಗಳು
ಬಂಟ್ವಾಳ ತಾಲೂಕಿನ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ. ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

ನಿಬಂಧಕಾರರು
ಸಂತೋಷ್ ಕೆ. ಕೆ.

ಮಾರ್ಗದರ್ಶಕರು
ಡಾ. ಬಿ. ಪ್ರಭಾಕರ ಶಿಶಿಲ
ಪ್ರಾಧ್ಯಾಪಕರು

ಡಾ. ಹಾಮಾನಾ - ಸಂಶೋಧನ ಕೇಂದ್ರ, ಉಜಿರೆ
ಏಪ್ರಿಲ್ ೨೦೦೭

ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಗತಿ ಬಂಧು
ಸ್ವ ಸಹಾಯ ಸಂಘಗಳು
ಬಂಟ್ವಾಳ ತಾಲೂಕಿನ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ. ಫಿಲ್., ಪದವಿಗಾಗಿ ಅರ್ಪಿಸಿದ ನಿಬಂಧ

ನಿಬಂಧಕಾರರು
ಸಂತೋಷ್ ಕೆ.ಕೆ

ಮಾರ್ಗದರ್ಶಕರು
ಡಾ. ಬಿ. ಪ್ರಭಾಕರ ಶಿಶಿಲ
ಪ್ರಾಧ್ಯಾಪಕರು

ಡಾ. ಹಾಮಾನಾ- ಸಂಶೋಧನ ಕೇಂದ್ರ ಉಜಿರೆ

ಏಪ್ರಿಲ್ ೨೦೦೭

ದೃಢೀಕರಣ

ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಗತಿ ಬಂಧು ಸ್ವ ಸಹಾಯ ಸಂಘಗಳು ಬಂಟ್ವಾಳ ತಾಲೂಕಿನ ಒಂದು ಅಧ್ಯಯನ ಇದು ನಾನು ಉಜಿರೆಯ ಹಾಮಾನಾ ಸಂಶೋಧನಾ ಕೇಂದ್ರದಲ್ಲಿ ಡಾ. ಬಿ. ಪ್ರಭಾಕರ ಶಿಶಿಲರ ಮಾರ್ಗದರ್ಶನದಲ್ಲಿ ಎಂ. ಫಿಲ್ ಪದವಿಗಾಗಿ ಸಿದ್ಧಪಡಿಸಿದ ನಿಬಂಧವಾಗಿರುತ್ತದೆ. ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಇತರ ಯಾವುದೇ ಉದ್ದೇಶಗಳಿಗೆ ಬಳಕೆಯಾಗಿಲ್ಲ.

ಸಂತೋಷ್ ಕೆ.ಕೆ.

ಉಜಿರೆ (ಸಂತೋಷ್ ಕೆ.ಕೆ)

೨೬-೦೪-೨೦೦೭

ಪ್ರಮಾಣ ಪತ್ರ

ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಗತಿ ಬಂಧು ಸ್ವ ಸಹಾಯ ಸಂಘಗಳು: ಬಂಟ್ವಾಳ ತಾಲೂಕಿನ ಒಂದು ಅಧ್ಯಯನ ಇದು ಶ್ರೀ. ಸಂತೋಷ್ ಕೆ.ಕೆ ಇವರು ಎಂ. ಫಿಲ್ ಪದವಿಗಾಗಿ ನಡೆಸಿದ ಅಧ್ಯಯನ ಮತ್ತು ವಿಶ್ಲೇಷಣೆಯಾಧರಿತ ನಿಬಂಧವಾಗಿದ್ದು ಇದನ್ನು ನನ್ನ ಮಾರ್ಗದರ್ಶನದಲ್ಲಿ ಉಜಿರೆಯ ಡಾ.ಹಾಮಾನಾ ಸಂಶೋಧನಾ ಕೇಂದ್ರದಲ್ಲಿ ಸಿದ್ಧ ಪಡಿಸಲಾಗಿದೆ. ಈ ನಿಬಂಧದ ಯಾವುದೇ ಭಾಗವು ಇನ್ನಿತರ ಯಾವುದೇ ಉದ್ದೇಶಗಳಿಗೆ ಬಳಕೆಯಾಗಿಲ್ಲ ಮತ್ತು ಎಲ್ಲೂ ಪ್ರಕಟವಾಗಿಲ್ಲ ಎಂದು ಮೂಲಕ ಪ್ರಮಾಣೀಕರಿಸುತ್ತೇನೆ.

(ಡಾ. ಪ್ರಭಾಕರ ಶಿಶಿಲ)

ಉಜಿರೆ

೨೬–೦೪–೨೦೦೭

ಅನುಕ್ರಮಣಿಕೆ

ಕೋಷ್ಟಕಗಳ ಪಟ್ಟಿ

ಚಿತ್ರಗಳ ಪಟ್ಟಿ

ಅಧ್ಯಾಯ – ೧

ಪ್ರಸ್ತಾವನೆ

೧.೧ ಸ್ವಸಹಾಯ ಗುಂಪುಗಳು

೧.೧.೧ ಸ್ವಸಹಾಯ ಗುಂಪುಗಳೆಂದರೇನು?

೧.೧.೨ ಸ್ವಸಹಾಯ ಗುಂಪುಗಳ ಲಕ್ಷಣಗಳು

೧.೧.೩ ಸ್ವಸಹಾಯ ಸಂಘಗಳ ಉದ್ದೇಶಗಳು

೧.೧.೪ ಸ್ವಸಹಾಯ ಸಂಘಗಳ ನಿಯಮ ಮತ್ತು ನಿಬಂಧನೆಗಳು

೧.೧.೫ ಸ್ವಸಹಾಯ ಗುಂಪುಗಳ ಪ್ರಮುಖ ಕಾರ್ಯಗಳು

೧.೧.೬ ಸ್ವಸಹಾಯ ಸಂಘ ಮತ್ತು ಹನಿ ಹಣಕಾಸು

೧.೨ ಭಾರತದಲ್ಲಿ ಸ್ವಸಹಾಯ ಸಂಘಗಳು

೧.೨.೧ ಬೆಳವಣಿಗೆ

೧.೨.೨ ವಿಧಗಳು

೧. ಪ್ರಸ್ತಾವನೆ

೧.೧ ಸ್ವಸಹಾಯ ಗುಂಪುಗಳು

ಭಾರತ ಹಲವು ಜಾತಿ ಮತಗಳ ಒಂದು ಬಹು ವಿಶಾಲ ವೈವಿಧ್ಯಮಯ ದೇಶವಾಗಿದೆ. ಈ ದೇಶದಲ್ಲಿ ಸುಮಾರು ಏಳು ಲಕ್ಷ ಹಳ್ಳಿಗಳಿವೆ ಎಂದು ಅಂದಾಜಿಸಲಾಗಿದೆ.[1] ಆದುದರಿಂದ ಗಾಂಧೀಜಿ ಗ್ರಾಮೀಣ ಭಾರತವೇ ನೈಜ ಭಾರತ ಎಂದು ಹೇಳಿದ್ದಾರೆ.[2] ನೈಜ ಭಾರತದಲ್ಲಿ ಅನೈಕ್ಯ, ಜಾತೀಯತೆ ಮತ್ತು ತರ್ಕಾತೀತ ನಡವಳಿಕೆಗಳು ಅನೇಕ ಸಮಸ್ಯೆಗಳನ್ನು ಉಂಟುಮಾಡುತ್ತವೆ. ಅಭಿವೃದ್ಧಿಗಾಗಿ ಒಗ್ಗೂಡಲಾಗದಿರುವುದು ಅವುಗಳಲ್ಲಿ ಬಹಳ ದೊಡ್ಡ ಸಮಸ್ಯೆ. ಗ್ರಾಮೀಣ ಪ್ರದೇಶದ ಜನರು ಸ್ಥಳೀಯ ವೈಯಕ್ತಿಕ ನಾಯಕತ್ವವನ್ನು ಬಹುತೇಕವಾಗಿ ನಿರಾಕರಿಸುತ್ತಾರೆ. ಆದುದರಿಂದ ಆರ್ಥಿಕ ಅಭಿವೃದ್ಧಿಗೆ ಸಾಂಸ್ಥಿಕ ಪ್ರಯತ್ನಗಳೇ ಬೇಕಾಗುತ್ತವೆ. ಈ ನಿಟ್ಟನಲ್ಲಿ ೨೦ನೇ ಶತಮಾನದ ಆದಿಯಿಂದ ಸಹಕಾರಿ ರಂಗದಲ್ಲಿ ಅನೇಕ ಪ್ರಯತ್ನಗಳು ಆಗಿವೆ. ಆದರೆ ಪಕ್ಷ ರಾಜಕೀಯದಿಂದಾಗಿ ಸಹಕಾರಿ ಸಂಘಟನೆಗಳು ನಿರೀಕ್ಷಿತ ಮಟ್ಟದ ಪ್ರಗತಿಯನ್ನು ಸಾಧಿಸಿಲ್ಲ. ಹಾಗಾಗಿ ಸರಕಾರೇತರ ಸಂಸ್ಥೆಗಳ ಮೂಲಕ ಅಭಿವೃದ್ಧಿ ಸಾಧಿಸುವ ಪ್ರಯತ್ನಗಳನ್ನು ಗ್ರಾಮೀಣ ಭಾರತದಲ್ಲಿ ಅಲ್ಲಲ್ಲಿ ಮಾಡಲಾಗುತ್ತಿದೆ. ಸರಕಾರವೂ ಕೂಡ ಇಂಥ ಪ್ರಯತ್ನಗಳನ್ನು ಮಾಡುತ್ತಿದೆ. ಈ ಪ್ರಯತ್ನಗಳು ಸ್ವಸಹಾಯ ಗುಂಪುಗಳ ಹುಟ್ಟಿಗೆ ಮತ್ತು ಬೆಳವಣಿಗೆಗೆ ಕಾರಣವಾಗಿವೆ.

ಭಾರತವೂ ಸೇರಿದಂತೆ ಅನೇಕ ಪ್ರವರ್ಧಮಾನ ರಾಷ್ಟ್ರಗಳಿಗೆ ಬಡಜನರ ನೈಜ ಸಮಸ್ಯೆಯ ಅರಿವು ತೀರಾ ತಡವಾಗಿಯಾದರೂ ಆಗುತ್ತಿದೆ. ಭಾರತ ೧೯೪೭ರಲ್ಲಿ ಸ್ವಾತಂತ್ರ್ಯ ಗಳಿಸಿದಾಗ ಅದರ ಮುಂದೆ ಎರಡು ಆಯ್ಕೆಗಳಿದ್ದವು. ಮೊದಲನೆಯದು ಮಹಾತ್ಮ ಗಾಂಧೀಜಿ ಹೇಳಿದ ಗ್ರಾಮ ಸ್ವರಾಜ್ಯ ಪರಿಕಲ್ಪನೆಯ ಅನುಷ್ಠಾನ. ಎರಡನೆಯದು ರಷ್ಯಾದ ಬೆಳವಣಿಗೆಯ ಮಾದರಿ. ಮೊದಲನೆಯದು ಅಸಂಖ್ಯಾತ ಜನರಿಂದ ಬೃಹತ್ ಪ್ರಮಾಣದ ಉತ್ಪಾದನೆಯ ಪರಿಕಲ್ಪನೆಯಾದರೆ ಎರಡನೆಯದು ಬೃಹತ್ ಯಂತ್ರಗಳಿಂದ ದೊಡ್ಡ ಮಟ್ಟದ ಉತ್ಪಾದನೆಯ ಪರಿಕಲ್ಪನೆಯಾಗಿತ್ತು. ಗಾಂಧೀಜಿ ಬದುಕುಳಿಯುತ್ತಿದ್ದರೆ ನೆಹರು ಅನಿವಾರ್ಯವಾಗಿ ಮೊದಲನೆಯ ಮಾರ್ಗವನ್ನು ಆಯ್ಕೆ ಮಾಡುತ್ತಿದ್ದರೋ ಏನೋ! ದುರಂತಕ್ಕೆ ೧೯೪೮ ರಲ್ಲಿ ಗಾಂಧೀಜಿಯ ಕಗ್ಗೊಲೆಯಾಯಿತು. ಆದಾಗಿ ಎರಡು ವರ್ಷಗಳ ಬಳಿಕ ಯೋಜನಾ ಆಯೋಗ

ರೂಪುಗೊಂಡಿತು. ನೆಹರು ಅವರ ಅಭಿಪ್ರಾಯಗಳಿಗೆ ಎದುರಾಡಲು ಆ ಕಾಲದಲ್ಲಿ ಯಾರಿಂದಲೂ ಸಾಧ್ಯವಾಗಲಿಲ್ಲ. ಪರಿಣಾಮವಾಗಿ ಸಾರ್ವಜನಿಕ ಕ್ಷೇತ್ರದ ಬೃಹತ್ ಕೈಗಾರಿಕೆಗಳು ದೇಶದ ಆರ್ಥಿಕತೆಯಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿದವು. ನೆಹರು ನಿಧನದ ಬಳಿಕ ಅದೇ ಪರಿಸ್ಥಿತಿ ಒಂದಷ್ಟು ಕಾಲ ಮುಂದುವರಿಯಿತು. ಗ್ರಾಮೋದ್ಧಾರವೇ ಭಾರತದ ಉದ್ಧಾರ ಎನ್ನುವ ಜ್ಞಾನೋದಯ ಪ್ರಭುತ್ವಕ್ಕೆ ಅರ್ಥವಾಗುವಾಗ ತೀರಾ ತಡವಾಗಿ ಹೋಗಿತ್ತು.

ಆದರೂ ಸ್ವಸಹಾಯ ಗುಂಪುಗಳ ಹುಟ್ಟು ಮತ್ತು ಸಾಧನೆಗಳಿಂದಾಗಿ ಗ್ರಾಮೀಣ ಭಾರತದ ಒಟ್ಟು ಸ್ವರೂಪ ಬದಲಾಗತೊಡಗಿತು. ನಮ್ಮ ನೆರೆಯ ಬಾಂಗ್ಲಾ ದೇಶದ ಪ್ರೊ. ಮಹಮ್ಮದ್ ಯೂನಸ್ ಹನಿ ಹಣಕಾಸು (Micro finance) ಪರಿಕಲ್ಪನೆಯನ್ನು ತಮ್ಮ ದೇಶದಾದ್ಯಂತ ಜನಪ್ರಿಯಗೊಳಿಸಿ ವಿಶ್ವದ ಅತಿ ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಗೆ ಭಾಜನರಾದರು. ಇದು ಸ್ವಸಹಾಯ ಗುಂಪುಗಳ ಮಹತ್ವಕ್ಕೆ ವಿಶ್ವ ನೀಡಿದ ಪುರಸ್ಕಾರ ಎನಿಸಿತು.


೧.೧.೧ ಸ್ವಸಹಾಯ ಗುಂಪುಗಳೆಂದರೇನು?

ಜನರು ತಮ್ಮ ಆರ್ಥಿಕ ಮತ್ತು ಸಾಮಾಜಿಕ ಮಟ್ಟವನ್ನು ಸುಧಾರಿಸಲು ಮಾಡಿಕೊಂಡ ಸಣ್ಣ ಸಂಘಟನೆಗಳನ್ನು ಸ್ವಸಹಾಯ ಗುಂಪುಗಳೆಂದು ಕರೆಯಲಾಗುತ್ತದೆ. “ಐದರಿಂದ ಇಪ್ಪತ್ತು ಜನರಿರುವ ಸಮಾನ ಮನಸ್ಸಿನ ವ್ಯಕ್ತಿಗಳು ತಮ್ಮ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಸ್ವ ಇಚ್ಛೆಯಿಂದ ರಚಿಸಿಕೊಂಡ ಗುಂಪಿಗೆ ಸ್ವಸಹಾಯ ಸಂಘ ಎಂದು ಹೆಸರು”.[3]

“ಸ್ವಸಹಾಯ ಗುಂಪುಗಳು ಗ್ರಾಮೀಣ ಬಡವರ ಐಚ್ಛಿಕ ಸಂಘಟನೆಗಳಾಗಿದ್ದು ಅವು ಗುಂಪಿನ ನಿರ್ಧಾರಕ್ಕನುಗುಣವಾಗಿ ನಿಧಿಯೊಂದನ್ನು ಸ್ಥಾಪಿಸಿ ಸದಸ್ಯರಿಗೆ ಸಾಲ ನೀಡುವ ಸಮಗ್ರ ಜಾಗೃತಿ ಉಂಟುಮಾಡುವ, ಪ್ರಜಾಸತ್ತಾತ್ಮಕ ಕಾರ್ಯ ನಿರ್ವಹಣೆಯ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ಹೊಂದಲು ಉದ್ದೇಶಿಸುವ ಆರ್ಥಿಕ ಏಕರೂಪತೆಯ ಸಂಘಟನೆಗಳಾಗಿವೆ”.[4]

ಸ್ವಸಹಾಯ ಸಂಘಟನೆಗಳು ಸಹಕಾರಿ ತತ್ವಗಳನ್ನು ಆಧರಿಸಿವೆ. ತಾನು ಎಲ್ಲರಿಗಾಗಿ ಮತ್ತು ಎಲ್ಲರೂ ತನಗಾಗಿ ಎಂಬ ಮೂಲ ಸಹಕಾರ ಮಂತ್ರವು ಸ್ವಸಹಾಯ ಗುಂಪುಗಳ ರಚನೆಗೆ ಅಡಿಗಲ್ಲನ್ನು ಒದಗಿಸಿದೆ.

ಸ್ವಸಹಾಯ ಗುಂಪುಗಳ ಉದ್ದೇಶ/ ಮೌಲ್ಯ




ನಕ್ಷೆ ೧.೧. ಸ್ವಸಹಾಯ ಗುಂಪುಗಳ ಉದ್ದೇಶ / ಮೌಲ್ಯ

ಐತಿಹಾಸಿಕವಾಗಿ ೧೮೦೦ ರ ಆದಿಯಲ್ಲಿ ಸ್ವಸಹಾಯ ಗುಂಪುಗಳು ಹುಟ್ಟಿಕೊಂಡವು ಎಂದು ಹೇಳಲಾಗುತ್ತದೆ. ಆರು ಜನ ಕುಡುಕರು ಕುಡಿತದ ಚಟವನ್ನು ಬಿಡಲು ಒಂದು ಸ್ವಸಹಾಯ ಗುಂಪನ್ನು ಆರಂಭಿಸಿದರು ಎಂಬ ಉಲ್ಲೇಖವಿದೆ.[5] ಬಾಂಗ್ಲಾದೇಶದ ಚಿತ್ತಗಾಂಗ್ ವಿಶ್ವವಿದ್ಯಾನಿಲಯದ ಪ್ರೊ. ಮಹಮ್ಮದ್ ಯೂನಸ್ ೧೯೭೬ರಲ್ಲಿ ಗ್ರಾಮೀಣ ಬ್ಯಾಂಕನ್ನು ಸ್ಥಾಪಿಸಿದರು. ಅದು ಹನಿ ಹಣಕಾಸು ವ್ಯವಸ್ಥೆಯನ್ನು ಆರಂಭಿಸಿತು. ಈಗಿನ ಹನಿ ಹಣಕಾಸು ಸ್ವಸಹಾಯ ಗುಂಪುಗಳ ಹುಟ್ಟಿಗೆ ಯೂನಸ್ ಚಿಂತನೆಗಳು ಕಾರಣವಾದವು.

ಸ್ವಸಹಾಯ ಗುಂಪುಗಳ ಪರಿಕಲ್ಪನೆ

ಆರಂಭದಲ್ಲಿ ಸ್ವಸಹಾಯ ಗುಂಪುಗಳು ಗ್ರಾಮೀಣ ಪ್ರದೇಶದಲ್ಲಿ ಮಾತ್ರ ತಲೆ ಎತ್ತಿದ್ದವು. ಅವುಗಳ ಯಶಸ್ಸಿನಿಂದ ನಗರ ಪ್ರದೇಶದ ಜನರು ಉತ್ತೇಜಿತರಾಗಿ ನಗರ ಕೇಂದ್ರಿತ ಸ್ವಸಹಾಯ ಗುಂಪುಗಳನ್ನು ರಚಿಸತೊಡಗಿದರು. ಸ್ವಸಹಾಯ ಗುಂಪುಗಳು

ಸರಕಾರೇತರ ಸಂಸ್ಥೆಗಳ ಪ್ರಯತ್ನದಿಂದ ಮಾತ್ರವಲ್ಲದೆ ಸರಕಾರದ ಪ್ರಯತ್ನದಿಂದಲೂ ತಲೆ ಎತ್ತತೊಡಗಿದವು. ಈಗ ಅವು ಬಡತನ ಮತ್ತು ನಿರುದ್ಯೋಗ ನಿವಾರಣೆಯ ಒಂದು ಪರಿಕರವಾಗಿ ಯೋಜನಾ ಚಿತ್ರಗಳಿಗೆ ಗೋಚರವಾಗತೊಡಗಿವೆ.



ನಕ್ಷೆ ೧.೨ ಸ್ವಸಹಾಯ ಗುಂಪುಗಳ ಪರಿಕಲ್ಪನೆ

೧.೧.೨ ಸ್ವ ಸಹಾಯ ಗುಂಪುಗಳ ಲಕ್ಷಣಗಳು

ಸ್ವಸಹಾಯ ಗುಂಪುಗಳ ಸಾಮಾನ್ಯ ಲಕ್ಷಣಗಳು ಇಂತಿವೆ.

- **ಸಮಾನ ಮನಸ್ಸಿನವರ ಗುಂಪು:** ಗುಂಪನ್ನು ರಚಿಸುವ ಸಂದರ್ಭದಲ್ಲಿ ಸಮಾನ ಮನಸ್ಸಿನ ಜನರು ಒಂದು ಗುಂಪಿನಲ್ಲಿರುವುದು ಒಳ್ಳೆಯದು. ಹಳ್ಳಿಯಲ್ಲಿರುವ ಜನರು

ಹೆಚ್ಚು ಕಡಿಮೆ ಏಕಪ್ರಕಾರವಾಗಿ ಚಿಂತಿಸುವವರು. ಪರಸ್ಪರ ನಂಬಿಕೆ, ಆಚರಣೆಗಳನ್ನು ಗೌರವಿಸುವವರು. ಜಾತಿ ಸಾಮರಸ್ಯವನ್ನು ಕಾಪಾಡುವಲ್ಲಿ ಸ್ವಸಹಾಯ ಸಂಘಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ಹಲವು ಜಾತಿಯ ಸಮಾನ ಮನಸ್ಕರು ಮತ್ತು ಒಂದೇ ಜಾತಿಯ ಸಮಾನ ಮನಸ್ಕರು ಒಟ್ಟು ಸೇರಿ ಸ್ವ ಸಹಾಯ ಸಂಘ ರಚಿಸುವುದುಂಟು. ಯಾವಾಗಲೂ ಒಂದೇ ವಲಯದ/ಕಾಲನಿಯ ಜನರು ಸಂಘವನ್ನು ರಚಿಸುವುದು ಸಂಘದ ಅಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯದು.

- **ಪರಸ್ಪರ ಗೌರವ:** ಪರಸ್ಪರ ಹೊಂದಾಣಿಕೆ ಮತ್ತು ಗೌರವ ಸಂಘದ ಸದಸ್ಯರಲ್ಲಿರಬೇಕಾದುದು ಅಗತ್ಯ. ಸಂಘದ ಪ್ರತಿಯೊಬ್ಬನ ಭಾವನೆಗಳಿಗೆ ಇಲ್ಲಿ ಮಹತ್ವವಿದೆ. ಇಲ್ಲಿಯ ಪ್ರತಿಯೊಂದು ಚಟುವಟಿಕೆಗಳು ಪ್ರಜಾಪ್ರಭುತ್ವದ ನೆಲೆಯಲ್ಲಿ ನಡೆಯುತ್ತವೆ.

- **ಜನಪರ ಕಾಳಜಿ ಮತ್ತು ಒಗ್ಗಟ್ಟು:** ಗಳಿಸಿದ ಹಣದಲ್ಲಿ ಉಳಿತಾಯ ಮಾಡಿ ಅದನ್ನು ತನ್ನ ಅಭಿವೃದ್ಧಿಗೆ ಮತ್ತು ಜೀವನದ ಏಳಿಗೆಗೆ ಬಳಸುವಂತಹ ಒಳ್ಳೆಯ ದಾರಿಯನ್ನು ಸಂಘಗಳು ಕಲಿಸಿವೆ. ಸಂಘದ ಜನರ ಆಶೋತ್ತರಗಳು ಒಂದೇ ರೀತಿಯಾಗಿರುತ್ತವೆ. ಸಂಘದ ಸದಸ್ಯರು ಆಸಕ್ತಿಯಿಂದ ಚಟುವಟಿಕೆಗಳ ಬಗ್ಗೆ ಚರ್ಚಿಸುತ್ತಾರೆ. ಒಮ್ಮತದಿಂದ ಕೆಲಸ ಮಾಡುತ್ತಾರೆ. ಸಮಾನವಾದ ಅಭಿರುಚಿಯಿಂದಾಗಿ ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ನಡೆಯುತ್ತವೆ.

- **ರಾಜಕೀಯ ರಹಿತತೆ:** ಸ್ವಸಹಾಯ ಸಂಘಗಳು ರಾಜಕೀಯ ರಹಿತವಾಗಿ ಕೆಲಸ ಮಾಡಬೇಕಾಗುತ್ತದೆ. ಇದರಿಂದಾಗಿ ಗ್ರಾಮದ ಮತ್ತು ಸ್ವ – ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ರಾಜಕೀಯ ರಾಹಿತ್ಯದಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ಕ್ರಾಂತಿ ಉಂಟಾಗಿದೆ.

- **ವಿಕೇಂದ್ರೀಕೃತ ನಾಯಕತ್ವ:** ಸ್ವಸಹಾಯ ಸಂಘಗಳಲ್ಲಿ ಎಲ್ಲಾ ಸದಸ್ಯರು ಸಮಾನವಾಗಿ ಜವಾಬ್ದಾರಿ ಹೊರುವ ಪದ್ಧತಿಯನ್ನು ಅಳವಡಿಸಲಾಗಿದೆ. ಸಂಘದ ದಿನನಿತ್ಯದ ವ್ಯವಹಾರವನ್ನು ನೋಡಿಕೊಳ್ಳಲು ಎಲ್ಲಾ ಸದಸ್ಯರು ಒಮ್ಮತದ ಮೂಲಕ ಇಬ್ಬರು ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಪ್ರತಿನಿಧಿಗಳಾದವರು ಸಂಘದ ಲೆಕ್ಕಪತ್ರ,

ಅಂಕಿಅಂಶಗಳ ವಿವರ, ಪತ್ರವ್ಯವಹಾರ ಮುಂತಾದ ಕೆಲಸ ಕಾರ್ಯಗಳನ್ನು ನಿಭಾಯಿಸಬೇಕಾಗುತ್ತದೆ. ಇದಲ್ಲದೆ ಬ್ಯಾಂಕಿನ ಖಾತೆಯ ಸಾಲದ ವ್ಯವಹಾರಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಇದು ಹೊರತಾಗಿ ಮತ್ತಾವುದೇ ವಿಶೇಷ ಅಧಿಕಾರ ಪ್ರತಿನಿಧಿಗಳಿಗೆ ಇರುವುದಿಲ್ಲ. ಇಲ್ಲಿ ಬಹುಮತದ ತೀರ್ಮಾನವೇ ಅಂತಿಮ. ಬ್ಯಾಂಕಿಗೆ ಹಣ ಕಟ್ಟುವಾಗಲೂ ಸರತಿಯ ಪ್ರಕಾರ ಪ್ರತಿ ಸದಸ್ಯರು ಬ್ಯಾಂಕಿಗೆ ಭೇಟಿ ಕೊಡಬೇಕಾಗುತ್ತದೆ. ನಾಯಕತ್ವ ಗುಣ ಬೆಳೆಯಲು ಇದು ಸಹಕರಿಸುತ್ತದೆ. ಸಂಘದಲ್ಲಿ ಎಲ್ಲರೂ ಸಮಾನರು ಎನ್ನುವ ಭಾವನೆಯನ್ನು ಮೂಡಿಸಲಾಗುತ್ತದೆ.

- **ಪರಸ್ಪರ ಸಹಕಾರ:** ಸಹಕಾರ ಎಂಬ ಪದಕ್ಕೆ ವಿಶೇಷವಾದ ಸಾಂದರ್ಭಿಕ ಅರ್ಥವಿದೆ. ಸಹಕಾರ ಎಂದರೆ ಒಂದು ವಿಶೇಷ ಜೀವನ ಕ್ರಮವಾಗಿರುತ್ತದೆ. ಆರ್ಥಿಕ ಪ್ರಜಾಪ್ರಭುತ್ವವನ್ನು ಸಹಕಾರದ ಮೂಲಕ ಸ್ಥಾಪಿಸುವುದು ಸ್ವಸಹಾಯ ಗುಂಪುಗಳ ಉದ್ದೇಶವಾಗಿರುತ್ತದೆ. ಇತರರ ಉದ್ಧಾರದಲ್ಲಿ ತನ್ನ ಉದ್ಧಾರ ಅಡಗಿದೆ ಎಂಬ ಭಾವವು ಪರಸ್ಪರ ಸಹಕಾರಕ್ಕೆ ಕಾರಣವಾಗಿರುತ್ತದೆ.

- **ವಾರದ ಸಭೆಗಳು:** ಪ್ರಗತಿಯ ಅವಲೋಕನದ ದೃಷ್ಟಿಯಿಂದ ಸ್ವಸಹಾಯ ಸಂಘಗಳು ವಾರದ ಸಭೆಯನ್ನು ನಡೆಸುತ್ತದೆ. ಪ್ರತಿ ವಾರದ ಸಭೆಯಲ್ಲೂ ಉಳಿತಾಯ, ಸಾಲ ನಿರ್ವಹಣೆಯ ಜೊತೆಗೆ ಸದಸ್ಯರ ಸರ್ವತೋಮುಖ ಅಭಿವೃದ್ಧಿಗೆ ನೆರವಾಗುವ ವಿಚಾರಗಳನ್ನು ಕುರಿತು ಚರ್ಚಿಸಲಾಗುತ್ತದೆ. ಸಂಘದ ಚಟುವಟಿಕೆ ಮತ್ತು ಸಂಘಟನೆ ಬೆಳೆಯಬೇಕಾದರೆ ವಾರದ ಸಭೆಗಳು ಅಗತ್ಯವಾಗಿರುತ್ತವೆ.

- **ಪ್ರತಿವಾರ ಉಳಿತಾಯ:** ಸ್ವಸಹಾಯ ಸಂಘಗಳು ಪ್ರತಿವಾರವು ನಿರ್ದಿಷ್ಟ ಪಡಿಸಿದ ಹಣವನ್ನು ಉಳಿತಾಯ ಮಾಡುತ್ತವೆ. ಸದಸ್ಯರು ಸಂಘದ ಗಳಿಕೆಯ ಮೂಲಕ ತಮ್ಮ ಒಂದು ಸಣ್ಣ ಭಾಗವನ್ನು ಉಳಿತಾಯ ಮಾಡಿ ಅಭಿವೃದ್ಧಿಗೆ ಬೇಕಾಗುವ ಹಣಕಾಸನ್ನು ಹನಿ ಹನಿ ಕೂಡಿದ್ರೆ ಹಳ್ಳ ಎಂಬ ಗಾದೆಯಂತೆ ಸಂಚಯಿಸುತ್ತಾರೆ.[6]

ಹೀಗೆ ಸ್ವಸಹಾಯ ಸಂಘಗಳು ಅವುಗಳದ್ದೇ ಆದಂತಹ ವಿಶೇಷ ಗುಣ ಲಕ್ಷಣಗಳನ್ನು ಹೊಂದಿರುತ್ತವೆ. ಈ ಲಕ್ಷಣಗಳು ಸ್ವಸಹಾಯ ಸಂಘದ ಸ್ವರೂಪ ಮತ್ತು ಕಾರ್ಯಗಳ ವಿವರವನ್ನು ಒದಗಿಸುತ್ತವೆ.

೧.೧.೩ ಸ್ವ ಸಹಾಯ ಗುಂಪುಗಳ ಉದ್ದೇಶಗಳು

ಗ್ರಾಮೀಣ ಪ್ರದೇಶಗಳಲ್ಲಿ ತಾಂಡವವಾಡುವ ಬಡತನ, ನಿರುದ್ಯೋಗ, ಅಪೂರ್ಣೋದ್ಯೋಗ ಮತ್ತು ಮರೆಮಾಚಿದ ನಿರುದ್ಯೋಗಗಳಂತಹ ಸಮಸ್ಯೆಗಳ ಪರಿಹಾರಕ್ಕೆ ಸುಲಭದ ಮಾರ್ಗಗಳು ಪ್ರಭುತ್ವಕ್ಕೆ ಗೋಚರಿಸಲಿಲ್ಲ. ಭಾರತದ ಪಂಚವಾರ್ಷಿಕ ಯೋಜನೆಗಳು ಬಡತನವನ್ನು ಮತ್ತು ನಿರುದ್ಯೋಗವನ್ನು ಉಚ್ಚಾಟಿಸುವ ಉದ್ದೇಶಗಳನ್ನು ಹೊಂದಿದ್ದವು. ಬಡತನ ರೇಖೆಯ ವ್ಯಾಖ್ಯಾನದ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ೨೪೦೦ ಕ್ಯಾಲೋರಿ ಮತ್ತು ನಗರ ಪ್ರದೇಶದಲ್ಲಿ ೨೧೦೦ ಕ್ಯಾಲೋರಿಗಳಿಗಿಂತ ಕಡಿಮೆ ಗುಣಮಟ್ಟದ ಆಹಾರ ಅನುಭೋಗಿಸುವವರು ಬಡವರು ಎನಿಸುತ್ತಾರೆ.[7]

ಬಡತನದ ಈ ಬಗೆಯ ವ್ಯಾಖ್ಯಾನ ಎಷ್ಟು ಸಮರ್ಪಕ ಎಂಬ ಪ್ರಶ್ನೆ ಮೂಡುವುದು ಸಹಜ. ಏಕೆಂದರೆ ಈ ಮಾಪಕದಲ್ಲಿ ಕೇವಲ ಆಹಾರವನ್ನು ಮಾತ್ರ ಪರಿಗಣಿಸಲಾಗಿದೆ. ಜೀವನ ಮಟ್ಟದ ಉತ್ಕೃಷ್ಟತೆಗೆ ಕಾರಣವಾಗುವ ಇತರ ಅನುಭೋಗಗಳನ್ನು, ಶಿಕ್ಷಣ ಮತ್ತು ಆರೋಗ್ಯವನ್ನು ಗಣನೆಗೆ ತೆಗೆದುಕೊಂಡಿಲ್ಲ. ಅರ್ಥಾತ್ ಸಮಗ್ರ ಮಾನವ ಅಭಿವೃದ್ಧಿಗೆ ಅದು ಮಹತ್ವ ನೀಡಿಲ್ಲ. ಸ್ವಸಹಾಯ ಗುಂಪುಗಳು ಈ ಅಂಶವನ್ನು ಆಧಾರವಾಗಿಟ್ಟುಕೊಂಡು ಜನ್ಮತಾಳಿವೆ.

ಸ್ವಸಹಾಯ ಗುಂಪುಗಳ ಮುಖ್ಯ ಉದ್ದೇಶಗಳು ಹೀಗಿವೆ:[8]

೧. ಆರ್ಥಿಕ ಉದ್ದೇಶಗಳು: ಸ್ವಸಹಾಯ ಗುಂಪುಗಳು ಕೆಲವು ಆರ್ಥಿಕ ಉದ್ದೇಶಗಳನ್ನು ಹೊಂದಿರುತ್ತವೆ.

ಆರ್ಥಿಕ ಉದ್ದೇಶಗಳು

- ಒಂದು ಮಿನಿ ಬ್ಯಾಂಕ್ ರೀತಿಯಲ್ಲಿ ಕೆಲಸ ನಿರ್ವಹಿಸುವುದು.
- ಉಳಿತಾಯಕ್ಕೆ ಪ್ರಥಮ ಆದ್ಯತೆ ನೀಡುವುದು.
- ಸಣ್ಣಪುಟ್ಟ ಸಾಲ ಸೌಲಭ್ಯಗಳಿಗೆ ಬ್ಯಾಂಕ್ ಮತ್ತು ಸರಕಾರವನ್ನು ಕಾಯದೆ ತಮ್ಮ ಉಳಿತಾಯಗಳ ಮೂಲಕವೇ ಸಾಲದ ಸ್ವ ಸಹಾಯ ಕಲ್ಪಿಸುವುದು.
- ತಮ್ಮ ಮತ್ತು ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವುದು.
- ಬ್ಯಾಂಕು ಸಂಪರ್ಕ ಹೊಂದುವುದು.
- ಬ್ಯಾಂಕು ಮತ್ತು ಸರಕಾರದಿಂದ ಸಿಗುವ ಸವಲತ್ತುಗಳ ಸದ್ವಿನಿಯೋಗ ಮಾಡಿಕೊಳ್ಳುವುದು.
- ಸದಸ್ಯರಿಗೆ ಬ್ಯಾಂಕುಗಳ ಮೂಲಕ ಬದಲಿ ಸಾಲ ವಿತರಣಾ ಪದ್ಧತಿ ರೂಪಿಸುವುದು
- ಸಾಲಗಳ ಸೂಕ್ತ ಮರುಪಾವತಿ ಮಾಡುವುದು.
- ಸ್ವಸಹಾಯದ ಪರಿಕಲ್ಪನೆ ಮೂಡಿಸುವುದು
- ಆರ್ಥಿಕ ಮಟ್ಟದ ಸುಧಾರಣೆ

೨. **ಸಾಮಾಜಿಕ ಉದ್ದೇಶ:** ಸ್ವಸಹಾಯ ಗುಂಪುಗಳು ಸಾಮಾಜಿಕವಾದ ಹಲವು ಉದ್ದೇಶಗಳನ್ನು ಹೊಂದಿವೆ.

ಸಾಮಾಜಿಕ ಉದ್ದೇಶಗಳು

- ಸಂಘ ಶಕ್ತಿ ಸರ್ವಶಕ್ತಿ ಎಂಬ ತತ್ವವನ್ನು ಅನುಷ್ಠಾನಗೊಳಿಸುವುದು.
- ಸಹಕಾರ ಮನೋಭಾವನೆ ಬಿತ್ತುವುದು.
- ಪರಿಸರ ಸಂರಕ್ಷಣೆ
- ಅಕ್ಷರದ ಅರಿವು ಬೆಳೆಸುವುದು
- ಗ್ರಾಮದ ಸಾಂಸ್ಕೃತಿಕ ರಾಯಭಾರಿಯಾಗುವುದು.
- ಜನರ ಸಾಮಾಜಿಕ ಮಟ್ಟದ ಸುಧಾರಣೆ

೩. **ನೈತಿಕ ಉದ್ದೇಶಗಳು:** ಸ್ವಸಹಾಯ ಸಂಘಗಳ ನೈತಿಕ ಉದ್ದೇಶಗಳು ಮುಖ್ಯವಾಗಿ ಮೂರು

- ಜೀವನ ಮೌಲ್ಯ ಸಂರಕ್ಷಿಸುವುದು
- ಬಡವರ ಉನ್ನತಿ ಸಾಧಿಸುವುದು
- ಒಗ್ಗಟ್ಟಿನ ಶಕ್ತಿಯನ್ನು ಪ್ರಚಾರ ಪಡಿಸುವುದು.

೧.೧.೪ ಸ್ವಸಹಾಯ ಗುಂಪುಗಳ ನಿಯಮ ಮತ್ತು ನಿಬಂಧನೆ

ಸ್ವಸಹಾಯ ಗುಂಪುಗಳು ಸಹಕಾರಿ ತತ್ವದಿಂದ ಪ್ರೇರಿತವಾಗಿ ಹುಟ್ಟಿಕೊಂಡ ಸಂಘಟನೆಗಳಾಗಿವೆ. ಅವುಗಳ ಸಾಮಾನ್ಯ ನಿಯಮ ಮತ್ತು ನಿಬಂಧನೆಗಳು ಹೀಗಿವೆ:

- **ಸದಸ್ಯತ್ವ:** ಒಂದು ಗುಂಪಿನ ಕನಿಷ್ಠ ಸದಸ್ಯತ್ವ ಸಂಖ್ಯೆ ಐದರಿಂದ ಹೆಚ್ಚು ಇರಬೇಕು ಮತ್ತು ಗರಿಷ್ಠ ಸಂಖ್ಯೆ ಇಪ್ಪತ್ತಕ್ಕಿಂತ ಕಡಿಮೆ ಇರಬೇಕು. ಸದಸ್ಯರಾದವರು ಮೊದಲು ಆರು ತಿಂಗಳು ಕಡ್ಡಾಯವಾಗಿ ಸಂಘದಲ್ಲಿರಬೇಕು. ಕನಿಷ್ಠ ಆರು ತಿಂಗಳು ಸದಸ್ಯರಲ್ಲದವರು ಯಾವುದೇ ಸವಲತ್ತು ಪಡೆಯಲು ಅರ್ಹರಾಗುವುದಿಲ್ಲ ಮತ್ತು ಸಂಘದ ನಿಯಮಗಳಿಗೆ ಎಲ್ಲರೂ ಬದ್ಧರಾಗಿರಬೇಕು.

- **ಅರ್ಹತೆ:** ಹದಿನೆಂಟು ವರ್ಷ ತುಂಬಿದವರಿಗೆ ಸ್ವಸಹಾಯ ಸಂಘದ ಸದಸ್ಯರಾಗಲು ಸಂಪೂರ್ಣ ಅರ್ಹತೆ ಇದೆ. ಸದಸ್ಯರು ಶಿಕ್ಷಣ ಪಡೆದಿರಬಹುದು, ಅಥವಾ ಅನಕ್ಷರಸ್ಥರಾಗಿರಬಹುದು. ಸದಸ್ಯರು ವಾರದಲ್ಲಿ ಕನಿಷ್ಠ ೧೦ ರೂಪಾಯಿಯಾದರೂ ಉಳಿತಾಯ ಮಾಡುವ ಆದಾಯ ತರುವ ಕೆಲಸದಲ್ಲಿ ತೊಡಗಿಸಿಕೊಂಡಿರಬೇಕು. ಪ್ರತಿ ಸದಸ್ಯರು ವಾರದಲ್ಲಿ ಕನಿಷ್ಠ ರೂ. ೧೦ ಉಳಿತಾಯ ಮಾಡಲೇಬೇಕು.

- **ಹಾಜರಾತಿ:** ಸಂಘದ ಸದಸ್ಯರು ಕಡ್ಡಾಯವಾಗಿ ವಾರದ ಸಭೆಗೆ ಹಾಜರಾಗಬೇಕು ಮತ್ತು ನಿರ್ದಿಷ್ಟ ಪಡಿಸಿದ ವಾರದ ಉಳಿತಾಯವನ್ನು ಪಾವತಿಸಬೇಕು. ಸಭೆಗೆ ಹಾಜರಾಗಲು ಅನಾನುಕೂಲತೆ ಇದ್ದಲ್ಲಿ ಮುಂಚಿತವಾಗಿ ಸಂಘದ ಅಧ್ಯಕ್ಷನಿಗೆ ತಿಳಿಸಬೇಕು. ಸಂಘದ ಸದಸ್ಯರು ತಪ್ಪದೆ ವಾರದ ಸಭೆಗೆ ಖುದ್ದಾಗಿ ಹಾಜರಾಗತಕ್ಕದ್ದು. ಯಾವುದಾದರೂ ಪ್ರಬಲ ಕಾರಣದಿಂದಾಗಿ ಒಂದು ಅಥವಾ ಎರಡು ಸಭೆಗಳಿಗೆ ಗೈರು ಹಾಜರಾಗಬೇಕಾದ

ಸಂದರ್ಭ ಬಂದಲ್ಲಿ ಮುಂಜಾಗ್ರತೆಯಾಗಿ ಸಂಘದ ಪ್ರತಿನಿಧಿಯಲ್ಲಿ ಅನುಮತಿ ಪಡೆದು ಅಥವಾ ವಿಚಾರ ತಿಳಿಸಿ ಹೋಗತಕ್ಕದ್ದು. ಊರಿನಲ್ಲಿ ಇದ್ದೂ ವಾರದ ಸಭೆಗೆ ಗೈರು ಹಾಜರಾಗುವಂತಿಲ್ಲ. ಅಲ್ಲದೆ ಸಭೆಗೆ ಬೇರೆಯವರನ್ನು ಕಳುಹಿಸುವಂತಿಲ್ಲ. ಸತತವಾಗಿ ೩ – ೪ ಬಾರಿ ಪೂರ್ವಾನುಮತಿ ಇಲ್ಲದೆ ವಾರದ ಸಭೆಗೆ ಗೈರು ಹಾಜರಾದಲ್ಲಿ ಅಂತಹ ಸದಸ್ಯರನ್ನು ಸಂಘದಿಂದ ಹೊರಹಾಕುವ ಅಧಿಕಾರ ಸಂಘದ ಸರ್ವಸದಸ್ಯರಿಗೆ ಇರುತ್ತದೆ. ಸರ್ವಸದಸ್ಯರು ವಾರದ ಸಭೆಯಲ್ಲಿ 'ನಡವಳಿಕೆ'ಯ ಮೂಲಕ ತೀರ್ಮಾನಿಸಿ ಆ ಸದಸ್ಯರನ್ನು ಉಚ್ಛಾಟಿಸಬಹುದಾಗಿದೆ. ಸಭೆಗೆ ಗೈರುಹಾಜರಾದರೆ ಅಥವಾ ತಡವಾಗಿ ಬಂದರೆ ದಂಡವನ್ನು ವಿಧಿಸಬಹುದು.

- **ಸಭೆಗಳು:** ನಿರ್ದಿಷ್ಟ ಪಡಿಸಿದ ಸ್ಥಳ ಮತ್ತು ಸಮಯದಲ್ಲಿ ಗುಂಪುಗಳು ಸಭೆಯನ್ನು ಕಡ್ಡಾಯವಾಗಿ ನಡೆಸಬೇಕು. ಎಲ್ಲಾ ಸದಸ್ಯರು ಸಭೆಯಲ್ಲಿ ಸರಿಯಾದ ಸಮಯದಲ್ಲಿ ಹಾಜರಿರಬೇಕು. ಸಭೆಯಲ್ಲಿ ಸಂಬಂಧಪಡದ ವಿಷಯಗಳನ್ನು ಚರ್ಚಿಸುವಂತಿಲ್ಲ. ಸಭೆಯ ಸಂದರ್ಭದಲ್ಲಿ ಶಿಸ್ತು ಮತ್ತು ನಿಶ್ಯಬ್ದವನ್ನು ಕಾಪಾಡಬೇಕು. ಸಭೆಯ ಮುಕ್ತಾಯ ನಂತರ ಮಾತ್ರ ಸದಸ್ಯರು ಬೇರೆ ಬೇರೆ ಕಡೆಗೆ ಚಲಿಸಬಹುದು.

- **ನಿಯಮಗಳು:** ಪ್ರತಿನಿಧಿಗಳನ್ನು ಆಗಿಂದಾಗ್ಗೆ ಬದಲಾಯಿಸುವ ಹಕ್ಕು ಎಲ್ಲಾ ಸದಸ್ಯರಿಗೆ ಇರುತ್ತದೆ. ಸಂಘದ ಎಲ್ಲಾ ನಿಯಮಾವಳಿಗಳನ್ನು ವಾರದ ಸಭೆಗಳ ಮೂಲಕ ಬದಲಾಯಿಸುವ ಹಕ್ಕು ಸಂಘದ ಸರ್ವ ಸದಸ್ಯರಿಗೆ ಸೇರಿರುತ್ತದೆ. ಪ್ರತಿ ಸಂಘವೂ ಕನಿಷ್ಠ ಉಳಿತಾಯದ ಮೊತ್ತವನ್ನು ನಿರ್ಧರಿಸುತ್ತದೆ. ಪ್ರತಿ ಸದಸ್ಯನೂ ವಾರದ ಕನಿಷ್ಠ ಉಳಿತಾಯದ ಮೊತ್ತವನ್ನು ಕಟ್ಟಲೇಬೇಕು. [9]

೧.೧.೫ ಸ್ವಸಹಾಯ ಸಂಘಗಳ ಪ್ರಮುಖ ಕಾರ್ಯಗಳು

ಸ್ವಸಹಾಯ ಸಂಘಗಳು ಮೂರು ಪ್ರಮುಖ ಕಾರ್ಯಗಳನ್ನು ಮಾಡುತ್ತವೆ:

- **ಉಳಿತಾಯದ ಸಂಚಯನ:** ಸ್ವಸಹಾಯ ಗುಂಪುಗಳ ಸದಸ್ಯರು ವಾರಕ್ಕೆ ಕನಿಷ್ಠ ೧೦ ರೂಪಾಯಿ ಉಳಿತಾಯ ಮಾಡಲೇಬೇಕು. ಸಾಧ್ಯ ಇರುವವರು ಹೆಚ್ಚು ಉಳಿತಾಯ ಮಾಡಬಹುದು. ಈ ಉಳಿತಾಯಗಳನ್ನು ಒಂದು ಬ್ಯಾಂಕು ಖಾತೆಯಲ್ಲಿ ಠೇವಣಿಯಾಗಿ ಇಡಲಾಗುತ್ತದೆ. ಬಹುತೇಕವಾಗಿ ಗುಂಪಿನ ಮುಖ್ಯಸ್ಥ ಈ ಕೆಲಸವನ್ನು ಮಾಡುತ್ತಾನೆ.

ಸದಸ್ಯರುಗಳ ಮನೆಯಲ್ಲಿ ಸಭೆ ನಡೆದರೆ ಮನೆಯ ಯಜಮಾನ ಹಣವನ್ನು ಸಂಗ್ರಹಿಸಿ ಬ್ಯಾಂಕು ಖಾತೆಗೆ ಜಮೆ ಮಾಡುತ್ತಾನೆ.

- **ಕಲ್ಯಾಣ ನಿಧಿಯ ಸಂಗ್ರಹ:** ಸ್ವಸಹಾಯ ಸಂಘವು ಸದಸ್ಯರಿಗೆ ಹಣಕಾಸಿನ ಸಹಾಯ ಒದಗಿಸಲು ಕಲ್ಯಾಣ ನಿಧಿಯೊಂದನ್ನು ರೂಪಿಸುತ್ತದೆ. ತುರ್ತು ಪರಿಸ್ಥಿತಿಗಳಲ್ಲಿ ಸದಸ್ಯರಿಗೆ ಸ್ವಸಹಾಯ ಗುಂಪುಗಳು ವಿಮಾ ರಕ್ಷಣೆಯನ್ನು ವೈದ್ಯಕೀಯ ಉದ್ದೇಶಗಳಿಗಾಗಿ ಅಥವಾ ನೈಸರ್ಗಿಕ ಪ್ರಕೋಪಗಳ ಸಂದರ್ಭದಲ್ಲಿ ಸದಸ್ಯರಿಗೆ ಈ ನಿಧಿಯಿಂದ ರೂಪಾಯಿ ೨೦೦೦ ಪರಿಹಾರ ಧನ ನೀಡಬಹುದು. ಗುಂಪಿನ ಸದಸ್ಯನು ನಿಧನನಾದಾಗ ಕಲ್ಯಾಣ ನಿಧಿಯಿಂದ ರೂ. ೫೦೦೦ ಪರಿಹಾರವನ್ನು ಕುಟುಂಬಕ್ಕೆ ನೀಡಲಾಗುತ್ತದೆ.

- **ಸಣ್ಣ ಆರ್ಥಿಕ ಕಾರ್ಯಕ್ರಮ:** ಸ್ವಸಹಾಯ ಸಂಘಗಳು ಪ್ರಗತಿನಿಧಿ ಯೋಜನೆ ಎಂಬ ಸಣ್ಣ ಆರ್ಥಿಕ ಕಾರ್ಯಕ್ರಮ ಒಂದನ್ನು ಅನುಷ್ಠಾನಗೊಳಿಸಿವೆ. ಈ ಯೋಜನೆಯು ಪ್ರಕಾರ ಸ್ಥಾಪನೆಯಾಗಿ ಆರು ತಿಂಗಳ ಬಳಿಕ ಸ್ವಸಹಾಯ ಸಂಘಗಳು ರೂ ೫೦,೦೦೦ ವೈಯಕ್ತಿಕ ಸಾಲ ಪಡೆಯಲು ಅರ್ಹವಾಗುತ್ತವೆ. ಅಗತ್ಯವಿದ್ದರೆ ಅದಕ್ಕಿಂತ ಹೆಚ್ಚು ಸಾಲವನ್ನು ಪಡೆಯುವ ಅವಕಾಶವಿದೆ. ಆದರೆ ಆ ಯೋಜನೆಯ ಫಲ ದೊರೆಯಲು ಸ್ವಸಹಾಯ ಸಂಘಗಳ ಕನಿಷ್ಠ ಉಳಿತಾಯ ರೂ. ೨೦೦೦ ದಾಟಿರಬೇಕು.

೧.೧.೬ ಸ್ವಸಹಾಯ ಸಂಘ ಮತ್ತು ಹನಿ ಹಣಕಾಸು

ಭಾರತ ದೇಶದಲ್ಲಿ ಭೂರಹಿತ ಕೃಷಿ ಕಾರ್ಮಿಕರು, ಗ್ರಾಮೀಣ ಕಸುಬುದಾರರು, ಮಹಿಳೆಯರು, ಸಣ್ಣ ಉದ್ದಿಮೆದಾರರು ಮತ್ತು ಸಣ್ಣ ಮತ್ತು ಅತಿ ಸಣ್ಣ ರೈತರು ಬಹುಮತೀಯರಾಗಿದ್ದಾರೆ. ಇವರಲ್ಲಿ ಬಹುತೇಕರು ಬಡತನದ ರೇಖೆಯ ಕೆಳಗಿರುವುದರಿಂದ ಯಾವುದೇ ಹಣಕಾಸು ಸಂಸ್ಥೆ ಇವರಿಗೆ ಸಾಲ ನೀಡಲು ಹಿಂದೇಟು ಹಾಕುತ್ತದೆ. ಇದರಿಂದಾಗಿ ಹನಿ ಹಣಕಾಸು ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿದೆ. ಭಾರತದ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡಿನ ಒತ್ತಾಸೆಯಿಂದ ಹನಿ ಹಣಕಾಸು ವ್ಯವಸ್ಥೆ ಈಗ ಜನಪ್ರಿಯತೆ ಪಡೆದಿದೆ.

೧೯೯೨ ರ ಫೆಬ್ರವರಿಯಲ್ಲಿ ನಬಾರ್ಡ್ ಸಂಸ್ಥೆಯು ಸ್ವಸಹಾಯ ಸಂಘಗಳನ್ನು ಬ್ಯಾಂಕುಗಳೊಡನೆ ಸಂಪರ್ಕಿಸುವ ಯೋಜನೆಯೊಂದನ್ನು ರೂಪಿಸಿತು. ಅದು ಸ್ವಸಹಾಯ ಸಂಘಗಳಿಗೆ ಸಾಲ ನೀಡುವ ಬ್ಯಾಂಕುಗಳಿಗೆ ಶೇಕಡಾ ೧೦೦ ರಷ್ಟು ಹಣಕಾಸು ಪೂರೈಕೆ

ಮಾಡುತ್ತದೆ. ಈ ಹಣಕಾಸು ವ್ಯವಸ್ಥೆಯನ್ನು ರಿಯಾಯಿತಿ ಬಡ್ಡಿದರದಲ್ಲಿ ಮಾಡಲಾಗುತ್ತದೆ. ಅಲ್ಲದೆ ಸ್ವಸಹಾಯ ಗುಂಪು ಮತ್ತು ವಾಣಿಜ್ಯ ಬ್ಯಾಂಕುಗಳ ನಡುವೆ ಸಂಪರ್ಕ ಸಾಧನೆಗೆ ಒಂದು ಕಾರ್ಯಕ್ರಮವನ್ನು ಅದು ರೂಪಿಸಿದೆ. ಈ ಕಾರ್ಯಕ್ರಮದನ್ವಯ ಮೊದಲನೆ ಮಾದರಿಯ ಸರಕಾರೇತರ ಸಂಸ್ಥೆಗಳ ಮಧ್ಯ ಪ್ರವೇಶ ಇಲ್ಲದೆ ವಾಣಿಜ್ಯ ಬ್ಯಾಂಕುಗಳು ನೇರವಾಗಿ ಸ್ವಸಹಾಯ ಗುಂಪುಗಳೊಡನೆ ಸಂಪರ್ಕ ಹೊಂದಿರುತ್ತವೆ. ಎರಡನೆ ಮಾದರಿಯಲ್ಲಿ ಬ್ಯಾಂಕುಗಳು ಸ್ವಸಹಾಯ ಗುಂಪುಗಳಿಗೆ ಹಣಕಾಸು ನೀಡುತ್ತವೆ ಮತ್ತು ಸರಕಾರೇತರ ಸಂಸ್ಥೆಗಳು ಸ್ವಸಹಾಯ ವೃದ್ಧಿಯ ಸಂಘಟನೆಯಾಗಿ (SHG Promoting Institution) ಕೆಲಸ ನಿರ್ವಹಿಸುತ್ತವೆ. ಮೂರನೆಯ ಮಾದರಿಯಲ್ಲಿ ಸರಕಾರೇತರ ಸಂಸ್ಥೆಗಳು ಸ್ವಸಹಾಯ ಸಂಘ ಮತ್ತು ಬ್ಯಾಂಕುಗಳ ನಡುವೆ ಹಣಕಾಸು ದಲ್ಲಾಳಿಯಾಗಿ ಕಾರ್ಯನಿರ್ವಹಿಸುತ್ತವೆ ಮತ್ತು ಸ್ವಸಹಾಯ ವೃದ್ಧಿಯ ಸಂಸ್ಥೆಯಾಗಿ ಕೆಲಸ ಮಾಡುತ್ತವೆ.

ಸ್ವಸಹಾಯ ಸಂಘಗಳು ಭಾರತದ ಬಡವರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅತ್ಯಗತ್ಯ ಎನ್ನುವುದನ್ನು ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ಅರಿತುಕೊಂಡಿದೆ. ಆದುದರಿಂದ ಹನಿ ಹಣಕಾಸು ವ್ಯವಸ್ಥೆ ಇಂದು ತೃತೀಯ ಜಗತ್ತಿನಲ್ಲಿ ಬಡವರ ಪಾಲಿಗೆ ಹೊಸ ಆಶಾಕಿರಣವಾಗಿದೆ.

೧.೨ ಭಾರತದಲ್ಲಿ ಸ್ವಸಹಾಯ ಸಂಘಗಳು

೧.೨.೧ ಬೆಳವಣಿಗೆ

ಅಯಂ ನಿಜಾ ಪರೋವೇತಾ

ಗಣನಾಂ ಲಘು ಚೇತಸಾಂ

ಉದಾರ ಚರಿತಾನಾಂತು

ವಸುಧೈವ ಕುಟುಂಬಕಂ

ಇದು ನಮ್ಮ ಪುರಾತನರು ನಂಬಿಕೊಂಡಿದ್ದ ಜೀವನ ಮೌಲ್ಯ. ಎಲ್ಲಾ ಜನರನ್ನು ಸಮಾನವಾಗಿ ಕಾಣಬೇಕು ಎನ್ನುವುದು ಈ ಸೂಕ್ತಿಯ ತಿರುಳು. ಪರೋಪಕಾರಾಯ ಪುಣ್ಯಾಯ, ಪಾಪಾಯ ಪರಪೀಡನಂ ಮತ್ತು ಲೋಕಾ ಸಮಸ್ತ ಸುಖಿನೋ ಭವಂತು ಎಂಬ ಆರ್ಯೋಕ್ತಿಗಳು ಸಾಮುದಾಯಿಕ ಅಭಿವೃದ್ಧಿಯ ಉದ್ದೇಶದಿಂದ ರೂಪುಗೊಂಡವುಗಳು.

ಚರಿತ್ರೆಯ ಓಟದಲ್ಲಿ ಎಲ್ಲೋ ಒಂದು ಕಡೆ ಗಟ್ಟಿಯಾಗಿ ನೆಲೆಗೊಂಡ ವರ್ಣ ಮತು ಜಾತಿ ಪರಿಕಲ್ಪನೆಯಿಂದ ಭಾರತದಲ್ಲಿ ಆರ್ಥಿಕ ಜೀವನಕ್ಕಿಂತ ಸಾಮಾಜಿಕ ಜೀವನಕ್ಕೆ ಹೆಚ್ಚಿನ ಮಹತ್ವ ಲಭ್ಯವಾಯಿತು. ಸಾಮಾಜಿಕ ಜೀವನ ಎಂದರೆ ಒಟ್ಟಾಗಿ ತಮ್ಮ ಅಭಿವೃದ್ಧಿಯನ್ನು ಸಾಧಿಸುವುದು ಎಂಬ ಅರ್ಥವಲ್ಲ. ಹುಟ್ಟಿನ ಕಾರಣದ ಶ್ರೇಷ್ಠತೆ ಮತ್ತು ಕನಿಷ್ಠತೆಗಳಿಗನುಗುಣವಾಗಿ ಪೂರ್ವ ನಿಗದಿತ ಜೀವನಕ್ರಮವನ್ನು ಚಾಚೂ ತಪ್ಪದೆ ಪರಿಪಾಲಿಸಿಕೊಂಡು ಬರುವುದು. ಇದನ್ನು ಸಂಪ್ರದಾಯವೆಂದು ವೈಭವೀಕರಿಸಿ ಆರ್ಥಿಕ ಪ್ರಗತಿಗೆ ಮಹತ್ವವನ್ನೇ ನೀಡದ ಕಾರಣ ಭಾರತ ಬಹಳ ಹಿಂದುಳಿದ ಒಂದು ಆರ್ಥಿಕತೆಯಾಗಿ ವಿಶ್ವರಂಗದಲ್ಲಿ ಗುರುತಿಸಿಕೊಳ್ಳಬೇಕಾದ ದುರ್ಗತಿ ಬಂದಿದೆ.

೧೯೮೦ ರ ದಶಕದ ಉದಾರವಾದೀ ಚಿಂತನೆಗಳು ಅಭಿವೃದ್ಧಿ ಪರಿಕಲ್ಪನೆಗೆ ಹೆಚ್ಚಿನ ಮಹತ್ವ ನೀಡಿದವು. ವಿಶ್ವ ಸಂಸ್ಥೆಯು ತಲಾದಾಯ ಒಂದನ್ನು ಮಾತ್ರವೇ ಅಭಿವೃದ್ಧಿಯ ಸೂಚಕವಾಗಿ ಬಳಸದೆ ಶಿಕ್ಷಣ ಮತ್ತು ಆರೋಗ್ಯವನ್ನು ಮಾನದಂಡವೆಂದು ಪರಿಗಣಿಸಿದ್ದು, ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಯ ಗತಿಯನ್ನು ಬದಲಾಯಿಸಿತು. ೧೯೯೦ ರ ದಶಕದಲ್ಲಿ ಭಾರತದಲ್ಲಿ ಜಾಗತೀಕರಣದ ಸಂದರ್ಭದ ಬೃಹತ್ ಹೂಡಿಕೆಗೆ ಪರ್ಯಾಯವಾಗಿ ಹನಿ ಹಣಕಾಸು ವ್ಯವಸ್ಥೆ ರೂಪುಗೊಂಡು ಸ್ವಸಹಾಯ ಗುಂಪುಗಳ ಸಾಂಘಿಕ ಯಶಸ್ಸಿಗೆ ಅದು ಕಾರಣವಾಯಿತು.

ಭಾರತದಲ್ಲಿ ಸ್ವಸಹಾಯ ಚಳುವಳಿ ೧೯೮೦ ರ ದಶಕದಲ್ಲಿ ಆರಂಭವಾಯಿತು. ನಬಾರ್ಡ್ ಸಂಸ್ಥೆಯು ಕ್ರಿಯಾಶೀಲ ಸಂಶೋಧನೆಯ ಮೂಲಕ ಸ್ವಸಹಾಯ ಗುಂಪುಗಳ ಉಳಿತಾಯ ಮತ್ತು ಪತ್ತಿನ ವಿಷಯಕ್ಕೆ ಸಂಬಂಧಪಟ್ಟಂತೆ ೧೯೮೬-೮೭ ರಲ್ಲಿ ಬೆಂಬಲವನ್ನು ಘೋಷಿಸಿತು. ಅದು ದೇಶದಲ್ಲಿ ಸ್ವಸಹಾಯ ಆರಂಭದ ಆಂದೋಲನವೆಂದು ಗುರುತಿಸಲ್ಪಟ್ಟಿದೆ. [10]

ನಬಾರ್ಡ್ ಸಂಸ್ಥೆಯ ಮುತುವರ್ಜಿಯಿಂದಾಗಿ ೧೯೯೧-೯೨ ರಲ್ಲಿ ವಾಣಿಜ್ಯ ಬ್ಯಾಂಕುಗಳು ಸ್ವಸಹಾಯ ಸಂಘಗಳಿಗೆ ಸಾಲ ನೀಡಲು ಆರಂಭಿಸಿದವು. ಆ ಬಳಿಕದ ದಿನಗಳಲ್ಲಿ ಮೈಸೂರು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸರ್ವ ಸೇವಾ ಕೃಷಿ ಸೇವೆಗಳ ಒಕ್ಕೂಟ, ಗ್ರಾಮೀಣ ಜನರ ಶಿಕ್ಷಣ ಆಂದೋಳನ, ಅಭಿವೃದ್ಧಿ ಯೋಜನೆಗೆ ವೃತ್ತಿಪರ

ಸಹಾಯ, ಸಾಮುದಾಯಿಕ ಅಭಿವೃದ್ಧಿ ಸಂಘ ಇತ್ಯಾದಿಗಳಿಂದಾಗಿ ಭಾರತದಲ್ಲಿ ಸ್ವಸಹಾಯ ಸಂಘಗಳು ಬೆಳವಣಿಗೆ ಹೊಂದಿದವು.

೧೯೯೨-೯೩ ರಲ್ಲಿ ದೇಶದಲ್ಲಿ ಒಟ್ಟು ೨೫೫ ಸ್ವಸಹಾಯ ಗುಂಪುಗಳು ಕಾರ್ಯಪ್ರವೃತ್ತವಾಗಿದ್ದವು.[11] ೨೦೦೨-೦೩ ರಲ್ಲಿ ಅವುಗಳ ಒಟ್ಟು ಸಂಖ್ಯೆ ಸುಮಾರು ೪,೬೨,೦೦೦ ದಷ್ಟಿತ್ತು.[12] ೨೦೦೬ ರಲ್ಲಿ ದೇಶದಾದ್ಯಂತ ೨೦ ಲಕ್ಷಕ್ಕಿಂತಲೂ ಅಧಿಕ ಸ್ವಸಹಾಯ ಸಂಘಗಳು ಕೆಲಸ ಮಾಡುತ್ತಿವೆ ಎಂದು ವರದಿ ಒಂದು ತಿಳಿಸುತ್ತದೆ.[13] ಇವು ಸುಮಾರು ೨.೪ ಕೋಟಿ ಕುಟುಂಬಗಳಿಗೆ ಸಾಂಸ್ಥಿಕ ಆಧಾರವನ್ನು ನೀಡುತ್ತಿವೆ. ನಬಾರ್ಡ್ ಮತ್ತು ಸರಕಾರೇತರ ಸಂಸ್ಥೆಗಳ ಬೆಂಬಲದಿಂದ ವಾಣಿಜ್ಯ ಬ್ಯಾಂಕುಗಳು ಸ್ವಸಹಾಯ ಸಂಘಗಳಿಗೆ ಆರ್ಥಿಕ ನೆರವನ್ನು ಒದಗಿಸುತ್ತದೆ.


೧.೨.೨ ಸ್ವಸಹಾಯ ಗುಂಪುಗಳ ವಿಧಗಳು

ಭಾರತ ಸ್ವಸಹಾಯ ಗುಂಪುಗಳಲ್ಲಿ ಎರಡು ವಿಧಗಳಿವೆ.

೧. ಸರಕಾರದ ಪ್ರಾಯೋಜಿತ ಸ್ವಸಹಾಯ ಸಂಘಗಳು

೨. ಸರಕಾರೇತರ ಸಂಸ್ಥೆಗಳಿಂದ ಪ್ರಾಯೋಜಿತ ಸ್ವಸಹಾಯ ಗುಂಪುಗಳು


ಸರಕಾರಿ ಸ್ವಸಹಾಯ ಸಂಘದ ಸ್ವರೂಪ ಹೀಗಿರುತ್ತದೆ.



ನಕ್ಷೆ ೧.೩ ಸರಕಾರಿ ಸ್ವಸಹಾಯ ಗುಂಪುಗಳ ಸ್ವರೂಪ

ಸರಕಾರಿ ಸ್ವಸಹಾಯ ಸಂಘಗಳು ಸರಕಾರದ ನಿರುದ್ಯೋಗ ನಿವಾರಣಾ ಯೋಜನೆಯನ್ವಯ ರೂಪುಗೊಂಡಿರುತ್ತವೆ. ಅವುಗಳಿಗೆ ಒಬ್ಬ ಯೋಜನಾಧಿಕಾರಿ ಮುಖ್ಯಸ್ಥನಾಗಿರುತ್ತಾನೆ. ಅವನ ಕೈಕೆಳಗೆ ಸಮುದಾಯ ಸಂಘಟಕ ಕಾರ್ಯನಿರ್ವಹಿಸುತ್ತಾನೆ. ಸಮುದಾಯ ಸಂಘಟಕನು ನೇರವಾಗಿ ಸ್ವಸಹಾಯ ಸಂಘದ ಪದಾಧಿಕಾರಿಗಳೊಡನೆ ಸಂಪರ್ಕ ಹೊಂದಿರುತ್ತಾನೆ. ಸ್ವಸಹಾಯ ಗುಂಪಿನ ಪ್ರತಿನಿಧಿಗಳ ಮೂಲಕ ಉಳಿದ ಸದಸ್ಯರಿಗೆ ಸರಕಾರದ ಯೋಜನೆಗಳ ಮಾಹಿತಿ ದೊರೆಯುತ್ತದೆ.

ಸರಕಾರೇತರ ಸ್ವಸಹಾಯ ಗುಂಪಿನ ಮಾದರಿ ಸ್ವರೂಪ ಹೀಗಿರುತ್ತದೆ.



ನಕ್ಷೆ ೧.೪ ಸರಕಾರೇತರ ಸಂಘಟನೆಗಳ ಸ್ವರೂಪ

ಸರಕಾರೇತರ ಸ್ವಸಹಾಯ ಸಂಘಗಳು ಒಬ್ಬ ಯೋಜನಾಧಿಕಾರಿಯ ನಿರ್ವಹಣೆಯಲ್ಲಿ ಕಾರ್ಯವೆಸಗುತ್ತದೆ. ಅವನ ಕೈಕೆಳಗೆ ಓರ್ವ ಯೋಜನಾ ಸಮನ್ವಯಕಾರನಿರುತ್ತಾನೆ. ಅವನಿಗೆ ಯೋಜನಾ ಮೇಲ್ವಿಚಾರಕ ಸಹಾಯ ಮಾಡುತ್ತಾನೆ. ಅವನ ಕೆಳಗೆ ಕ್ಷೇತ್ರ ಕಾರ್ಯಕರ್ತ ಕಾರ್ಯನಿರ್ವಹಿಸುತ್ತಾನೆ. ಅವನು ಸಂಘದ ಪದಾಧಿಕಾರಿಗಳೊಡನೆ ನೇರ ಸಂಪರ್ಕ

ಇಟ್ಟುಕೊಂಡಿರುತ್ತಾನೆ. ಸಂಘದ ಪದಾಧಿಕಾರಿಗಳು ಸಂಘದ ಸದಸ್ಯರಿಗೆ ಮಾಹಿತಿ ರವಾನೆ ಮಾಡುತ್ತಾರೆ.[14]

ಉದ್ದೇಶ, ಸದಸ್ಯತ್ವದ ಅರ್ಹತೆ ಮತ್ತು ನಿಯಮಾವಳಿಗಳಲ್ಲಿ ಸರಕಾರಿ ಮತ್ತು ಸರಕಾರೇತರ ಸ್ವಸಹಾಯ ಗುಂಪುಗಳ ನಡುವೆ ವಿಶೇಷ ವ್ಯತ್ಯಾಸವಿರುವುದಿಲ್ಲ. ಸ್ವಸಹಾಯ ಗುಂಪುಗಳಿಗೆ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳು ಸರಕಾರದ ನಿರುದ್ಯೋಗ ಮತ್ತು ಬಡತನ ನಿರ್ಮಾಣ ಯೋಜನೆಗಳ ಪ್ರಯೋಜನ ದೊರಕುವಂತೆ ಮಾಡುತ್ತವೆ. ಆದುದರಿಂದ ಅವುಗಳ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬರುವುದಿಲ್ಲ.

ಆದರೆ ಸರಕಾರಿ ಸ್ವಸಹಾಯ ಸಂಘಗಳಲ್ಲಿ ಹೆಚ್ಚಿನ ಉತ್ಸಾಹವಿರುವುದಿಲ್ಲ. ಸರಕಾರೇತರ ಸ್ವಸಹಾಯ ಗುಂಪುಗಳು ತಮ್ಮ ಉದ್ದೇಶ ಸಾಧನೆಗೆ ತಮ್ಮನ್ನು ಉತ್ಸುಕತೆಯಿಂದ ತೊಡಗಿಸಿಕೊಳ್ಳುತ್ತಿವೆ.

ಭಾರತ ಸರಕಾರವು ಮಹಿಳಾಭಿವೃದ್ಧಿ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಸ್ವಸಹಾಯ ಆಂದೋಳನಕ್ಕೆ ವಿಶೇಷ ಪ್ರಾಶಸ್ತ್ಯ ನೀಡುತ್ತಿದೆ. ೧೯೯೮ ರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯ ಶಿಶು ಕಲ್ಯಾಣ ವಿಭಾಗವು ಮಹಿಳೆಯರ ಸ್ವಾವಲಂಬನೆಗಾಗಿ ಮಹಿಳಾ ಸ್ವಸಹಾಯ ಗುಂಪುಗಳ ರಚನೆಗೆ ಯೋಜನೆಗಳನ್ನು ರೂಪಿಸಿತು.

ಮಹಿಳಾ ಸಬಲೀಕರಣದ ಯೋಜನೆಗಳು: ಮಹಿಳಾ ಸಬಲೀಕರಣಕ್ಕಾಗಿ ಭಾರತ ಸರಕಾರ ಕೈಗೊಂಡ ಯೋಜನೆಗಳಲ್ಲಿ ರಾಷ್ಟ್ರೀಯ ಮಹಿಳಾ ಕೋಶ (RMK) ರಚನೆ ಅತ್ಯಂತ ಪ್ರಮುಖವಾದುದು. ಅದು ೧೯೯೩ ರ ಮಾರ್ಚ್ ೩೦ ರಂದು ಒಂದು ನೋಂದಾಯಿತ ಸಂಘವಾಗಿ ರೂಪುಗೊಂಡಿತು. ಬಡ ಮಹಿಳೆಯರ ಆದಾಯ ಹೆಚ್ಚಿಸುವ ಉದ್ದೇಶದಿಂದ ಅವರಿಗೆ ಹನಿ ಹಣಕಾಸು ನೆರವು ನೀಡುವುದು ಅದರ ಮುಖ್ಯ ಉದ್ದೇಶವಾಗಿದೆ. ರಾಷ್ಟ್ರೀಯ ಮಹಿಳಾ ಕೋಶವು ಫಲಾನುಭವಿಗಳ ಆಯ್ಕೆಗೆ ಸರಕಾರೇತರ ಸಂಸ್ಥೆಗಳನ್ನು ಬಳಸಿಕೊಳ್ಳುತ್ತದೆ.

೧೯೯೫ ರ ಆಗೋಸ್ಟ್ ೨೦ ರಂದು ಇಂದಿರಾ ಮಹಿಳಾ ಯೋಜನೆ (IMY) ರೂಪುಗೊಂಡಿತು. ತಳ ಮಟ್ಟದಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಸಾಲದ ಅಗತ್ಯ ಇರುವವರನ್ನು ಗುರುತಿಸುವುದು, ಸಾಲ

ನೀಡುವುದು ಮತ್ತು ಸಾಲವನ್ನು ಮರು ಪಡೆಯುವುದು ಈ ಯೋಜನೆಯ ಮೂರು ಮುಖ್ಯ ಅಂಶಗಳಾಗಿವೆ.

ಸ್ವ ಉದ್ಯೋಗ ನಿರ್ಮಾಣವು ಸ್ವಸಹಾಯ ಗುಂಪುಗಳ ರಚನೆಯ ಸದುದ್ದೇಶಗಳಲ್ಲಿ ಒಂದು. ಉದ್ಯೋಗವಿಲ್ಲದ ಮಹಿಳೆಯರು ವರದಕ್ಷಿಣೆಯಂತಹ, ವಧುದಹನದಂತಹ, ಕಿರುಕುಳಕ್ಕೆ ಒಳಗಾಗುವುದನ್ನು ವಿಷಾದದಿಂದ ಗಮನಿಸುತ್ತಿರುವ ಸರಕಾರವು ಸ್ವಸಹಾಯ ಗುಂಪುಗಳು ಮಹಿಳೆಯರಿಗೆ ಸ್ವ ಉದ್ಯೋಗ ತರಬೇತಿ ನೀಡಬೇಕೆಂದು ಬಯಸುತ್ತದೆ. ಅದಕ್ಕಾಗಿ ಉದ್ಯೋಗ ಕಾರ್ಯಕ್ರಮಕ್ಕೆ ತರಬೇತಿ ಆಧಾರ (STEP) ಮತ್ತು ಗ್ರಾಮೀಣ ಪ್ರದೇಶದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (DWACRA) ಯೋಜನೆಗಳು ಮಹಿಳೆಯರಿಗೆ ಸ್ವದ್ಯೋಗ ತರಬೇತಿಯನ್ನು ನೀಡುತ್ತವೆ. ಅವರ ಆರ್ಥಿಕ ಸಾಮರ್ಥ್ಯ ಹೆಚ್ಚಾಗುವಂತೆ ಪ್ರಯತ್ನಿಸುತ್ತಿವೆ.

೨೦೦೧ ರ ಜುಲೈ ೧೩ ರಂದು ಇಂದಿರಾ ಮಹಿಳಾ ಯೋಜನೆ ಮತ್ತು ಮಹಿಳಾ ಸಮೃದ್ಧಿ ಯೋಜನೆಗಳನ್ನು ಒಗ್ಗೂಡಿಸಿ ಸ್ವಯಂಸಿದ್ಧ ಯೋಜನೆಯನ್ನು ರೂಪಿಸಲಾಯಿತು. ಜಾಗೃತಿ ಮತ್ತು ಆರ್ಥಿಕ ಸಾಮರ್ಥ್ಯ ವೃದ್ಧಿಯಿಂದ ಮಹಿಳಾ ಸಬಲೀಕರಣವನ್ನು ಸಾಧಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಸ್ವಸಹಾಯ ಗುಂಪುಗಳು ೧೯೫೯ ರ ಸಹಕಾರಿ ಸಂಘಗಳ ಕಾಯಿದೆಯ ಪ್ರಕಾರ ಪರಸ್ಪರ ಸಹಕಾರದಿಂದ ವೈಯಕ್ತಿಕ ಅಭಿವೃದ್ಧಿ ಸಲ್ಲಿಸಬೇಕೆಂಬುದು ಸರಕಾರದ ಉದ್ದೇಶವಾಗಿದೆ.

ಪ್ರಸಕ್ತ ಅಧ್ಯಯನವು ದ.ಕ. ಜಿಲ್ಲೆಯ ಬಂಟ್ವಾಳ ತಾಲೂಕಿನ ಎರಡು ಗ್ರಾಮಗಳ ನಿರ್ದಿಷ್ಟ ಸ್ವಸಹಾಯ ಗುಂಪುಗಳ ಸಾಧನೆ ಮತ್ತು ವೈಫಲ್ಯಗಳನ್ನು ಕ್ಷೇತ್ರಾಧ್ಯಯನದ ಮೂಲಕ ವಿಶ್ಲೇಷಿಸಲು ಪ್ರಯತ್ನಿಸುತ್ತದೆ. ಈ ಅಧ್ಯಯನವನ್ನು ಪ್ರಾತಿನಿಧಿಕ ಎಂದು ಪರಿಗಣಿಸಿ ಸಮಗ್ರ ಮಟ್ಟದಲ್ಲಿ ವಿಶ್ಲೇಷಣೆಗೆ ಬಳಸಿಕೊಳ್ಳಬಹುದಾಗಿದೆ.

ಉಲ್ಲೇಖಗಳು

1. ರುದಾರ್ ದತ್ ಮತ್ತು ಸುಂದರಂ: ಭಾರತದ ಆರ್ಥಿಕತೆ – ಎಸ್. ಚಾಂದ್ ಮತ್ತು ಕಂಪೆನಿ – ೨೦೦೭ ಪು ೦೭

2. ಡಾ। ಪ್ರಭಾಕರ ಶಿಶಿಲ - ಆರ್ಥಿಕ ಚಿಂತನ ವಾಹಿನಿ - ಮಂಗಳ ಪ್ರಕಾಶನ - ೨೦೦೨ ಪು. ೪೧೦
3. ಎರ್ರಿ ಸ್ವಾಮಿ ಎನ್.ಟಿ. - ಸ್ವಸಹಾಯ ಸಂಘಗಳು ಒಂದು ಪರಿಕಲ್ಪನೆ - ಬದುಕು ಸ್ವಯಂ ಸೇವಾ ಸಂಸ್ಥೆ – ಜಗಳೂರು – ೨೦೦೦ – ಪು. ೫
4. Madhura M.R –Comparitive Study of SHG functions under Govt and NGO - Unpublished – ೨೦೦೬ –ಪು ೨
5. ಆದೇ, ಪು. ೨
6. ಎರ್ರಿಸ್ವಾಮಿ – ೨೦೦೦ – ಪು. ೮
7. ಡಾ। ಪ್ರಭಾಕರ ಶಿಶಿಲ ಮತ್ತು ಪ್ರೊ। ಕುಮಾರಸ್ವಾಮಿ - ಭಾರತದ ಆರ್ಥಿಕ ಅಭಿವೃದ್ಧಿ – ಮಂಗಳ ಪ್ರಕಾಶ – ೨೦೦೫ ಪು. ೧೦೧
8. ಎರ್ರಿ ಸ್ವಾಮಿ ಎನ್.ಟಿ. – ೨೦೦೦ – ಪು ೮–೯
9. ಆದೇ ಪುಟ ಸಂಖ್ಯೆ ೧೦
10. Subhyasachi Das – Self Help Groups and Minor Credit, Kurukshethra, 2003, VOL – 51, No- 10, PP 25-27.
11. ಆಶಾಲತಾ ಸುವರ್ಣ - ಸ್ವಸಹಾಯ ಸಂಘಗಳು ಆರ್ಥಿಕ ಸ್ವಾವಲಂಬನೆಗೊಂದು ಯಶಸ್ವಿ ಪ್ರಯೋಗ – ರಾಣಿ ಅಬ್ಬಕ್ಕ ಪ್ರಕಾಶನ - ಬಂಟ್ವಾಳ – ೨೦೦೬ ಪುಟ ೨೩೨
12. Subhyasachi Das – Self Help Groups and Minor Credit, Kurukshethra, 2003, VOL – 51, No- 10, PP 28.
13. Thingalaya N.K., Micro Finance, Justice K.S Hegde Foundation, 2006.
14. Madhura M.R – 2006 Opt. Cit PP 23-24.

ಅಧ್ಯಾಯ ೨

ಅಧ್ಯಯನ ಮತ್ತು ಸಂಶೋಧನಾ ವಿಧಾನ

೨.೧ ಅಧ್ಯಯನ ವಿಧಾನ

೨.೧.೧ ಸಮಸ್ಯೆಯ ವಿಶ್ಲೇಷಣೆ

೨.೧.೨ ಹಿಂದಿನ ಅಧ್ಯಯನಗಳ ಸಮೀಕ್ಷೆ

೨.೧.೩ ಅಧ್ಯಯನಕ್ಕೆ ಕಾರಣ ಮತ್ತು ಪ್ರೇರಣೆ

೨.೧.೪ ಅಧ್ಯಯನದ ಉದ್ದೇಶಗಳು

೨.೧.೫ ಅಧ್ಯಯನದ ಪೂರ್ವ ಕಲ್ಪನೆಗಳು

೨. ಅಧ್ಯಯನ ವಿನ್ಯಾಸ

೨.೨.೧ ಅಧ್ಯಯನ ಕ್ಷೇತ್ರ

೨.೨.೨ ಅಧ್ಯಯನದ ಮಾದರಿಯ ಗಾತ್ರ

೨.೨.೩ ಆಯ್ಕೆಯ ವಿಧಾನ

೨.೨.೪ ಕ್ಷೇತ್ರಾಧ್ಯಯನದ ವಿಧಾನ

೨.೨.೫ ದತ್ತಾಂಶ ವಿಶ್ಲೇಷಣೆ

೨. ಅಧ್ಯಯನ ಮತ್ತು ಸಂಶೋಧನಾ ವಿಧಾನ

೨.೧ ಅಧ್ಯಯನ ವಿಧಾನ

೨.೧.೧ ಸಮಸ್ಯೆಯ ವಿಶ್ಲೇಷಣೆ

ಗ್ರಾಮೀಣ ಭಾರತವು ಸಮಸ್ಯೆಗಳ ಆಗರವಾಗಿದೆ. ಇವು ಬಡತನ ಮತ್ತು ನಿರುದ್ಯೋಗದಿಂದ ಹುಟ್ಟಿಕೊಂಡ ಸಮಸ್ಯೆಗಳು. ಸಾಮಾಜಿಕ ಹಿಂದುಳಿಕೆಯು ಆರ್ಥಿಕ ಹಿಂದುಳಿಕೆಯೊಡನೆ ತಳುಕು ಹಾಕಿಕೊಂಡಿರುವುದನ್ನು ಗ್ರಾಮೀಣ ಭಾರತದಲ್ಲಿ ಧಾರಾಳವಾಗಿ ಕಾಣಬಹುದು. ಸರಕಾರದ ಬಡತನ ಮತ್ತು ನಿರುದ್ಯೋಗ ನಿವಾರಣಾ ಯೋಜನೆಗಳು ಪ್ರಭುತ್ವದ ಅರೆ ಮನಸ್ಸು, ಅಧಿಕಾರಿಗಳ ಅಸಡ್ಡೆ ಮತ್ತು ಅರ್ಹ ಫಲಾನುಭವಿಗಳ ಅಜ್ಞಾನದಿಂದಾಗಿ ನಿರೀಕ್ಷಿತ ಮಟ್ಟದ ಯಶಸ್ಸನ್ನು ಗಳಿಸಿಲ್ಲ.

ಇದನ್ನು ಮನಗಂಡು ಅನೇಕ ಸರಕಾರೇತರ ಸಂಸ್ಥೆಗಳು ಗ್ರಾಮೀಣ ಭಾರತದ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ತಮ್ಮದೇ ಕಾರ್ಯ ಸೂಚಿಗಳನ್ನು ಅಳವಡಿಸಿಕೊಂಡಿವೆ. ಅವುಗಳಲ್ಲಿ ಸರಕಾರೇತರ ಸ್ವ-ಸಹಾಯ ಸಂಘಗಳ ರಚನೆ ಅತ್ಯಂತ ಪ್ರಮುಖವಾದುದು. ಈ ನಿಟ್ಟಿನಲ್ಲಿ ೧೯೮೨ರಲ್ಲಿ ಆರಂಭಗೊಂಡ ಕರ್ನಾಟಕದ ದಕ್ಷಿಣಕನ್ನಡ ಜಿಲ್ಲೆಯ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯು ತನ್ನದೇ ಉದ್ದೇಶಗಳೊಂದಿಗೆ ಸ್ತುತ್ಯಾರ್ಹವಾದ ಸಾಧನೆಗಳನ್ನು ಮಾಡುತ್ತಿದೆ. ಅದರ ಪರಿಣಾಮವಾಗಿ ಪ್ರಗತಿಬಂಧು ಸ್ವಸಹಾಯ ಗುಂಪುಗಳು ಅಲ್ಲಲ್ಲಿ ತಲೆ ಎತ್ತಿವೆ. ಆರಂಭದಲ್ಲಿ ಈ ಯೋಜನೆಯು ದ.ಕ. ಜಿಲ್ಲೆಯ ಒಂದು ತಾಲೂಕಾದ ಬೆಳ್ತಂಗಡಿಗೆ ಮಾತ್ರ ಸೀಮಿತಗೊಂಡಿತ್ತು. ಈಗ ಅದು ತನ್ನ ವ್ಯಾಪ್ತಿಯನ್ನು ಮೀರಿ ಇತರ ತಾಲೂಕುಗಳಿಗೆ ಪಸರಿಸಿದೆ. ಅವುಗಳಲ್ಲಿ ಬಂಟ್ವಾಳ ತಾಲೂಕು ಒಂದು. ಪ್ರಸಕ್ತ ಅಧ್ಯಯನವು ಬಂಟ್ವಾಳ ತಾಲೂಕಿನ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಸಾಧನೆ ಮತ್ತು ವೈಫಲ್ಯಗಳನ್ನು ಕ್ಷೇತ್ರಾಧ್ಯಯನದ ಮೂಲಕ ಪ್ರಸ್ತುತ ಪಡಿಸುತ್ತದೆ.

೨.೧.೨ ಹಿಂದಿನ ಅಧ್ಯಯನಗಳ ಸಮೀಕ್ಷೆ

ಪ್ರಸಕ್ತ ಅಧ್ಯಯನವನ್ನು ಕೈಗೊಳ್ಳುವ ಮುನ್ನ ಈಗಾಗಲೇ ಮಾಡಲಾದ ಪ್ರಮುಖ ಅಧ್ಯಯನಗಳ ಒಂದು ಪಕ್ಷಿ ನೋಟವನ್ನು ಮಾಡಲಾಯಿತು. ಅವುಗಳನ್ನು ಕೆಳಗೆ ದಾಖಲಿಸಲಾಗಿದೆ.

ಕುಮಾರನ್ ಕೆ.ಪಿ. ಭಾರತದ ಗ್ರಾಮೀಣ ಬಡವರ ಸ್ವಸಹಾಯ ಗುಂಪುಗಳ ಅಧ್ಯಯನಗಳನ್ನು ನಡೆಸಿರುತ್ತಾರೆ.[1] ಈ ಅಧ್ಯಯನವು ಒಂದು ಸಮಗ್ರ ನೋಟವಾಗಿದೆ. ಇದು ಬಹುತೇಕವಾಗಿ ಆನುಷಂಗಿಕ ದತ್ತಾಂಶಗಳನ್ನು ಅವಲಂಬಿಸಿಕೊಂಡಿದೆ. ಇದಕ್ಕೆ ಯಾವುದೇ ಕ್ಷೇತ್ರಾಧ್ಯಯದ ಸಮರ್ಥನೆ ಇರುವುದಿಲ್ಲ.

ದಾಸ್ ಗುಪ್ತಾ ಮತ್ತು ರಾಜಾರಾಮ್‌ರವರು ಗ್ರಾಮೀಣ ಸ್ವಸಹಾಯ ಗುಂಪುಗಳ ಮೇಲೆ ಹನಿ ಹಣಕಾಸಿನ ಪರಿಣಾಮದ ಬಗ್ಗೆ ವಿಶ್ಲೇಷಣೆ ನಡೆಸಿದ್ದಾರೆ.[2] ಇದು ಒಂದು ಒಳ್ಳೆಯ ಅಧ್ಯಯನ. ಆದರೆ ಇದು ಸ್ವಸಹಾಯ ಗುಂಪುಗಳ ಹಣಕಾಸು ಭಾಗವನ್ನು ಮಾತ್ರ ವಿಶ್ಲೇಷಿಸುತ್ತದೆ. ಉಳಿದ ಚಟುವಟಿಕೆಗಳ ಬಗ್ಗೆ ವಿಶ್ಲೇಷಣೆ ನಡೆಸುವುದಿಲ್ಲ.

ರಿತು ಜೈನ್ ಮತ್ತು ಇತರರು ಸ್ವಸಹಾಯ ಗುಂಪುಗಳ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳ ಬಗ್ಗೆ ಮಾಡಿರುವ ಅಧ್ಯಯನವು ಆಸಕ್ತಿದಾಯಕವಾಗಿದೆ.[3] ಅವರ ಪ್ರಕಾರ ಸ್ವಸಹಾಯ ಗುಂಪುಗಳು ಸಾಮಾಜಿಕ ಮತ್ತು ಆರ್ಥಿಕ ಉನ್ನತಿಗೆ ಕಾರಣವಾಗುತ್ತವೆ. ಈ ಅಧ್ಯಯನವು ಬಹುತೇಕವಾಗಿ ಆನುಷಂಗಿಕ ದತ್ತಾಂಶಗಳನ್ನು ಅವಲಂಬಿಸಿರುವುದು ಒಂದು ಮಿತಿ ಎನಿಸುತ್ತದೆ.

ಸಭ್ಯ ಸಾಚಿದಾಸ್ ಹನಿ ಹಣಕಾಸು ಮತ್ತು ಸ್ವಸಹಾಯ ಗುಂಪುಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ.[4] ಇದು ಸ್ವಸಹಾಯ ಗುಂಪುಗಳಿಗೆ ಹನಿ ಹಣಕಾಸು ಎಷ್ಟು ಅಗತ್ಯ ಎನ್ನುವುದನ್ನು ತಿಳಿಸುತ್ತದೆ. ಆದರೆ ಈ ಅಧ್ಯಯನಕ್ಕೆ ಸಮರ್ಥವಾದ ಸಾಕಷ್ಟು ಮೂಲ ದತ್ತಾಂಶಗಳನ್ನು ನೀಡಲು ಅವರಿಂದ ಸಾಧ್ಯವಾಗಿಲ್ಲ.

ಮಹೇಂದ್ರ ವರ್ಮನ್ ತಮ್ಮ ಅಧ್ಯಾಯನದಲ್ಲಿ ಔಪಚಾರಿಕ ಬ್ಯಾಂಕಿಂಗ್ ಅಭ್ಯಾಸದ ಮೇಲೆ ಸ್ವಸಹಾಯ ಗುಂಪುಗಳ ಪರಿಣಾಮಗಳನ್ನು ವಿಶ್ಲೇಷಿಸಿದ್ದಾರೆ.[5] ಮುಖ್ಯವಾಗಿ ಗ್ರಾಮೀಣ ಪ್ರದೇಶದ ಜನರಲ್ಲಿ ಸ್ವಸಹಾಯ ಗುಂಪುಗಳಿಂದಾಗಿ ಉಳಿತಾಯ ಪ್ರವೃತ್ತಿ ಮೂಡುವುದನ್ನು

ಅವರ ಅಧ್ಯಯನ ಸಮರ್ಥಿಸುತ್ತದೆ. ಇದು ಸ್ವಸಹಾಯ ಗುಂಪುಗಳ ಕಾರ್ಯ ಚಟುವಟಿಕೆಗಳ ಪಾರ್ಶ್ವ ದರ್ಶನವನ್ನಷ್ಟೆ ಮಾಡುತ್ತದೆ.

ಮಾಲ್‌ಕಂ ಹಾರ್‌ಪರ್ ಮತ್ತು ಇತರರು ಸ್ವಸಹಾಯ ಸಂಘಗಳ ಬ್ಯಾಂಕು ಸಂಪರ್ಕ ಸಹಕಾರಿ ಸುಧಾರಣೆಗೆ ಒಂದು ಪರಿಕರವಾಗಬಹುದೆಂದು ವಿಶ್ಲೇಷಿಸಿದ್ದಾರೆ.[6] ಇದೊಂದು ಅದ್ಭುತ ಆಶಾವಾದವಾಗಿದೆ. ಆದರೆ ಇದನ್ನು ಸಮರ್ಥಿಸಲು ಸಾಕಷ್ಟು ಪೂರಕ ಮಾಹಿತಿಗಳನ್ನು ಒದಗಿಸುವಲ್ಲಿ ಅವರು ವಿಫಲರಾಗಿದ್ದಾರೆ.

ಎಂ ಎಲ್.ಗುಪ್ತಾ ಮತ್ತು ನಮಿತಾ ಗುಪ್ತಾ ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ ಸಬಲೀಕರಣ ಸಾಧ್ಯವೆಂದು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.[7] ಈ ವಾದ ತುಂಬಾ ಆಕರ್ಷಕವಾಗಿದೆ. ಆದರೆ ಸ್ವಸಹಾಯ ಸಂಘಗಳ ಉದ್ದೇಶ ಕೇವಲ ಮಹಿಳೆಯರ ಆರ್ಥಿಕ ಸಬಲೀಕರಣವಲ್ಲ. ಈ ಕಾರಣಕ್ಕಾಗಿ ಈ ಅಧ್ಯಯನವು ಮಿತಿಗೊಳಪಟ್ಟಿದೆ.

ಸುಬ್ಬಯ್ಯ ಮತ್ತು ಸೆಲ್ವಂ ಕುಮಾರ್ ಸ್ವಸಹಾಯ ಗುಂಪುಗಳು ಗ್ರಾಮೀಣ ಅಭಿವೃದ್ಧಿಗೆ ಪೂರಕವೆಂದು ತಮ್ಮ ಲೇಖನದಲ್ಲಿ ವಾದಿಸುತ್ತಾರೆ.[8] ಅವರ ಅಧ್ಯಯನವು ಆನುಷಂಗಿಕ ದತ್ತಾಂಶಗಳನ್ನು ಅವಲಂಬಿಸಿಕೊಂಡಿದೆ. ಅಲ್ಲದೆ ಅವರು ಗ್ರಾಮೀಣ ಅಭಿವೃದ್ಧಿಯಲ್ಲಿ ಮಹಿಳಾ ಸಬಲೀಕರಣಕ್ಕಷ್ಟೇ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ.

ಗಂಗಯ್ಯ, ನಾಗರಾಜ್ ಮತ್ತು ವಾಸುದೇವ ನಾಯ್ದು ತಮ್ಮ ಅಧ್ಯಯನದಲ್ಲಿ ಆದಾಯ ಮತ್ತು ಉದ್ಯೋಗದ ಮೇಲೆ ಸ್ವಸಹಾಯ ಗುಂಪುಗಳ ಪ್ರಭಾವವನ್ನು ವಿಶ್ಲೇಷಿಸಿದ್ದಾರೆ.[9] ಸ್ವಸಹಾಯ ಗುಂಪುಗಳ ಉದ್ದೇಶ ಬಡತನ ಮತ್ತು ನಿರುದ್ಯೋಗ ನಿವಾರಣೆ. ಈ ನಿಟ್ಟಿನಲ್ಲಿ ಇದೊಂದು ಒಳ್ಳೆಯ ಅಧ್ಯಯನ. ಆದರೆ ಈ ಅಧ್ಯಯನಕ್ಕೆ ಪೂರಕವಾಗಿ ಕ್ಷೇತ್ರ ಕಾರ್ಯ ಮಾಡದಿರುವುದು ಅಧ್ಯಯನದ ದೋಷವಾಗಿದೆ.

ವಿಜಯ ಚಂದ್ ಮತ್ತು ಹರಿಕುಮಾರ್ ಕೇರಳದ ಸ್ವಸಹಾಯ ಸಂಘಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ.[10] ಇದೇ ರೀತಿಯ ಅಧ್ಯಯನವನ್ನು ರಾಜಸ್ಥಾನದ ಸ್ವಸಹಾಯ ಗುಂಪುಗಳ ಬಗ್ಗೆ ಸುಭಾಷ್‌ಸಿಂಗ್ ಮಾರನ್ ನಡೆಸಿದ್ದಾರೆ.[11] ಇವೆರಡು ಅಧ್ಯಯನಗಳು

ಸಮಗ್ರ ವಿಶ್ಲೇಷಣೆಯನ್ನು ಮಾಡುತ್ತವೆ. ಆದರೆ ಮೂಲ ದತ್ತಾಂಶಗಳ ಸಮರ್ಥನೆ ಇಲ್ಲದೆ ಸೊರಗಿವೆ.

ಮಧುರಾ ಎಂ.ಆರ್. ಸರಕಾರಿ ಮತ್ತು ಸರಕಾರೇತರ ಸ್ವಸಹಾಯ ಗುಂಪುಗಳ ಒಂದು ತುಲನಾತ್ಮಕ ಅಧ್ಯಯನ ಮಾಡಿದ್ದಾರೆ.[12] ಇದು ಪುತ್ತೂರು ತಾಲೂಕಿನ ಕೆಲವು ಸ್ವಸಹಾಯ ಗುಂಪುಗಳ ಕಾರ್ಯ ಚಟುವಟಿಕೆಗಳ ಪಾರ್ಶ್ವ ಚಿತ್ರಣವನ್ನು ಮಾತ್ರ ನೀಡುತ್ತದೆ.

ಆಶಾಲತಾ ಸುವರ್ಣ ತಮ್ಮ ಅಧ್ಯಯನದಲ್ಲಿ ಸ್ವಸಹಾಯ ಗುಂಪುಗಳನ್ನು ಆರ್ಥಿಕ ಸ್ವಾವಲಂಬನೆಯ ಒಂದು ಯಶಸ್ವೀ ಪ್ರಯೋಗ ಎಂದು ಕರೆದಿದ್ದಾರೆ.[13] ಇದು ಪೂರ್ಣವಾಗಿ ಸೈದ್ಧಾಂತಿಕ ಅಧ್ಯಯನವಾಗಿದೆ. ಪೂರಕವಾದ ಯಾವುದೇ ಪ್ರಾಥಮಿಕ ಮಾಹಿತಿ ನೀಡಲು ಇವರಿಂದ ಸಾಧ್ಯವಾಗಿಲ್ಲ.

ಎನ್.ಕೆ. ತಿಂಗಳಾಯ ಹನಿ ಹಣಕಾಸು ವ್ಯವಸ್ಥೆಯು ಪಸರಿಸುತ್ತಿರುವುದರ ಬಗ್ಗೆ ರಾಜ್ಯ ಮಟ್ಟದ ಅಧ್ಯಯನ ಮಾಡಿದ್ದಾರೆ.[14] ಇದು ಒಂದು ಸಮಗ್ರ ಅಧ್ಯಯನವಾಗಿರುತ್ತದೆ. ಮೂಲ ಮಾಹಿತಿಯನ್ನು ಬಳಸದಿರುವುದು ಈ ಅಧ್ಯಯನದ ಕೊರತೆಯಾಗಿದೆ.

ಈ ನಿಟ್ಟಿನಲ್ಲಿ ಪ್ರಸಕ್ತ ಅಧ್ಯಯನವು ಬಹಳ ಮಹತ್ವವನ್ನು ಪಡೆದುಕೊಳ್ಳುತ್ತದೆ. ಬಂಟ್ವಾಳ ತಾಲೂಕಿನ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಬಗ್ಗೆ ಈವರೆಗೆ ಯಾವುದೇ ಅಧ್ಯಯನ ನಡೆಯದಿರುವುದು ಇದಕ್ಕೆ ಒಂದು ಕಾರಣವಾದರೆ ಈ ಅಧ್ಯಯನವು ಕ್ಷೇತ್ರಕಾರ್ಯವನ್ನು ಮತ್ತು ಮೂಲಕ ದತ್ತಾಂಶಗಳನ್ನು ಅವಲಂಬಿಸಿರುವುದು ಇನ್ನೊಂದು ಕಾರಣವಾಗಿದೆ.

೨.೧.೩ ಅಧ್ಯಯನಕ್ಕೆ ಕಾರಣ ಮತ್ತು ಪ್ರೇರಣೆ

ಭಾರತದ ಪಂಚವಾರ್ಷಿಕ ಯೋಜನೆಗಳು ನಿಗದಿತ ಉದ್ದೇಶವನ್ನು ಸಾಧಿಸುವಲ್ಲಿ ಪೂರ್ಣ ಯಶಸ್ಸನ್ನು ಕಂಡಿಲ್ಲ[15] ಜಾಗತೀಕರಣದ ಹಿನ್ನೆಲೆಯಲ್ಲಿ ಕೇವಲ ಸರಕಾರವನ್ನು ಅಭಿವೃದ್ಧಿಯ ವೈಫಲ್ಯಕ್ಕೆ ಹೊಣೆಗಾರನನ್ನಾಗಿ ಮಾಡುವಂತಿಲ್ಲ. ಜನರು ತಮ್ಮ ಅಭಿವೃದ್ಧಿಯನ್ನು ಸಂಘಟಿತರಾಗಿ ಸಾಧಿಸಿಕೊಳ್ಳಬೇಕಾಗಿದೆ. ಆದರೆ ಭ್ರಷ್ಟ ಆಡಳಿತ ವ್ಯವಸ್ಥೆಯಲ್ಲಿ ಸ್ವಯಂ ಅಭಿವೃದ್ಧಿ ಹೊಂದುವುದು ಸುಲಭದ ಮಾತಲ್ಲ. ಅದಕ್ಕೆ ಸರಕಾರೇತರ ಸಂಸ್ಥೆಗಳ ನೆರವು ಮತ್ತು ಮಾರ್ಗದರ್ಶನದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಪ್ರಗತಿಬಂಧು

ಯೋಜನೆ ವಿಶೇಷ ಮಹತ್ವವನ್ನು ಪಡೆದುಕೊಳ್ಳುತ್ತದೆ. ಬೆಳ್ತಂಗಡಿ ತಾಲೂಕಿನಲ್ಲಿ ಮೊದಲ ಬಾರಿಗೆ ಆರಂಭಗೊಂಡ ಪ್ರಗತಿ ಬಂಧು ಯೋಜನೆಯು ಸಾಕಷ್ಟು ಯಶಸ್ಸನ್ನು ಕಂಡದ್ದನ್ನು ವರದಿಗಳು ತಿಳಿಸುತ್ತವೆ. ಆದರೆ ಇತರ ತಾಲೂಕುಗಳಲ್ಲಿ ಈ ಯೋಜನೆಯ ಫಲಶ್ರುತಿ ಏನೆಂಬುದರ ಬಗ್ಗೆ ಸರಿಯಾದ ಅಧ್ಯಯನ ನಡೆದಿಲ್ಲ. ಅದಕ್ಕಾಗಿ ಬಂಟ್ವಾಳ ತಾಲೂಕನ್ನು ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ. ಇದು ಸಂಶೋಧಕನು ಜನಿಸಿದ ತಾಲೂಕು ಆಗಿರುವುದರಿಂದ ಸಂಶೋಧಕನಿಗೆ ಅಧ್ಯಯನಕ್ಕೆ ಸಹಜವಾದ ಪ್ರೇರಣೆ ದೊರೆತಿದೆ. ಕ್ಷೇತ್ರಾಧ್ಯಯನದ ಮೂಲಕ ಕಂಡುಕೊಂಡ ಸತ್ಯದ ಹಿನ್ನೆಲೆಯಲ್ಲಿ ಪ್ರಗತಿಬಂಧು ಯೋಜನೆಯನ್ನು ಬಂಟ್ವಾಳ ತಾಲೂಕಿನಲ್ಲಿ ಇನ್ನಷ್ಟು ಪರಿಣಾಮಕಾರಿಯನ್ನಾಗಿ ಮಾಡಲು ಸಲಹೆ, ಸೂಚನೆಗಳನ್ನು ನೀಡುವ ಉದ್ದೇಶವು ಅಧ್ಯಯನಕ್ಕೆ ಪ್ರೇರಣೆಯನ್ನು ಒದಗಿಸಿದೆ.

೨.೧.೪ ಅಧ್ಯಯನದ ಉದ್ದೇಶಗಳು

ಅಧ್ಯಯನದ ಪ್ರಮುಖ ಉದ್ದೇಶಗಳು

- ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಗತಿಬಂಧು ಸ್ವಸಹಾಯ ಸಂಘಗಳ ಮಹತ್ವವನ್ನು ಗುರುತಿಸುವುದು.
- ಉಳಿತಾಯ ಸಂಚಯನದಲ್ಲಿ ಅವುಗಳ ಪಾತ್ರವನ್ನು ಪರಿಶೀಲಿಸುವುದು.
- ಸ್ವ ಉದ್ಯೋಗದ ನಿರ್ಮಾಣದಲ್ಲಿ ಅವುಗಳ ಅಗತ್ಯವನ್ನು ವಿಶ್ಲೇಷಿಸುವುದು.
- ಜೀವನ ಮಟ್ಟ ಏರಿಕೆಯಲ್ಲಿ ಅವುಗಳ ಮಹತ್ವವನ್ನು ದಾಖಲಿಸುವುದು.
- ಮಹಿಳೆಯರ ಅಭಿವೃದ್ಧಿಯಲ್ಲಿ ಅವುಗಳು ವಹಿಸುವ ಪಾತ್ರವನ್ನು ವಿಶ್ಲೇಷಿಸುವುದು.
- ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಅವುಗಳ ಅಗತ್ಯದ ಪರಿಶೀಲನೆ.
- ಪರಿಸರ – ಸಂರಕ್ಷಣೆಯಲ್ಲಿ ಅವುಗಳ ಮಹತ್ವವನ್ನು ಪರಿಶೀಲಿಸುವುದು.
- ಪ್ರಗತಿಬಂಧು ಗುಂಪುಗಳ ಲೋಪದೋಷಗಳನ್ನು ಗುರುತಿಸಿ ಪರಿಹಾರೋಪಾಯ ಸೂಚಿಸುವುದು.

೨.೧.೫ ಅಧ್ಯಯನದ ಪೂರ್ವ ಕಲ್ಪನೆ

ಅಧ್ಯಯನದ ಪೂರ್ವ ಕಲ್ಪನೆ

ಪ್ರಕೃತ ಅಧ್ಯಯನವು ಕೆಳಗಿನ ಎರಡು ಪೂರ್ವ ಕಲ್ಪನೆಯನ್ನು ಆಧರಿಸಿದೆ;

- ಸ್ವಸಹಾಯದಿಂದ ಗ್ರಾಮೀಣಾಭಿವೃದ್ಧಿ ಸಾಧಿತವಾಗುತ್ತದೆ.
- ಗ್ರಾಮೀಣಭಿವೃದ್ಧಿಯು ಆರ್ಥಿಕ ಜೀವನ ಮಟ್ಟದ ಉನ್ನತೀಕರಣವನ್ನು ಸಾಧಿಸುತ್ತದೆ.

೨.೨ ಅಧ್ಯಯನ ವಿನ್ಯಾಸ

೨.೨.೧ ಅಧ್ಯಯನ ಕ್ಷೇತ್ರ: ಅಧ್ಯಯನ ಕ್ಷೇತ್ರವು ದ.ಕ. ಜಿಲ್ಲೆಯ ಬಂಟ್ವಾಳ ತಾಲೂಕಿಗೆ ಸೀಮಿತವಾಗಿದೆ. ಇದು ಅಧ್ಯಯನದ ವಿಶ್ವವಾಗಿದೆ. ಈ ತಾಲೂಕಿನಲ್ಲಿ ಒಟ್ಟು ೬೪ ಗ್ರಾಮಗಳಿದ್ದು ಅಧ್ಯಯನಕ್ಕಾಗಿ ಎರಡು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಈ ಗ್ರಾಮಗಳು ಕೆದಿಲ ಮತ್ತು ಕಡೇಶ್ವಾಲ್ಯ. ಈ ಎರಡು ಗ್ರಾಮಗಳಲ್ಲಿ ಪ್ರಗತಿಬಂಧು ತಂಡಗಳು ಕಾರ್ಯಚರಿಸುತ್ತಿವೆ. ಎರಡು ಗ್ರಾಮಗಳಲ್ಲಿ ಪ್ರಗತಿಬಂಧು ಸ್ವಸಹಾಯ ಸಂಘದ ಯಶಸ್ಸು ಮತ್ತು ವೈಫಲ್ಯದ ಕಾರಣಗಳನ್ನು ಕಂಡುಹಿಡಿಯುವುದು ಅಧ್ಯಯನದ ಮೂಲ ಉದ್ದೇಶವಾಗಿದೆ. ಅಧ್ಯಯನವು ಮಾದರಿ ಸಮೀಕ್ಷಾ ವಿಧಾನದ ಮೂಲಕ ನಡೆದಿದೆ.

೨.೨.೨ ಅಧ್ಯಯನದ ಮಾದರಿಯ ಗಾತ್ರ: ಎರಡು ಗ್ರಾಮಗಳಲ್ಲಿ ೭೪ ಪ್ರಗತಿಬಂಧು ಗುಂಪುಗಳಿವೆ. ಇವುಗಳಲ್ಲಿ ೬೪ ಪುರುಷರ ಮತ್ತು ಮಿಶ್ರ ಗುಂಪುಗಳು. ೧೦ ಮಹಿಳಾ ಗುಂಪುಗಳಾಗಿವೆ.

ಆಳವಾದ ಅಧ್ಯಯನಕ್ಕಾಗಿ ಇವುಗಳಿಂದ ೨೦ ಗುಂಪನ್ನು ಆಯ್ಕೆ ಮಾಡಲಾಗಿದೆ. ಇವುಗಳಲ್ಲಿ ೧೦ ಪುರುಷರ ಮತ್ತು ೧೦ ಮಹಿಳೆಯರ ಗುಂಪುಗಳು. ಇವುಗಳನ್ನು ಆಯ್ಕೆ ಮಾಡುವಾಗ ಎರಡು ಗ್ರಾಮಗಳಿಗೆ ಸಮಾನ ಪ್ರಾತಿನಿಧ್ಯ ಸಿಗುವ ಹಾಗೆ ನೋಡಿಕೊಳ್ಳಲಾಗಿದೆ.

೨.೨.೩ ಆಯ್ಕೆಯ ವಿಧಾನ: ಎರಡು ಗ್ರಾಮಗಳಿಂದ ಒಟ್ಟು ೨೦ ಪ್ರಗತಿಬಂಧು ಗುಂಪುಗಳನ್ನು ಆಯ್ದು ಅಧ್ಯಯನ ನಡೆಲಾಗಿದೆ. ಅವುಗಳಲ್ಲಿ ೧೦ ಪುರುಷ ಮತ್ತು ೧೦ ಮಹಿಳೆಯರ ಗುಂಪುಗಳಾಗಿವೆ. ಒಟ್ಟು ೫೦ ಮಂದಿ ಪುರುಷರು ಮತ್ತು ೫೦ ಮಂದಿ ಮಹಿಳೆಯರನ್ನು ಅಧ್ಯಯನಕ್ಕೆಂದು ಆರಿಸಲಾಗಿದೆ. ಅಧ್ಯಯನಕ್ಕಾಗಿ ನಿರ್ದಿಷ್ಟ ಪ್ರಶ್ನಾವಳಿಯನ್ನು ರೂಪಿಸಲಾಗಿದೆ. ಈ ಪ್ರಶ್ನಾವಳಿಯು ಅಧ್ಯಯನದ ಉದ್ದೇಶಗಳನ್ನು ಗಮನದಲ್ಲಿ ಇರಿಸಿಕೊಂಡು ರೂಪುಗೊಂಡಿದೆ. ಸದಸ್ಯರನ್ನು ಆಯ್ಕೆ ಮಾಡುವಾಗ ಅವರ ಸಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನು ಗಮನದಲ್ಲಿ ಇಟ್ಟುಕೊಳ್ಳಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಜಾತಿ, ಮೇಲ್ವರ್ಗ ಮತ್ತು ಅಲ್ಪ ಸಂಖ್ಯಾತರಿಗೆ ಪ್ರಾಶಸ್ತ್ಯ ನೀಡಲಾಗಿದೆ. ಆದರಲ್ಲೂ ಬಡತನದ ರೇಖೆಯ ಕೆಳಗೆ ಇರುವವರನ್ನು ವಿಶೇಷವಾಗಿ ಪರಿಗಣಿಸಲಾಗಿದೆ. ಆಯ್ದು ಫಲಾನುಭವಿಗಳು ಸಮುದಾಯದ ಒಟ್ಟು ಪ್ರತಿನಿಧಿಗಳಾಗಿರುವಂತೆ ಎಚ್ಚರ ವಹಿಸಲಾಗಿದೆ.

೨.೨.೪ ಕ್ಷೇತ್ರಾಧ್ಯಯನದ ವಿಧಾನ: ನಿಗದಿತ ಪ್ರಶ್ನಾವಳಿಯ ಮೂಲಕ ಕ್ಷೇತ್ರಾಧ್ಯಾಯನ ನಡೆಸಲಾಗಿದೆ. ಕ್ಷೇತ್ರಾಧ್ಯಯನಕ್ಕೆಂದು ಆಯ್ಕೆ ಮಾಡಿದ ೨೦ ಪ್ರಗತಿಬಂಧು ಗುಂಪಿನಲ್ಲಿ ೧೦ ಪೂರ್ತಿಯಾಗಿ ಪುರುಷರದ್ದು ಮತ್ತು ೧೦ ಮಹಿಳೆಯರ ಗುಂಪುಗಳಾಗಿವೆ. ೨೦ ಗುಂಪುಗಳ ಒಟ್ಟು ಸದಸ್ಯರ ಸಂಖ್ಯೆ ೧೦೫. ಇವರಲ್ಲಿ ೧೦೦ ಮಂದಿಯನ್ನು ಸಮಗ್ರ ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿದೆ. ಇನ್ನುಳಿದ ೫ ಮಂದಿಗಳು ಕ್ಷೇತ್ರ ಸಂದರ್ಶನಕ್ಕೆ ಹಿಂದೇಟು ಹಾಕಿದ ಕಾರಣ ಅವರನ್ನು ಅನಿವಾರ್ಯವಾಗಿ ಅಧ್ಯಯನದಿಂದ ಹೊರಗಿಡಬೇಕಾಯಿತು. ಹಾಗೆ ಆರಿಸಿಕೊಂಡರಲ್ಲಿ ೫೦ ಮಂದಿ ಮಹಿಳೆಯರು. ಅಧ್ಯಯನಕ್ಕೆ ಆರಿಸಿಕೊಂಡ ಸದಸ್ಯರಲ್ಲಿ ಪರಿಶಿಷ್ಟ ಜಾತಿ, ವರ್ಗಗಳಿಗೆ ಸೇರಿದವರು, ಹಿಂದುಳಿದ ಜಾತಿಗಳಿಗೆ ಮತ್ತು ಮುಂದುವರಿದ ಜಾತಿಗಳಿಗೆ ಸೇರಿದವರಿದ್ದಾರೆ. ಅಲ್ಪ ಸಂಖ್ಯಾತರನ್ನು ಕೂಡಾ ಸಂದರ್ಶಿಸಿ ಅವರ ಹೃದಯದ ಭಾಷೆಯನ್ನು ಅಧ್ಯಯನದಲ್ಲಿ ದಾಖಲಿಸಲಾಗಿದೆ. ಎಲ್ಲರಿಗೂ ಪ್ರಾತಿನಿಧ್ಯ ನೀಡಿ ಅಧ್ಯಯನ ನಡೆಸಲಾಗಿದೆ.

೨.೨.೫ ದತ್ತಾಂಶ ವಿಶ್ಲೇಷಣೆ: ನೂರು ಮಂದಿ ಪ್ರಗತಿಬಂಧು ಸದಸ್ಯರುಗಳ ಅಭಿಪ್ರಾಯಗಳನ್ನು ಸಮರ್ಪಕ ಪ್ರಶ್ನಾವಳಿಯಲ್ಲಿ ಉಲ್ಲೇಖಿಸಲಾಗಿದೆ. ಸಂಗ್ರಹವಾದ ದತ್ತಾಂಶಗಳನ್ನು ವಿವಿಧ ಕೋಷ್ಟಕಗಳಲ್ಲಿ ಭಟ್ಟಿಳಿಸಲಾಗಿದೆ. ಈ ಕೋಷ್ಟಕಗಳು ಸದಸ್ಯರ

ಮಾಹಿತಿ, ಸಭೆಗಳ ವಿವರ, ಪ್ರಗತಿಬಂಧು ಸಂಘಗಳ ಕೆಲಸ, ಗುಂಪುಗಳ ಸಾಲ ನಿರ್ವಹಣೆ, ಸಾಲ ಮರುಪಾವತಿ, ಸಾಲದ ಬಳಕೆ, ವೃತ್ತಿಯ ವಿತರಣೆ ಮತ್ತು ಇತರ ಅಭಿಪ್ರಾಯಗಳ ಬಗ್ಗೆ ಮಾಹಿತಿಗಳನ್ನು ನೀಡುತ್ತವೆ. ಸಂಘಗಳ ಒಟ್ಟು ಬೆಳವಣಿಗೆಯ ಚಿತ್ರಣವನ್ನು ನಕ್ಷೆಗಳ, ಸ್ತಂಭ ಚಿತ್ರಗಳ ಮತ್ತು ವೃತ್ತ ಚಿತ್ರಗಳ ಮೂಲಕ ತೋರಿಸಲಾಗಿದೆ. ಪ್ರಗತಿಬಂಧು ಗುಂಪುಗಳ ವಿಶ್ವ ರೂಪವನ್ನು ವೈಜ್ಞಾನಿಕವಾಗಿ ಪ್ರಸ್ತುತ ಪಡಿಸಲು ಗಣಿತ ಮತ್ತು ಸಂಖ್ಯಾ ಶಾಸ್ತ್ರದ ಸಲಕರಣೆಗಳನ್ನು ಬಳಸಿಕೊಳ್ಳಲಾಗಿದೆ.

ಉಲ್ಲೇಖಗಳು

1. Kumaran K.P, Self help groups and Rural Poor, National Book News Review, April, June – 2001.
2. Das Gupta Rajaram; Impact of Micro finance to Rural self help groups, Indian general of agricultural, Economics, Vol 56, No 3, July 2001.
3. Ritu Jain & Others; Social & Economic impact of selt help of groups, Yojana, Vol 47, No. 7, July – 2001.
4. Sabya Sachidas; Self help groups & Micro credit, Kurukshetra, August 2003, Vol 5, No. 10, P P 25-30.
5. Mahendra Varman; Impact of self help group on formal banking habits, EPW, April, 23-2005, PP 1705 -1713
6. Malcolm harber & others; SHG – Banking linkage a tool for reforms in co operatives, EPW, April 23-2005, P P1720-1725
7. M.L. Guptha & Namitha Guptha; Economic Empovement of women through SHG's, Kurukshethra, Vol 54, Feb 2006.
8. Dr. A. Subbayya & M. Selva Kumar; self help group & rural development, Third Concect, Nov 2006.
9. C. Gangaiah, B. Nagaraj, C.Vasudev Naidu, Impact of SHG on income & Empolyment, Kurushethra, Vol 54, No. 8, March 2006, PP 18-23.
10. Vijayachand Pille & Harikumar; SHG of Kerala, Kurukshethra, Vol – 54, No. 9, July 2006.

11. Subah Sing Yadav; Self help group movement in Rajasthan, Kurukshethra, Vol – 54, No. Sep 2006.

12. Madhura M.R.; Comparative Study of Function in of Govt & NGO's Self Help Group, Unpublished, 2006.

13. ಆಶಾಲತಾ ಸುವರ್ಣ; ಸ್ವಸಹಾಯ ಸಂಘಗಳು ಆರ್ಥಿಕ ಸ್ವಾವಲಂಬನೆಗೆ ಒಂದು ಯಶಸ್ವಿ ಪ್ರಯೋಗ-ತತ್ವಾನ್ವೇಷಣೆ, ಅಭಿನಂದನಾ ಗ್ರಂಥ, ಬಂಟ್ವಾಳ, ೨೦೦೬ ಪು. ೨೩೨-೨೩೭

14. Thingalaya N.K.; Micro finance, 2006

15. ಡಾ। ಪ್ರಭಾಕರ ಶಿಶಿಲ; ಆರ್ಥಿಕ ಭಾರತ, ಮಂಗಳ ಪ್ರಕಾಶನ, ೨೦೦೬

16. SKDRDP Report; 2006.

17. ಪ್ರಶ್ನಾವಳಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಅಧ್ಯಾಯ – ೩

ಗ್ರಾಮೀಣಾಭಿವೃದ್ಧಿ: ಸೈದ್ಧಾಂತಿಕ ನಿಲುವುಗಳು

೩.೧ ಗ್ರಾಮೀಣಾಭಿವೃದ್ಧಿ: ವಿಭಿನ್ನ ದೃಷ್ಟಿಕೋನಗಳು

೩.೨ ಗ್ರಾಮೀಣಾಭಿವೃದ್ಧಿಯ ಉದ್ದೇಶ ಮತ್ತು ಮಹತ್ತ್ವ

೩.೩ ಗ್ರಾಮೀಣಾಭಿವೃದ್ಧಿಯ ತಾತ್ತ್ವಿಕ ಹಿನ್ನಲೆ

೩.೪ ಗ್ರಾಮೀಣಾಭಿವೃದ್ಧಿಯ ವ್ಯಾಪ್ತಿ

೩.೫ ಭಾರತದ ಗ್ರಾಮೀಣ ಅಭಿವೃದ್ಧಿ ಯೋಜನೆಗಳು

೩.೬ ಗ್ರಾಮೀಣಾಭಿವೃದ್ಧಿಯ ಸಮಸ್ಯೆಗಳು

೩.೭ ಸ್ವಸಹಾಯ ಗುಂಪುಗಳ ಅನಿವಾರ್ಯತೆ

೩.೮ ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ

೩. ಗ್ರಾಮೀಣಾಭಿವೃದ್ಧಿ: ಸೈದ್ಧಾಂತಿಕ ನಿಲುವುಗಳು

೩.೧ ಗ್ರಾಮೀಣಾಭಿವೃದ್ಧಿ: ವಿಭಿನ್ನ ದೃಷ್ಟಿಕೋನಗಳು

ಗ್ರಾಮೀಣ ಭಾರತವು ಹಲವು ಸಮಸ್ಯೆಗಳ ಆಗರವಾಗಿದೆ. ಬಡತನ, ನಿರುದ್ಯೋಗ, ಅನಾರೋಗ್ಯ, ಜಾತೀಯತೆ, ವಸತಿರಾಹಿತ್ಯ, ಶೋಷಣೆ ಮತ್ತು ಮೂಲ ಅವಶ್ಯಕತೆಗಳ ಅಭಾವದಿಂದಾಗಿ ಗ್ರಾಮೀಣ ಭಾರತವು ನಗರ ಭಾರತಕ್ಕಿಂತ ತುಂಬಾ ಹಿಂದುಳಿದಿದೆ. ದೇಶದ ಬಹುತೇಕ ಸಂಪತ್ತು ಇರುವುದು ಗ್ರಾಮೀಣ ಪ್ರದೇಶಗಳಲ್ಲಿ. ಆದರೆ ಅದು ಬಳಕೆಯಾಗುತ್ತಿರುವುದು ಪಟ್ಟಣ ಪ್ರದೇಶಗಳ ಜನರ ಸೌಲಭ್ಯ ನಿರ್ಮಾಣಕ್ಕಾಗಿ. ಈ ವಿರೋಧಾಭಾಸಗಳ ನಿವಾರಣೆಗಾಗಿ ಭಾರತ ಸರಕಾರವು ಗ್ರಾಮೀಣಾಭಿವೃದ್ಧಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಎಲ್.ಡಬ್ಲ್ಯೂ. ಆಂಕರ್ ದೇಶ್‌ಮೊಂಡ ತಮ್ಮ 'ರೂರಲ್ ಡೆವಲಪ್ ಮೆಂಟ್ ಪ್ರಾಬ್ಲಮ್ ಎಂಡ್ ಸ್ಟ್ರಾಟಜೀಸ್' ಎಂಬ ಕೃತಿಯಲ್ಲಿ ವ್ಯಾಖ್ಯಾನಿಸಿರುವಂತೆ "ಗ್ರಾಮೀಣ ಅಭಿವೃದ್ಧಿಯು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗಾಗಿ ಕೈಗೊಳ್ಳಬಹುದಾದ ಅಭಿವೃದ್ಧಿಗೆ ಸಂಬಂಧಿಸಿದ ಕೌಶಲಗಳು, ನೀತಿಗಳು ಮತ್ತು ಯೋಜನೆಗಳನ್ನು ಸೂಚಿಸುತ್ತದೆ. ಅದು ಕೃಷಿ, ಅರಣ್ಯ, ಮೀನುಗಾರಿಕೆ, ಗ್ರಾಮೀಣ ಕೈಗಾರಿಕೆ ಮೊದಲಾದ ಕ್ಷೇತ್ರಗಳಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಚಟುವಟಿಕೆಗಳನ್ನು ಸದುಪಯೋಗ ಮಾಡಿಕೊಂಡು ತನ್ಮೂಲಕ ಗ್ರಾಮೀಣ ಬಡಜನರನ್ನು ಒಳಗೊಂಡಂತೆ ಗ್ರಾಮೀಣ ಪ್ರದೇಶದ ಎಲ್ಲರೂ ಅಧಿಕ ಆದಾಯ ಪಡೆಯುವಂತಾಗುವುದನ್ನು ಮತ್ತು ಜೀವನ ಪರಿಸ್ಥಿತಿಗಳನ್ನು ಉತ್ತಮೀಕರಿಸುವುದನ್ನು ಸೂಚಿಸುತ್ತದೆ. ಅದು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಎಲ್ಲರೂ ಕ್ರಿಯಾ ಶೀಲತೆಯಿಂದ ಪಾಲ್ಗೊಳ್ಳುದರಿಂದ ಸಾಧ್ಯವಾಗುತ್ತದೆ.[1]

ಉದಯ್ ಪರೇಕ್ ತಮ್ಮ 'ಎಜುಕೇಶನ್ ಎಂಡ್ ರೂರಲ್ ಡೆವಲಪ್ ಮೆಂಟ್ ಇನ್ ಏಷ್ಯಾ' ಎಂಬ ಕೃತಿಯಲ್ಲಿ ವ್ಯಾಖ್ಯಾನಿಸಿರುವಂತೆ "ಗ್ರಾಮೀಣ ಅಭಿವೃದ್ಧಿಯು ಗ್ರಾಮೀಣ ಜನರು ತಮ್ಮ ಆ ಬಗೆಯ ನಿಯಂತ್ರಣದ ಫಲವಾಗಿ ಹೆಚ್ಚು ಲಾಭಗಳನ್ನು ಹಂಚಿಕೊಳ್ಳಲು

ಸಾಧ್ಯವಾಗುವಂತೆ ಮಾಡಿಕೊಳ್ಳುವುದನ್ನು ಒಳಗೊಂಡಂತೆ ಅವರ ಪರಿಸರವನ್ನು ನಿಯಂತ್ರಿಸಿಕೊಳ್ಳುವ ಸಾಮರ್ಥ್ಯಗಳನ್ನು ಸತತವಾಗಿ ಹೆಚ್ಚಿಸಿಕೊಳ್ಳುವ ಪ್ರಕ್ರಿಯೆಯಾಗಿರುತ್ತದೆ.[2]

ಜಿ. ಪಾರ್ಥಸಾರಥಿಯವರು 'ಇಂಟಗ್ರೇಟೆಡ್ ರೂರಲ್ ಡೆವಲಪ್ ಮೆಂಟ್' ಎಂಬ ಕೃತಿಯಲ್ಲಿ ಅಭಿಪ್ರಾಯ ಪಟ್ಟಿರುವಂತೆ "ಗ್ರಾಮೀಣ ಅಭಿವೃದ್ಧಿಯಲ್ಲಿನ ಸಂದಿಗ್ಧ ಅಂಶವು ಬಡವರು ತಮಗೆ ಲಭ್ಯವಾಗಿರುವ ಭೌತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಉತ್ತಮ ರೀತಿಯಲ್ಲಿ ಸದುಪಯೋಗ ಮಾಡಿಕೊಳ್ಳಲು ಅವಕಾಶವಾಗಿರುವುದರ ಮೂಲಕ ತಮ್ಮ ಜೀವನ ಮಟ್ಟಗಳನ್ನು ಸುಧಾರಣೆ ಮಾಡಿಕೊಳ್ಳುವುದು ಆಗಿರುತ್ತದೆ".[3]

ಮೈಕಲ್ ಪಿ. ತೊದಾರೋ ಗ್ರಾಮೀಣ ಅಭಿವೃದ್ಧಿಯು ಈ ಕೆಳಗಿನ ಮೂರು ಅಂಶಗಳನ್ನು ಒಳಗೊಂಡಿರುವುದು ಮುಖ್ಯವೆಂದು ತಿಳಿಸಿರುತ್ತಾರೆ.

- ಉದ್ಯೋಗ, ಶಿಕ್ಷಣ, ಆರೋಗ್ಯ ಹಾಗೂ ಪೌಷ್ಟಿಕತೆ, ವಸತಿ ಮತ್ತು ವಿವಿಧ ಸಮಾನ ಸೇವೆಗಳನ್ನು ಒಳಗೊಂಡಂತೆ ಜೀವನಮಟ್ಟವನ್ನು ಸುಧಾರಿಸುವುದು.
- ಗ್ರಾಮೀಣ ಆದಾಯಗಳ ಹಂಚಿಕೆಯಲ್ಲಿನ ಅಸಮಾನತೆಯನ್ನು ಕಡಿಮೆ ಮಾಡುವುದು, ಆದಾಯಗಳಲ್ಲಿ ಗ್ರಾಮೀಣನಗರ ಸಮತೋಲನವನ್ನು ಕಾಪಾಡುವುದು ಮತ್ತು ಆರ್ಥಿಕ ಅವಕಾಶಗಳನ್ನು ಕಲ್ಪಿಸುವುದು.
- ಈ ಸುಧಾರಣೆಗಳ ಸ್ಥಿತಿಗತಿಗೆ ಸಂಪೋಷಣೆ ಹಾಗೂ ವೇಗ ಒದಗಿಸುವ ದೃಷ್ಟಿಯಿಂದ ಸೂಕ್ತ ರೀತಿಯಲ್ಲಿ ಸ್ಪಂದಿಸುವ ಸಾಮರ್ಥ್ಯವನ್ನು ಗ್ರಾಮೀಣ ವಲಯಗಳಲ್ಲಿ ಉಂಟುಮಾಡುವುದು.[4]

ವಿಶ್ವಬ್ಯಾಂಕು ವ್ಯಾಖ್ಯಾನಿಸಿರುವಂತೆ "ಗ್ರಾಮೀಣ ಅಭಿವೃದ್ಧಿಯು ಜನತೆಯ ನಿಶ್ಚಿತ ಸಮೂಹ ಅಂದರೆ ಗ್ರಾಮೀಣ ಬಡವರ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಸುಧಾರಣೆ ಮಾಡುವುದಕ್ಕಾಗಿ ರೂಪಿತವಾಗಿರುವ ಅಭಿವೃದ್ಧಿಗೆ ಸಂಬಂಧಿಸಿದ ಕೌಶಲವಾಗಿದೆ. ಅದು ಗ್ರಾಮೀಣ ಪ್ರದೇಶಗಳಲ್ಲಿ ಜೀವನ ನಿರ್ವಹಣೆಗಾಗಿ ಬಡತನದ ಬವಣೆಯಿಂದ ತೊಳಲಾಡುತ್ತಿರುವ ಕಡುಬಡವರ ಅಭಿವೃದ್ಧಿಗಾಗಿ ಸೌಲಭ್ಯಗಳನ್ನು ನಿರ್ಮಿಸುವುದನ್ನು ಒಳಗೊಂಡಿದೆ. ಆ ಸಮೂಹವು ಸಣ್ಣ ಪ್ರಮಾಣದ ರೈತರು, ಗೇಣಿದಾರರು ಮತ್ತು ಭೂರಹಿತರುಗಳನ್ನು ಒಳಗೊಂಡಿರುತ್ತದೆ.[5]

ಉಮಾ ಲಿಲಿಯವರು ವ್ಯಾಖ್ಯಾನಿಸಿರುವಂತೆ "ಗ್ರಾಮೀಣ ಅಭಿವೃದ್ಧಿಯು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಕಡಿಮೆ ಆದಾಯದ ಜನರ ಜೀವನ ಮಟ್ಟವನ್ನು ಸುಧಾರಿಸುವ ಮತ್ತು ಅವರ ಅಭಿವೃದ್ಧಿಯ ಪ್ರಕ್ರಿಯೆಯು ಸ್ವಯಂ ಸಂಪೋಷಣೆಗೊಳ್ಳುವಂತೆ ಮಾಡುವುದಾಗಿದೆ".[6]

ಮೇಲಿನ ವ್ಯಾಖ್ಯೆಗಳು ಗ್ರಾಮೀಣ ಅಭಿವೃದ್ಧಿಯ ಅರ್ಥ ಮತ್ತು ಸ್ವರೂಪಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತವೆ. ಅವುಗಳ ಆಧಾರದ ಮೇಲೆ ಗ್ರಾಮೀಣ ಅಭಿವೃದ್ಧಿ ಯೋಜನೆಯ ಮೂರು ಪ್ರಮುಖ ನೋಟಗಳನ್ನು ಗುರುತಿಸಬಹುದು.

ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆ

- ಜೀವನ ಮಟ್ಟವನ್ನು ಸುಧಾರಿಸುವುದು.
- ಇಡೀ ಸಮೂಹದ ಪಾಲ್ಗೊಳ್ಳುವಿಕೆ ಮತ್ತು
- ಪ್ರಕ್ರಿಯೆಯು ಸ್ವಯಂ ಸಂಪೋಷಣೆಗೊಳ್ಳುವಂತೆ ಮಾಡುವುದು

ಗ್ರಾಮೀಣ ಅಭಿವೃದ್ಧಿಯು ಗ್ರಾಮೀಣ ಆರ್ಥಿಕತೆಯ ಅಭಿವೃದ್ಧಿಗಾಗಿ ಸೂಚಿತವಾಗಿರುವ ವಿಭಿನ್ನ ಮಾರ್ಗವಾಗಿರುತ್ತದೆ. ಅದು ಕೇವಲ ಕೃಷಿ ಉತ್ಪಾದನೆಯಲ್ಲದೆ ಇಡೀ ಆರ್ಥಿಕತೆಯ ಅಭಿವೃದ್ಧಿಯನ್ನು ಸಾಧಿಸುವ ಗುರಿಯುಳ್ಳ ವಿಭಿನ್ನ ಮಾರ್ಗವಾಗಿರುತ್ತದೆ. ಗ್ರಾಮೀಣ ಅಭಿವೃದ್ಧಿಯು ಬಡತನ ಮತ್ತು ಅಸಮಾನತೆಯ ನಿವಾರಣೆಯ ಮಹತ್ವಾಕಾಂಕ್ಷೆಯನ್ನು ಹೊಂದಿರುತ್ತದೆ.

೩.೨ ಗ್ರಾಮೀಣಾಭಿವೃದ್ಧಿಯ ಉದ್ದೇಶ ಮತ್ತು ಮಹತ್ತ್ವ

ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡಜನರ ಜೀವನ ಮಟ್ಟವನ್ನು ಸುಧಾರಿಸುವುದು ಮತ್ತು ಅವರ ಅಭಿವೃದ್ಧಿ ಪ್ರಕ್ರಿಯೆಯನ್ನು ಸುಸ್ಥಿರಗೊಳಿಸುವುದನ್ನು ಗ್ರಾಮೀಣ ಅಭಿವೃದ್ಧಿ ಎಂದು ಕರೆಯಲಾಗುತ್ತದೆ.

೩.೨.೧ ಉದ್ದೇಶಗಳು: ಗ್ರಾಮೀಣ ಅಭಿವೃದ್ಧಿಯು ನಿರಂತರ ಮತ್ತು ವ್ಯಾಪಕ ಸಾಮಾಜಿಕ ಮತ್ತು ಆರ್ಥಿಕ ಪ್ರಕ್ರಿಯೆಯಾಗಿದ್ದು, ಗ್ರಾಮೀಣ ಜೀವನವನ್ನು ಎಲ್ಲಾ ವಿಧದಲ್ಲಿ ಸುಧಾರಿಸುವ ಗುರಿಯನ್ನು ಹೊಂದಿರುತ್ತದೆ. ಗ್ರಾಮೀಣ ಭಾಗದಲ್ಲಿ ವಾಸಿಸುತ್ತಿರುವ ಎಲ್ಲಾ ಜನರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳನ್ನು ಸುಧಾರಿಸುವುದು ಗ್ರಾಮೀಣಾಭಿವೃದ್ಧಿಯ ಮುಖ್ಯ ಉದ್ದೇಶವಾಗಿರುತ್ತದೆ. ಗ್ರಾಮೀಣ ಅಭಿವೃದ್ಧಿಯು ಕೃಷಿ ಬೆಳವಣಿಗೆ, ನೀರಾವರಿ, ಸಾರಿಗೆ ಸಂಪರ್ಕಾಭಿವೃದ್ಧಿ, ಶಿಕ್ಷಣ, ಆರೋಗ್ಯ, ವಸತಿ, ಉದ್ಯೋಗ, ತರಬೇತಿ, ಸಾಮಾಜಿಕ ಕಲ್ಯಾಣ ಇವೇ ಮುಂತಾದ ಚಟುವಟಿಕೆಗಳನ್ನು ಒಳಗೊಂಡಿರುವ ಒಂದು ವಿಸ್ತೃತ ಅಭಿವೃದ್ಧಿ ಕಾರ್ಯಕ್ರಮವಾಗಿದ್ದು ಗ್ರಾಮೀಣ ಜೀವನದ ಎಲ್ಲಾ ಮಜಲುಗಳನ್ನು ಸ್ಪರ್ಶಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಕೃಷಿಕರು, ಕೃಷಿ ಕಾರ್ಮಿಕರು, ಭೂಹೀನರು, ದುರ್ಬಲ ವರ್ಗದವರು, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಾಗೂ ಬಡತನದ ರೇಖೆಗಿಂತ ಕೆಳಗೆ ವಾಸಿಸುವ ಎಲ್ಲಾ ಜನರ ಜೀವನ ಮಟ್ಟದ ಸುಧಾರಣೆಯು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಉದ್ದೇಶವಾಗಿರುತ್ತದೆ.

ಗ್ರಾಮೀಣಾಭಿವೃದ್ಧಿಯ ಮುಖ್ಯ ಉದ್ದೇಶಗಳು

- ಗ್ರಾಮೀಣ ಬಡಜನರ ಜೀವನಮಟ್ಟ ಸುಧಾರಣೆ
- ಕೃಷಿ ಅಭಿವೃದ್ಧಿ ಮತ್ತು ಆಧುನೀಕರಣ
- ಗ್ರಾಮೀಣ ಭಾರತದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ಸುಧಾರಣೆ ಮತ್ತು ಬದಲಾವಣೆ
- ಪ್ರಾಮಾಣಿಕ ಮತ್ತು ಸಮರ್ಪಿತ ಮುಂದಾಳತ್ವದ ಬೆಳವಣಿಗೆ
- ಉದ್ಯೋಗವಕಾಶಗಳ ಸೃಷ್ಟಿ
- ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿ
- ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಸಾರಿಗೆ, ಸಂಪರ್ಕ, ತರಬೇತಿ ಮುಂತಾದುವುಗಳ ನಿರ್ಮಾಣ ಹಾಗೂ
- ಗ್ರಾಮೀಣ ಪ್ರದೇಶದ ಸಮಗ್ರ ಸುಧಾರಣೆ[7]

೩.೨.೨: ಗ್ರಾಮೀಣ ಅಭಿವೃದ್ಧಿಯ ಮಹತ್ತ್ವ: ಭಾರತ ಹಳ್ಳಿಗಳ ದೇಶವಾಗಿದ್ದು ಶೇಕಡಾ ೭೦ಕ್ಕಿಂತಲೂ ಅಧಿಕ ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಇಲ್ಲಿ ಕೃಷಿಯೇ ಪ್ರಧಾನ ಕಸುಬು. ಗ್ರಾಮೀಣ ಪ್ರದೇಶ ತೀರಾ ಹಿಂದುಳಿದಿದ್ದು, ಜಾತೀಯತೆ, ಬಡತನ ಮತ್ತು ನಿರುದ್ಯೋಗ ವ್ಯಾಪಕವಾಗಿದೆ. ಹಳ್ಳಿಗಳಲ್ಲಿ ರಸ್ತೆಗಳು ಸಾರಿಗೆ ಸಂಪರ್ಕ ವ್ಯವಸ್ಥೆಗಳು, ಅಭಿವೃದ್ಧಿಗೊಂಡಿಲ್ಲ. ಕುಡಿಯುವ ನೀರು, ಆರೋಗ್ಯ, ಸೌಲಭ್ಯಗಳು ಶಿಕ್ಷಣ ವಸತಿ ಮುಂತಾದವುಗಳ ಕೊರತೆಯಿದೆ. ಕೃಷಿಯು ತೀರಾ ಹಿಂದುಳಿದಿದೆ ಹಾಗೂ ಕೃಷಿ ಕ್ಷೇತ್ರವು ಮರೆಮಾಚಿದ ನಿರುದ್ಯೋಗದಿಂದ ತತ್ತರಿಸುತ್ತಿದೆ.[8] ಗ್ರಾಮಗಳ ಅಭಿವೃದ್ಧಿಯಾಗದೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲದ ಮಾತು. ಹೀಗಾಗಿ ಗ್ರಾಮೀಣ ಪ್ರದೇಶದ ಸ್ಥಿತಿಗತಿಗಳನ್ನು ಸುಧಾರಿಸಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಯಾವುದೇ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವಾದರೂ ಗ್ರಾಮೀಣ ಭಾಗದಲ್ಲಿ ವ್ಯಾಪಕವಾಗಿ ಅಸ್ತಿತ್ವದಲ್ಲಿರುವ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳನ್ನು ನಿವಾರಿಸಬೇಕಾಗುತ್ತದೆ.

೩.೩ ಗ್ರಾಮೀಣಾಭಿವೃದ್ಧಿಯ ತಾತ್ತ್ವಿಕ ಹಿನ್ನಲೆ

ಭಾರತದಲ್ಲಿ ಗ್ರಾಮೀಣಾಭಿವೃದ್ಧಿಗೆ ತಾತ್ತ್ವಿಕ ಹಿನ್ನಲೆಯನ್ನು ಒದಗಿಸಿದವರಲ್ಲಿ **ಮಹಾತ್ಮ ಗಾಂಧೀಜಿ** ಪ್ರಮುಖರಾಗುತ್ತಾರೆ. ಅವರ ಧರ್ಮದರ್ಶಿತ್ವ ತತ್ವ, ಗ್ರಾಮ ಸ್ವರಾಜ್ಯ ಪರಿಕಲ್ಪನೆ ಮತ್ತು ಸರ್ವೋದಯ ಪರಿಕಲ್ಪನೆ, ಗ್ರಾಮೀಣಾಭಿವೃದ್ಧಿಗೆ ನೈತಿಕ ಮತ್ತು ತಾತ್ವಿಕ ನೆಲೆಗಟ್ಟನ್ನು ಒದಗಿಸಿಕೊಡುತ್ತವೆ.

ಧರ್ಮದರ್ಶಿತ್ವ ತತ್ವದ ಪ್ರಕಾರ ದೇಶದ ಸಂಪತ್ತು ದೇವರ ಕೊಡುಗೆಯಾಗಿರುತ್ತದೆ. ಎಲ್ಲರೂ ದೇವರ ಮಕ್ಕಳಾಗಿರುವುದರಿಂದ ದೇಶದ ಭೂಮಿ ಮತ್ತು ಸಂಪತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸಮಾನವಾದ ಪಾಲಿದೆ. ಆದರೆ ಭಾರತದಲ್ಲಿ ಸಂಪತ್ತಿನ ವಿತರಣೆಯಲ್ಲಿ ಅಸಮಾನತೆ ಇದೆ. ದೇಶದ ಶೇ. ೧೫ ರಷ್ಟು ಮಂದಿ ಒಟ್ಟು ಭೂಮಿ ಮತ್ತು ಸಂಪತ್ತಿನಲ್ಲಿ ಶೇ. ೮೫ ರಷ್ಟನ್ನು ತಮ್ಮದನ್ನಾಗಿಸಿಕೊಂಡಿದ್ದಾರೆ.[9] ಇದನ್ನು ಸರಿಪಡಿಸಲು ಧರ್ಮದರ್ಶಿತ್ವ ಸೂತ್ರವನ್ನು ಗಾಂಧೀಜಿ ಪ್ರತಿಪಾದಿಸಿದ್ದಾರೆ. ಈ ಸೂತ್ರದ ಪ್ರಕಾರ ಶ್ರೀಮಂತರು ಸಂಪತ್ತಿನ ಒಡೆಯರಲ್ಲ; ಬದಲಾಗಿ ಸಂಪತ್ತಿನ ಕಾವಲು ನಾಯಿಗಳು. ಅವರು ಸಂಪತ್ತನ್ನು ಕಾಯಬೇಕೇ ವಿನಾ ಸ್ವೇಚ್ಛೆಯಿಂದ ಬಳಸುವಂತಿಲ್ಲ. ತಮಗೆ ಎಷ್ಟು ಅಗತ್ಯವೋ ಅಷ್ಟನ್ನು ಇಟ್ಟುಕೊಂಡು ಮಿಗತೆ ಆದಾಯವನ್ನು ಬಡವರಿಗೆ ಹಂಚಬೇಕು. ಇದುವೇ ಧರ್ಮದರ್ಶಿತ್ವ ಸೂತ್ರದ ತಿರುಳು.

ಗಾಂಧೀಜಿಯ ಈ ಸೂತ್ರ ರಕ್ತ ಕ್ರಾಂತಿಯನ್ನು ಪ್ರತಿಪಾದಿಸುವ ಮಾರ್ಕ್ಸ್ ವಾದಕ್ಕೆ ಮತ್ತು ನಕ್ಸಲ್ ವಾದಕ್ಕೆ ಪರ್ಯಾಯವಾಗಿದೆ. ಈ ಸೂತ್ರವು ಸ್ವಸಹಾಯ ಗುಂಪುಗಳ ರಚನೆಗೆ ನೈತಿಕ ನೆಲೆಗಟ್ಟನ್ನು ಒದಗಿಸುತ್ತದೆ.

ಧರ್ಮದರ್ಶಿತ್ವ ತತ್ವವನ್ನು ವಿಸ್ತರಿಸಿ ಗಾಂಧೀಜಿ ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನು ಪ್ರತಿಪಾದಿಸಿದ್ದಾರೆ. ಅದರಲ್ಲಿ ಗ್ರಾಮಗಳು ಸ್ವಾವಲಂಬೀ ಘಟಕಗಳಾಗಬೇಕು ಎಂದು ಗಾಂಧೀಜಿ ಸಾರಿದ್ದಾರೆ. ಸರ್ವ ಸಹೋದರತ್ವ, ಸರ್ವರಿಗೆ ಸಮಪಾಲು ಮತ್ತು ಸಮ ಬಾಳು ಇದು ಗ್ರಾಮ ಸ್ವರಾಜ್ಯದ ಮೂಲ ತಿರುಳಾಗಿದೆ. ಇದನ್ನು ಸರ್ವೋದಯ ಪರಿಕಲ್ಪನೆಯ ಮೂಲಕ ಅವರು ಇನ್ನಷ್ಟು ವಿಸ್ತರಿಸಿದ್ದಾರೆ. ಮಹಾನ್ ಚಿಂತಕ ಜಾನ್ ರಸ್ಕಿನ್ ನ **‘ಅನ್ ಟು ದ ಲಾಸ್ಟ್’** ಕೃತಿಯ ಸ್ಫೂರ್ತಿಯಿಂದ ಗಾಂಧೀಜಿಯ ಸರ್ವೋದಯ ಪರಿಕಲ್ಪನೆ ಹುಟ್ಟಿಕೊಂಡಿದೆ. ಸತ್ಯ, ಅಹಿಂಸೆ, ಪ್ರೇಮ, ಪ್ರಾಮಾಣಿಕತೆ ಸರ್ವಧರ್ಮ ಸಹಿಷ್ಣುತೆ, ವಿಶ್ವ ಸಹೋದರತ್ವ ತ್ಯಾಗ ಮನೋಭಾವ ಇವು ಸರ್ವೋದಯದ ಮೂಲ ಲಕ್ಷಣಗಳಾಗಿವೆ. ಸರ್ವೋದಯ ಪರಿಕಲ್ಪನೆಯು ಅರ್ಥಶಾಸ್ತ್ರಜ್ಞರ ಕಲ್ಯಾಣ ಪರಿಕಲ್ಪನೆಗೆ ಪರ್ಯಾಯವಾಗಿದೆ.[10] ಕಲ್ಯಾಣ ಪರಿಕಲ್ಪನೆಯು ‘ಬಹುಜನರ ಬಹುಹಿತ’ದ ಅರ್ಥದಲ್ಲಿ ರೂಪುಗೊಂಡಿದೆ. ಸರ್ವೋದಯ ಪರಿಕಲ್ಪನೆಯು ಎಲ್ಲರ ಏಳಿಗೆಯನ್ನು ಬಯಸುತ್ತದೆ. ಅದಕ್ಕೆ ‘ಸಹಕಾರ’ ತತ್ವ ಮೂಲ ಪ್ರೇರಣೆಯನ್ನು ಒದಗಿಸುತ್ತದೆ. ಸ್ವಸಹಾಯ ಸಂಸ್ಥೆಗಳ ರೂಪೀಕರಣಕ್ಕೆ ಗಾಂಧೀಜಿಯ ಸರ್ವೋದಯ ಪರಿಕಲ್ಪನೆ ಬಲವಾದ ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸುತ್ತದೆ.

ಗಾಂಧೀಜಿಯ ಚಿಂತನೆಯನ್ನು ಆಧರಿಸಿ **ಗುನ್ನಾರ್ ಮಿರ್ಡಾಲ್ ಹಿಮ್ಮುಖ ಸಂಚಾಲನ** ತತ್ವವನ್ನು ಪ್ರತಿಪಾದಿಸಿದ್ದಾನೆ. ಬಡವರ ಮತ್ತು ಶ್ರೀಮಂತರ, ಹಿಂದುಳಿದ ಮತ್ತು ಮುಂದುವರಿದ, ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದದ ರಾಷ್ಟ್ರಗಳ ನಡುವಣ ವ್ಯವಹಾರಗಳು ಹೇಗೆ ಬಡವರ ಪಾಲಿಗೆ ಪ್ರತಿಕೂಲವಾಗಿರುತ್ತವೆ ಎನ್ನುವುದನ್ನು ಈ ಸಿದ್ಧಾಂತ ವಿವರಿಸುತ್ತದೆ. ಯೋಚನೆ, ಕೌಶಲ್ಯ, ಕ್ರಿಯಾಶೀಲತೆ, ಮುನ್ನುಗ್ಗುವ ಸ್ವಭಾವ ಎಲ್ಲದರಲ್ಲೂ ಹಿಂದುಳಿದಿರುವ ಗ್ರಾಮೀಣ ಬಡವರು ಪೈಪೋಟಿಯ ಜಗತ್ತಿನಲ್ಲಿ ಯಾವಾಗಲೂ ಹಿಂದೆ ಬೀಳುವುದನ್ನು ಮಿರ್ಡಾಲ್ ನ ಹಿಮ್ಮುಖ ಸಂಚಾಲನ ಸಿದ್ಧಾಂತ ತಿಳಿಸುತ್ತದೆ.[11]

ಹಿಮ್ಮುಖ ಸಂಚಾಲನ ಪರಿಣಾಮಗಳನ್ನು ಇಲ್ಲವಾಗಿಸಲು ಮಿರ್ಡಾಲ್ ಶ್ರೀಮಂತರ ಮತ್ತು ಬಡವರ ನಡುವೆ ಸಹಕಾರ ಅನಿವಾರ್ಯ ಎಂದು ಹೇಳಿದ್ದಾನೆ. ಇದು ಗಾಂಧೀಜಿ

ಹೇಳಿದ ಧರ್ಮದರ್ಶಿತ್ವ ತತ್ವದ ಆಧಾರದಿಂದ ರೂಪುಗೊಂಡ ಅಭಿಪ್ರಾಯವಾಗಿರುತ್ತದೆ. ಇರುವ ಸಂಪತ್ತನ್ನು ಸಮಾನವಾಗಿ ಹಂಚಿಕೊಂಡು ಸಾಮುದಾಯಿಕ ಅಭಿವೃದ್ಧಿಗೆ ಯತ್ನಿಸಬೇಕು ಎನ್ನುವುದು ಮಿರ್ಡಾಲನ ಅಭಿಮತವಾಗಿದೆ. ಈ ಚಿಂತನೆಯು ಸ್ವಸಹಾಯ ಗುಂಪುಗಳ ರಚನೆಗೆ ನೈತಿಕ ಪ್ರೇರಣೆಯನ್ನು ಒದಗಿಸುತ್ತದೆ.

ಸ್ವಸಹಾಯ ಗುಂಪುಗಳ ರಚನೆಗೆ ಸೈದ್ಧಾಂತಿಕ ಪ್ರೇರಣೆಯನ್ನು ಜರ್ಮನ್ ಅರ್ಥ ವಿಜ್ಞಾನಿ **ಶುಮಾಕರ್** ತನ್ನ ವಿಶ್ವ ಪ್ರಸಿದ್ಧ ಕೃತಿ 'ಸ್ಮಾಲ್ ಈಸ್ ಬ್ಯೂಟಿಫುಲ್' ಮೂಲಕ ನೀಡಲು ಯತ್ನಿಸಿದ್ದಾನೆ.[12] ಇಡೀ ಕೃತಿಯು ಗಾಂಧೀಜಿಯ ಗ್ರಾಮೀಣ ಕೈಗಾರಿಕೆಗಳ ಪರಿಕಲ್ಪನೆಯ ಮೇಲೆ ಮೂಡಿಬಂದಿದೆ. ಸಣ್ಣ ಪ್ರಮಾಣದ ಉತ್ಪಾದನೆಯನ್ನು ಆತ ಬಲವಾಗಿ ಪ್ರತಿಪದಿಸುತ್ತಾನೆ. ಸಣ್ಣ ಪ್ರಮಾಣದ ಉತ್ಪಾದನೆಗೆ ಸಣ್ಣ ಹೂಡಿಕೆ ಸಾಕಾಗುತ್ತದೆ. ಸ್ವಸಹಾಯ ಸಂಘಗಳು ಹನಿ ಹಣಕಾಸು ವ್ಯವಸ್ಥೆಯನ್ನು ಆಧರಿಸಿವೆ. ಇದು ಸಣ್ಣದು ಸುಂದರವಾದುದು ಎಂಬ ತತ್ವಕ್ಕೆ ಬದ್ಧವಾಗಿರುವುದನ್ನು ಮನಗಾಣಬಹುದು.

೩.೪ ಗ್ರಾಮೀಣ ಅಭಿವೃದ್ಧಿಯ ವ್ಯಾಪ್ತಿ

ಗ್ರಾಮೀಣಾಭಿವೃದ್ಧಿಯ ವ್ಯಾಪ್ತಿಯು ವಿಶಾಲವಾಗಿದ್ದು ಅದು ಏಳು ಪ್ರಮುಖ ಅಂಶಗಳನ್ನು ಒಳಗೊಂಡಿರುತ್ತದೆ:[13]

- **ಸಾಮಾಜಿಕ ಅರಿವನ್ನು ಮೂಡಿಸುವುದು:** ಸಾಮಾಜಿಕ ಅರಿವನ್ನು ಮೂಡಿಸುವುದು ಗ್ರಾಮೀಣಾಭಿವೃದ್ಧಿಯ ಪ್ರಥಮ ಹೆಜ್ಜೆಯಾಗಿರುತ್ತದೆ. ಅಭಿವೃದ್ಧಿ ಹೊಂದಲು ಅಡೆತಡೆಗಳನ್ನುಂಟುಮಾಡುತ್ತಿರುವ ವಿವಿಧ ಅಂಶಗಳು ಯಾವುವು, ಅವುಗಳನ್ನು ನಿವಾರಣೆ ಮಾಡಿಕೊಳ್ಳಲು ಅನುಸರಿಸಬಹುದಾದ ಮಾರ್ಗೋಪಾಯಗಳಾವುವು, ತಾವು ವಾಸಿಸುತ್ತಿರುವ ಸಮುದಾಯದಲ್ಲಿನ ತಮ್ಮ ಹಕ್ಕುಗಳು ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳಾವುವು, ತಮ್ಮ ಪರಂಪರೆಯಲ್ಲಿ ಅಡಕವಾಗಿರುವ ಅಭಿವೃದ್ಧಿಗೆ ಪೂರಕ ಅಂಶಗಳಾವುವು, ಮಾರಕ ಅಂಶಗಳಾವುವು ಇವೇ ಮೊದಲಾದವುಗಳ ಬಗ್ಗೆ ಸ್ಪಷ್ಟ ಅರಿವನ್ನು ಜನರಲ್ಲಿ ಉಂಟು ಮಾಡಬೇಕಾಗುತ್ತದೆ. ವಿಶೇಷ ಸಾಮಾಜಿಕ ಅರಿವನ್ನು ಮೂಡಿಸಲೆಂದೇ ತಯಾರು ಮಾಡಿದ ರೂಪಕಗಳು, ಜಾದೂ, ಸಾಕ್ಷ್ಯಚಿತ್ರಗಳು, ಚಲನಚಿತ್ರಗಳು, ಬೀದಿ ನಾಟಕಗಳು, ಯಕ್ಷಗಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

ಮೊದಲಾದ ಸಮೂಹ ಮಾಧ್ಯಮಗಳು ಉಪಯುಕ್ತವಾಗಬಲ್ಲವು. ಗ್ರಾಮೀಣ ಜನರು ತಮ್ಮ ಸ್ಥಿತಿಗತಿಗಳನ್ನು ತಾವೇ ಅರ್ಥಮಾಡಿಕೊಂಡು ತಾವು ಅಭಿವೃದ್ಧಿ ಹೊಂದಲು ಆಲೋಚಿಸಬಹುದಾದ ವಿವಿಧ ಮಾರ್ಗೋಪಾಯಗಳನ್ನು ಚಿಂತಿಸಿ ತಮ್ಮ ಅಭಿವೃದ್ಧಿಗಾಗಿ ಸತತವಾಗಿ ಕಾರ್ಯೋನ್ಮುಖರಾಗಬೇಕಾಗುತ್ತದೆ. ಅದಕ್ಕೆ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳ ಮಾರ್ಗದರ್ಶನ ಬೇಕಾಗುತ್ತದೆ.

- **ಸಾಮೂಹಿಕವಾಗಿ ತೀರ್ಮಾನ ತೆಗೆದುಕೊಳ್ಳುವುದು ಮತ್ತು ಸಾಮೂಹಿಕವಾಗಿ ಕ್ರಿಯಾಶೀಲರಾಗುವುದು:** ಗ್ರಾಮೀಣ ಪ್ರದೇಶಗಳಲ್ಲಿರುವ ಜನರು ಯಾವಾಗ ತಾವು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ಒಟ್ಟಾಗಿ ಚರ್ಚಿಸುವುದು, ವಿಚಾರ ವಿನಿಮಯ ಮಾಡಿಕೊಳ್ಳುವುದು, ಅರಿವನ್ನುಂಟುಮಾಡಿಕೊಳ್ಳುವುದರಲ್ಲಿ ತೊಡಗುವರೋ ಆಗ ಅಭಿವೃದ್ಧಿ ಹೊಂದುವ ನಿಟ್ಟಿನಲ್ಲಿ ಒಂದು ಆಂದೋಲನ ಹುಟ್ಟಿಕೊಳ್ಳುತ್ತದೆ. ಎಲ್ಲೆಲ್ಲಿಯೂ ಅದೇ ಮಾತುಕತೆ, ಅದೇ ಚಿಂತನೆ, ಮತ್ತು ವಿಚಾರವಿನಿಮಯ ನಡೆದಾಗ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ಸಾಮೂಹಿಕವಾಗಿ ಒಪ್ಪಿಯಾಗಬಹುದಾದ ಅಭಿಪ್ರಾಯ ಮೂಡುತ್ತದೆ. ಅದನು ಅನುಷ್ಠಾನಗೊಳಿಸಲು ಅನುಸರಿಸಬಹುದಾದ ಸುಲಭೋಪಾಯಗಳು, ಅನುಸರಿಸದವರ ಮೇಲೆ ಕೈಗೊಳ್ಳಬಹುದಾದ ಕ್ರಮಗಳು ಇವೇ ಮೊದಲಾದವುಗಳ ಬಗ್ಗೆ ಒಮ್ಮತಕ್ಕೆ ಬರಲು ಸಾಧ್ಯವಾಗುತ್ತದೆ.

- **ಅರ್ಪಣಾಭಾವದ ಗ್ರಾಮೀಣ ನಾಯಕತ್ವ:** ಗ್ರಾಮೀಣ ಅಭಿವೃದ್ಧಿಯನ್ನು ಕೇವಲ ಬಂಡವಾಳ ಸಂಚಯನ ಮಾಡುವುದು ಮತ್ತು ಸರಕಾರದ ಆದೇಶ ಇಷ್ಟರಿಂದಲೇ ಸಾಧಿಸಲು ಸಾಧ್ಯವಿಲ್ಲ. ಅದು ಹೊರಗಡೆಯಿಂದ ಹೇರುವುದಾಗಿರದೆ, ಆಂತರಿಕವಾಗಿ ಮೂಡುವ ಪ್ರಕ್ರಿಯೆಯಾಗಿರುವಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಅದಕ್ಕೆ ಅರ್ಪಣಾಭಾವದ ಕ್ರಿಯಾಶೀಲವಾದ ಗ್ರಾಮೀಣ ನಾಯಕತ್ವ ರೂಪುಗೊಳ್ಳಬೇಕಾಗುತ್ತದೆ. ಪ್ರಾಮಾಣಿಕರಾದ ಮತ್ತು ಅರ್ಪಣಾಭಾವದಿಂದ ಕೂಡಿದ ಗ್ರಾಮೀಣ ನಾಯಕರು ಮಾತ್ರ ಗ್ರಾಮಗಳ ಜನರನ್ನು ಸೂಕ್ತ ರೀತಿಯಲ್ಲಿ ಪ್ರಚೋದಿಸಬಲ್ಲರು. ಗ್ರಾಮೀಣ ಅಭಿವೃದ್ಧಿಯನ್ನು ಮಾಡುವಲ್ಲಿ ನಿಜವಾದ ಕಳಕಳಿಯಿಂದ ಕಾಯೇನ ವಾಚಾ ಮನಸಾ ಕೆಲಸ ಮಾಡಲು ಕಟಿಬದ್ಧರಾಗಿ ಪ್ರಾಮಾಣಿಕತೆಯಿಂದ ಕೂಡಿದ ಅರ್ಪಣಾಭಾವದ

ನಾಯಕರು ಈ ಕಾರ್ಯವನ್ನು ಕೈಗೆತ್ತಿಕೊಂಡು ಕಾರ್ಯೋನ್ಮುಖರಾಗಬೇಕು. ಅವರು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಸಂರಕ್ಷಿಸಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಬೇಕು.

- **ಕೃಷಿ ಮತ್ತು ಇತರ ಅಭಿವೃದ್ಧಿ:** ಗ್ರಾಮೀಣ ಅಭಿವೃದ್ಧಿಯು ಕೇವಲ ಕೃಷಿಯ ಅಭಿವೃದ್ಧಿಗಷ್ಟೇ ಸೀಮಿತವಾಗಿಲ್ಲ. ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವ ನಿಟ್ಟಿನಲ್ಲಿ ಕೃಷಿ ಮತ್ತು ಪೂರಕ ಕ್ಷೇತ್ರಗಳ ಅಭಿವೃದ್ಧಿ ಮಹತ್ವಪೂರ್ಣವಾದುದು. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ಕೃಷಿಯನ್ನು ಪ್ರಭಾವಿಸಿದರೆ ಬಡತನ ಮತ್ತು ನಿರುದ್ಯೋಗ ನಿವಾರಣೆಯಾಗುತ್ತದೆ. ಅದಕ್ಕೆ ಒಂಬತ್ತು ಕ್ರಮಗಳು ಅನುಷ್ಠಾನಗೊಳ್ಳಬೇಕಾಗುತ್ತದೆ.

ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ

- ಅಧಿಕ ಉತ್ಪಾದನೆ ಮಾಡಲು ಹಲವು ಮಾರ್ಗೋಪಾಯಗಳನ್ನು ಕಂಡುಹಿಡಿಯುವುದು.
- ಭೂ ಅಭಿವೃದ್ಧಿ ಯೋಜನೆಗಳನ್ನು ಚುರುಕುಗೊಳಿಸುವುದು.
- ಭೂಸುಧಾರಣೆಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳುವುದು.
- ಸೂಕ್ತ ರೀತಿಯ ನೀರಾವರಿ ಅನುಕೂಲಗಳನ್ನು ಒದಗಿಸುವುದು.
- ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುವುದು.
- ವಿಭಿನ್ನ ಪ್ರಾಂತ್ಯಗಳಲ್ಲಿ ಅನುಸರಿಸಬಹುದಾದ ಅತ್ಯುತ್ತಮ ಕೃಷಿ ವಿಧಿ ವಿಧಾನಗಳನ್ನು ಪ್ರಯೋಗಗಳ ಮೂಲಕ ಕಂಡುಹಿಡಿಯುವುದು.
- ಆಧುನಿಕ ಕೃಷಿ ಸಾಧನ ಸಲಕರಣೆಗಳು ಆದಷ್ಟು ಕಡಿಮೆ ಬೆಲೆಗೆ ಸಿಗುವಂತೆ ಮಾಡುವುದು.
- ನ್ಯಾಯಯುತ ಬೆಲೆ ನೀಡುವ ದಕ್ಷ ಮಾರುಕಟ್ಟೆ ವ್ಯವಸ್ಥೆಯನ್ನು ರೂಪಿಸುವುದು.
- ವಿಭಿನ್ನ ಅಭಿವೃದ್ಧಿ ಯೋಜನೆಗಳ ನಡುವೆ ಸೂಕ್ತ ರೀತಿಯ ಸಮನ್ವಯವನ್ನು ಸಾಧಿಸುವುದು.

- **ಪೂರಕ ಉದ್ಯೋಗಗಳು ಮತ್ತು ಆದಾಯಗಳನ್ನು ಒದಗಿಸುವುದು:** ಮಧ್ಯಮ ವರ್ಗದ ರೈತರು, ಸಣ್ಣ ರೈತರು, ಅತಿ ಸಣ್ಣ ರೈತರು, ಭೂರಹಿತ ಕೃಷಿ ಕಾರ್ಮಿಕರು ಮತ್ತು ಇತರ ಗ್ರಾಮೀಣ ಬಡವರು ಕೇವಲ ಕೃಷಿ ಕಾರ್ಯಗಳಿಗೆ ಮಾತ್ರ ಜೋತು ಬೀಳದೆ ಹೈನುಗಾರಿಕೆ, ಜೇನುಸಾಕಣೆ, ಮೀನುಗಾರಿಕೆ, ಕುರಿ, ಕೋಳಿ, ಹಂದಿ, ಮೀನುಸಾಕಣೆ ಇತ್ಯಾದಿ ಪೂರಕ ಉದ್ಯೋಗಗಳನ್ನು ಮಾಡಿ ಆದಾಯ ಹೆಚ್ಚಿಸಿಕೊಳ್ಳಲು ಅವಕಾಶಗಳನ್ನು ಕಲ್ಪಿಸಬೇಕಾದುದು ತುರ್ತು ಅಗತ್ಯವಾಗಿದೆ. ವಿವಿಧ ಸಹಕಾರಿ ಮತ್ತು ಸರ್ಕಾರಿ ಸಂಘ ಸಂಸ್ಥೆಗಳ ಮೂಲಕ ದುರ್ಬಲ ವರ್ಗದ ಜನರಿಗೆ ಹೈನುಗಾರಿಕೆ, ಜೇನು ಸಾಕಣೆ, ಮೀನುಗಾರಿಕೆ, ಕುರಿ, ಕೋಳಿ, ಹಂದಿ, ಮೀನುಸಾಕಣೆ, ರೇಷ್ಮೆಗಾರಿಕೆ ಮೊದಲಾದ ಉದ್ಯೋಗಗಳಿಗಾಗಿ ಕಡಿಮೆ ಬಡ್ಡಿದರದ ಸಾಲ ಸೌಲಭ್ಯಗಳನ್ನು ಒದಗಿಸುವುದರಿಂದ ಪೂರಕ ಉದ್ಯೋಗಗಳನ್ನು ಕೈಗೊಳ್ಳಲು ಜನರಲ್ಲಿ ಧೈರ್ಯ ಮೂಡುತ್ತದೆ.
- **ಗುಡಿ ಮತ್ತು ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ:** ಗ್ರಾಮೀಣ ಪ್ರದೇಶಗಳಲ್ಲಿನ ನಿರುದ್ಯೋಗಿಗಳು ಮತ್ತು ವಿವಿಧ ಬಗೆಯ ಗುಡಿ ಕೈಗಾರಿಕೆಗಳನ್ನು ಮತ್ತು ಗ್ರಾಮ ಕೈಗಾರಿಕೆಗಳನ್ನು ಕೈಗೆತ್ತಿಕೊಳ್ಳುವಂತೆ ಉದ್ಯಮಶೀಲ ಗುಣವನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸುವುದು, ಕಚ್ಚಾ ಪದಾರ್ಥಗಳು ಸ್ಥಳೀಯವಾಗಿ ದೊರೆಯುವಂತೆ ಮಾಡುವುದು, ಬಂಡವಾಳ ಹೂಡಲು ಧನ ಸಂಗ್ರಹ ಮಾಡುವುದು, ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು, ಇತ್ಯಾದಿಗಳು ಗ್ರಾಮೀಣ ಪ್ರದೇಶದ ಜನರ ಆದಾಯವನ್ನು ಹೆಚ್ಚಿಸುತ್ತವೆ.

೩.೫ ಭಾರತದ ಪ್ರಮುಖ ಗ್ರಾಮೀಣಾಭಿವೃದ್ಧಿ ಯೋಜನೆಗಳು

ಭಾರತವು ೧೯೫೧ರಲ್ಲಿ ಯೋಜನಾ ಯುಗಕ್ಕೆ ಕಾಲಿರಿಸಿತು. ಕೈಗಾರಿಕೆಗೆ ಮಹತ್ವ ನೀಡಿದರೆ ದೇಶ ಮುಂದುವರಿಯುತ್ತದೆಂಬ ಭ್ರಮೆ ನಮ್ಮನ್ನು ಆಳುವವರಿಗಿತ್ತು. ನೆಹರೂ ಯುಗದ ಬಳಿಕ ಆ ಭ್ರಮೆ ಹರಿದು ಹೋಗಿ ಗ್ರಾಮೀಣಾಭಿವೃದ್ಧಿಯಿಂದ ಮಾತ್ರ ದೇಶದ ಆರ್ಥಿಕತೆ ಸುದೃಢಗೊಳ್ಳಲು ಸಾಧ್ಯ ಎಂಬ ಸತ್ಯದ ಅರಿವಾಯಿತು. ಪರಿಣಾಮವಾಗಿ ಹಲವಾರು ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಭಾರತ ಸರಕಾರ ಜಾರಿಗೊಳಿಸಿತು. ಯೋಜನೆಗಳ ಸಂಖ್ಯೆ ಹೆಚ್ಚಾದಂತೆ ಅವುಗಳ ಅನುಷ್ಠಾನ ಮತ್ತು ನಿಭಾವಣೆಯಲ್ಲಿ ಅನೇಕ

ಸಮಸ್ಯೆಗಳು ಕಾಣಿಸಿಕೊಂಡವು. ಆದಕ್ಕಾಗಿ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಸಮನ್ವಯಗೊಳಿಸಿ ಹೊಸ ರೂಪವನ್ನು ನೀಡಲಾಯಿತು.

ದೇಶದಲ್ಲಿ ಈಗ ೯ ಗ್ರಾಮೀಣಾಭಿವೃದ್ಧಿ ಯೋಜನೆಗಳು ಅಸ್ತಿತ್ವದಲ್ಲಿವೆ.[14]

೧. **ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ:** ಗ್ರಾಮೀಣ ಬದುಕಿನ ಸರ್ವಾಂಗೀಣ ಪ್ರಗತಿಗಾಗಿ ೨೧ನೆಯ ಶತಮಾನದ ಆದಿಯಲ್ಲಿ ಅನುಷ್ಠಾನಗೊಳಿಸಲಾದ ಯೋಜನೆಗೆ ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯೆಂದು ಹೆಸರು. ಸುಸ್ಥಿರ ಮಾನವ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದ ೨೦೦೦-೦೧ ರಲ್ಲಿ ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯನ್ನು ಜಾರಿಗೆ ತರಲಾಯಿತು. ಕೆಲವು ಆದ್ಯತಾ ಕ್ಷೇತ್ರಗಳಿಗೆ ಗಮನವೀಯಲು ಆಯ್ದ ಮೂಲ ಕನಿಷ್ಠ ಸೇವೆಗಳಲ್ಲಿ ಕೇಂದ್ರ ಸರಕಾರವು ಈ ಯೋಜನೆಯನ್ವಯ ಹೆಚ್ಚುವರಿ ಧನನಿಯುಕ್ತಿ ಮಾಡುತ್ತದೆ. ಈ ಯೋಜನೆಯನ್ನು ಯೋಜನಾ ಆಯೋಗ ನಿಭಾಯಿಸುತ್ತದೆ.

ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ ಒಳಗೊಂಡಿರುವ ಆರು ಅಂಶಗಳನ್ನು ಒಳಗೊಂಡಿದೆ:

(೧) ಪ್ರಾಥಮಿಕ ಆರೋಗ್ಯ (೨) ಪ್ರಾಥಮಿಕ ಶಿಕ್ಷಣ (೩) ಗ್ರಾಮೀಣ ಮನೆಸವಲತ್ತು (೪) ಗ್ರಾಮೀಣ ಕುಡಿಯುವ ನೀರಿನ ಪೂರೈಕೆ (೫) ಪೌಷ್ಠಿಕಾಂಶ (೬) ಗ್ರಾಮೀಣ ವಿದ್ಯುದೀಕರಣ

೨. **ಸ್ವರ್ಣ ಜಯಂತಿ ಗ್ರಾಮ ಸರೋಜಗಾರ್ ಯೋಜನೆ:** ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ, ದಶಲಕ್ಷ ಬಾವಿ ಯೋಜನೆ ಮತ್ತಿತರ ಸ್ವೋದ್ಯೋಗ ಯೋಜನೆಗಳ ಹೊಸ ರೂಪಕ್ಕೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯೆಂದು ಹೆಸರು. ಏಪ್ರಿಲ್ ೧೯೯೯ ರಲ್ಲಿ ಇದನ್ನು ಅನುಷ್ಠಾನಕ್ಕೆ ತರಲಾಯಿತು. ಇದೀಗ ದೇಶದ ಏಕೈಕ ಸ್ವೋದ್ಯೋಗ ಯೋಜನೆಯಾಗಿರುತ್ತದೆ.

ಈ ಯೋಜನೆಯ ಮುಖ್ಯಾಂಶಗಳು ಮೂರು:

- ಗ್ರಾಮೀಣ ಜನರಿಗೆ ಆದಾಯ ಉತ್ಪತ್ತಿಯ ಸೊತ್ತುಗಳನ್ನು ನೀಡಿ ಅವರನ್ನು ಬಡತನದ ರೇಖೆಯಿಂದ ಮೇಲೆತ್ತುವುದು.

- ಆದಾಯ ಉತ್ಪತ್ತಿಯ ಸಾಧನಗಳನ್ನು ಕೊಳ್ಳಲು ಬ್ಯಾಂಕು ಸಾಲ ಮತ್ತು ಸಬ್ಸಿಡಿ ರೂಪದ ಧನವನ್ನು ಅರ್ಹ ಫಲಾನುಭವಿಗಳಿಗೆ ನೀಡುವುದು.
- ಯೋಜನೆಯ ಶೇ. ೭೫ ರಷ್ಟು ವೆಚ್ಚವನ್ನು ಕೇಂದ್ರ ಸರಕಾರ ಮತ್ತು ಶೇ. ೨೫ ರಷ್ಟು ವೆಚ್ಚವನ್ನು ರಾಜ್ಯ ಸರಕಾರ ಭರಿಸುವುದು.

೩. **ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆ:** ೧೯೮೯ ರ ಏಪ್ರಿಲ್ ೨೮ರಂದು ಆಗಿನ ಪ್ರಧಾನಿ ರಾಜೀವ್ ಗಾಂಧಿ ಜವಾಹರ್ ರೋಜಗಾರ್ ಯೋಜನಾ (JRY) ಜಾರಿಗೆ ತಂದರು. ಅದರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (NREP) ಮತ್ತು ಗ್ರಾಮೀಣ ಭೂರಹಿತರ ಉದ್ಯೋಗ ಖಾತರಿ ಕಾರ್ಯಕ್ರಮ (RLEGP) ಐಕ್ಯವಾದವು. ಬಡತನದ ರೇಖೆಯ ಕೆಳಗಿರುವವರಿಗಾಗಿಯೇ ಸೃಷ್ಟಿಯಾದ ಕಾರ್ಯಕ್ರಮವಿದು. ಅನುಸೂಚಿತ ವರ್ಗ, ಜಾತಿ ಮತ್ತು ಜೀತ ವಿಮುಕ್ತರು ಅದರ ಪ್ರಧಾನ ಫಲಾನುಭವಿಗಳಾಗಿದ್ದರು. ಇಂದಿರಾ ಆವಾಸ್ ಯೋಜನೆ (IAY) ಮತ್ತು ದಶಲಕ್ಷ ಬಾವಿ ಯೋಜನೆ (Million Wells Scheme) ಅದರ ಉಪಕಾರ್ಯಕ್ರಮಗಳಾಗಿದ್ದವು. ಜವಾಹರ್ ರೋಜಗಾರ್ ಯೋಜನೆಯ ಮುಂದುವರಿದ ಕಾರ್ಯಕ್ರಮವಾಗಿ ೧೯೯೯ರ ಏಪ್ರಿಲಲ್ಲಿ ಜವಾಹರ್ ಗ್ರಾಮ ಸಮೃದ್ಧಿ ಯೋಜನೆ (JGSY) ಅದರೊಡನೆ ಉದ್ಯೋಗ ಭರವಸೆ ಯೋಜನೆಯನ್ನು (EAS) ಐಕ್ಯಗೊಳಿಸಿ ೨೦೦೧ ರ ಸೆಪ್ಟೆಂಬರಿನಲ್ಲಿ ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆಯನ್ನು (SGRY) ರೂಪಿಸಲಾಯಿತು.

ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆಯ ಮುಖ್ಯ ಉದ್ದೇಶಗಳು ಮೂರು:

- ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಒದಗಿಸುವುದು.
- ಗ್ರಾಮೀಣ ಪ್ರದೇಶಗಳಲ್ಲಿ ಆಹಾರ ಭದ್ರತೆಯನ್ನು ಒದಗಿಸುವುದು.
- ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ, ಸಾಮುದಾಯಿಕ ಮತ್ತು ಸಾಮಾಜಿಕ ಮೂಲ ಸವಲತ್ತುಗಳನ್ನು ಒದಗಿಸುವುದು.

ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆಯನ್ನು ಪಂಚಾಯತ್ ರಾಜ್ ಸಂಸ್ಥೆಗಳು ಜಾರಿಗೆ ತರುತ್ತವೆ. ಕೂಲಿ ಉದ್ಯೋಗದ ಅಗತ್ಯವಿರುವವರಿಗೆ ಅದನ್ನು ಈ ಯೋಜನೆ ಒದಗಿಸುತ್ತದೆ. ಒಂದು ವರ್ಷದಲ್ಲಿ ೧೦೦ ಕೋಟಿ ಮಾನವ ದಿನಗಳಷ್ಟು

ಉದ್ಯೋಗವನ್ನು ಈ ಯೋಜನೆ ನಿರ್ಮಿಸುತ್ತದೆ. ಈ ಯೋಜನೆಯ ಶೇ. ೭೫ ರಷ್ಟು ವೆಚ್ಚವನ್ನು ಕೇಂದ್ರ ಸರಕಾರ ಮತ್ತು ಶೇ. ೨೫ ರಷ್ಟು ವೆಚ್ಚವನ್ನು ರಾಜ್ಯ ಸರಕಾರಗಳು ಭರಿಸುತ್ತವೆ.

೪. **ಇಂದಿರಾ ಆವಾಸ್ ಯೋಜನೆ:** ಗೃಹರಹಿತ ಬಡತನದ ರೇಖೆಗಿಂತ ಕೆಳಗಿರುವ ಗ್ರಾಮೀಣ ಜನತೆಗಾಗಿ ರೂಪುಗೊಂಡ ಯೋಜನೆಯಿದು. ಇದು ೧೯೮೫-೮೬ರಲ್ಲಿ ಗ್ರಾಮೀಣ ಭೂರಹಿತರಿಗೆ ಉದ್ಯೋಗ ನಿರ್ಮಾಣ ಕಾರ್ಯಕ್ರಮದಡಿಯಲ್ಲಿ ಜಾರಿಗೊಳಿಸಲಾದ ಯೋಜನೆಯಾಗಿರುತ್ತದೆ. ಹಳ್ಳಿಗಳ ಬಡವರಿಗಾಗಿ ಗೃಹ ನಿರ್ಮಿಸುವ ಈ ಯೋಜನೆಯು ಆರಂಭದಲ್ಲಿ ಗೃಹವೊಂದಕ್ಕೆ ರೂ. ೧೪,೦೦೦ ನೆರವು ನೀಡುತ್ತಿತ್ತು. ೨೦೦೩-೦೪ ರವರೆಗೆ ಅದನ್ನು ರೂ. ೨೦,೦೦೦ ಕ್ಕೆ ಏರಿಸಲಾಯಿತು. ಇಂದಿರಾ ಆವಾಸ್ ಯೋಜನೆಯಲ್ಲಿ ಕೇಂದ್ರದ ಪಾಲು ಶೇ. ೭೫ ಮತ್ತು ರಾಜ್ಯಗಳದ್ದು ಶೇ. ೨೫ ಆಗಿರುತ್ತದೆ.

ಎಪ್ರಿಲ್ ೧, ೨೦೦೪ರಿಂದ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ನೀಡುವ ನೆರವಿನ ಮೊತ್ತವನ್ನು ಹೆಚ್ಚಿಸಲಾಗಿದೆ. ಈಗ ಸಾಮಾನ್ಯ ಪ್ರದೇಶಗಳಲ್ಲಿ ರೂ. ೨೫,೦೦೦ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ರೂ. ೨೭,೫೦೦ ನೀಡಲಾಗುತ್ತಿದೆ. ಯೋಜನೆಯಲ್ಲಿ ಶೇ. ೨೦ ರಷ್ಟು ಮೊತ್ತವನ್ನು ಮನೆಗಳನ್ನು ಮೇಲ್ದರ್ಜೆಗೇರಿಸಲು ಬಳಸಲಾಗುತ್ತಿದೆ. ಅದಕ್ಕಾಗಿ ಮನೆಯೊಂದಕ್ಕೆ ರೂ. ೧೨,೫೦೦ ನೀಡಲು ಅವಕಾಶ ಕಲ್ಪಿಸಲಾಗಿದೆ.

ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳು ಬಡತನದ ರೇಖೆಯ ಕೆಳಗಿರುವವರು. ೧೯೯೯ರ ಎಪ್ರಿಲ್ ೪ ರಂದು ವಾರ್ಷಿಕ ಆದಾಯ ರು. ೩೨,೦೦೦ ವರೆಗಿರುವವರಿಗಾಗಿ ಸಾಲ ಮತ್ತು ಸಬ್ಸಿಡಿಯಾಧಾರಿತ ಗ್ರಾಮೀಣ ಗೃಹ ನಿರ್ಮಾಣ ಯೋಜನೆಯೊಂದು ರೂಪುಗೊಂಡಿದೆ. ಇದಕ್ಕಾಗಿ ಗ್ರಾಮೀಣಾಭಿವೃದ್ಧಿ ಸಚಿವಾಲಯವು ೨೦೦೩-೦೪ರಲ್ಲಿ ಹುಡ್ಕೋ ಸಂಸ್ಥೆಗೆ (Housing And Urban Development Corporation) ರೂ. ೧೦ ಕೋಟಿ ನೆರವು ನೀಡಿದೆ.

೫. **ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನಾ:** ಗ್ರಾಮೀಣ ಪ್ರದೇಶಗಳಲ್ಲಿ ಸರ್ವಋತು ಸುಗಮ ಸಂಚಾರಕ್ಕಾಗಿ ರೂಪುಗೊಂಡ ಯೋಜನೆಗೆ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಎಂದು ಹೆಸರು. ಇದು ೨೦೦೦ ದ ಡಿಸೆಂಬರ್ ನಲ್ಲಿ ರೂಪುಗೊಂಡಿತು. ಮುಖ್ಯ ಉದ್ದೇಶಗಳು ಮೂರು:

- ರಸ್ತೆ ಸಂಪರ್ಕ ಇಲ್ಲದ ೧.೬ ಲಕ್ಷ ಜನವಸತಿಗಳಿಗೆ ರಸ್ತೆ ಸಂಪರ್ಕ ನಿರ್ಮಿಸುವುದು.
- ಗ್ರಾಮೀಣ ಪ್ರದೇಶಗಳಲ್ಲಿ ೫೦೦ ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಗುಡ್ಡಗಾಡು ಮತ್ತು ಬುಡಕಟ್ಟು, ಮರುಭೂಮಿ ಪ್ರದೇಶಗಳಲ್ಲಿ ೨೫೦ ರಷ್ಟು ಜನರಿರುವ ವಸತಿಗಳನ್ನು ಯೋಜನೆಯ ಅನುಷ್ಠಾನಕ್ಕಾಗಿ ಆಯ್ದುಕೊಳ್ಳುವುದು.
- ಹತ್ತನೆಯ ಯೋಜನಾಂತ್ಯಕ್ಕೆ ಈ ಕೆಲಸ ಪೂರ್ಣಗೊಳಿಸುವುದು.

ಈ ಯೋಜನೆಯ ಕಾರ್ಯ ನಿರ್ವಹಣೆಯನ್ನು ಸೊಸೈಟೀಸ್ ರೆಜಿಸ್ಟ್ರೇಶನ್ ಆಕ್ಟ್ ಪ್ರಕಾರ ನೋಂದಣಿಯಾಗಿರುವ ನ್ಯಾಶನಲ್ ರೂರಲ್ ರೋಡ್ ಡೆವೆಲಪ್ ಮೆಂಟ್ ಏಜೆನ್ಸಿ (NRRDA) ನೋಡಿಕೊಳ್ಳುತ್ತದೆ. ಕೆಲವು ರಾಜ್ಯಗಳಲ್ಲಿ ಈ ಯೋಜನೆಗೆ ಏಶಿಯನ್ ಡೆವೆಲಪ್ ಮೆಂಟ್ ಬ್ಯಾಂಕ್ (ADB) ನೆರವು ನೀಡುತ್ತಿದೆ.

೬. **ಕ್ಷೇತ್ರಾಭಿವೃದ್ಧಿ ಯೋಜನೆಗಳು:** ೧೯೭೩-೭೪ರಲ್ಲಿ ಆರಂಭಗೊಂಡ ಬರಪೀಡಿತ ಪ್ರದೇಶ ಕಾರ್ಯಕ್ರಮ (DPAP) ೧೯೭೭-೭೮ರಲ್ಲಿ ರೂಪುಗೊಂಡ ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮ (DDP) ಮತ್ತು ೧೯೮೯-೯೦ರಲ್ಲಿ ಅನುಷ್ಠಾನಗೊಂಡ ಸಮಗ್ರ ವ್ಯರ್ಥಭೂಮಿ ಅಭಿವೃದ್ಧಿ ಕಾರ್ಯಕ್ರಮ (IWDP) ಇವು ಈಗಲೂ ಅಸ್ತಿತ್ವದಲ್ಲಿರುವ ಮೂರು ಕ್ಷೇತ್ರಾಭಿವೃದ್ಧಿ ಯೋಜನೆಗಳಾಗಿವೆ.

ಈ ಮೂರೂ ಯೋಜನೆಗಳಲ್ಲಿ ಹೆಕ್ಟೇರಿಗೆ ರೂ. ೬೦೦೦ದಂತೆ ವ್ಯಯ ಮಾಡಲು ಉದ್ದೇಶಿಸಲಾಗಿದೆ. ಮೊದಲೆರಡು ಯೋಜನೆಗಳಲ್ಲಿ ಕೇಂದ್ರವು ಹೆಕ್ಟೇರಿಗೆ ರೂ. ೪೫೦೦ ಮತ್ತು ರಾಜ್ಯಗಳು ರೂ. ೧೫೦೦ ರಂತೆ ನೀಡಬೇಕಾಗುತ್ತದೆ. ಮೂರನೆಯ ಯೋಜನೆಯಡಿಯಲ್ಲಿ ಕೇಂದ್ರವು ಹೆಕ್ಟೇರಿಗೆ ರೂ. ೫೫೦೦ ನೀಡಿದರೆ ರಾಜ್ಯಗಳು ರೂ. ೫೦೦ ನೀಡುತ್ತವೆ.

೭. **ಅಂತ್ಯೋದಯ ಅನ್ನ ಯೋಜನೆ:** ಬಡತನದ ರೇಖೆಯ ಕೆಳಗಿರುವ ಅತ್ಯಂತ ಬಡ ೧ ಕೋಟಿ ಜನರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿಶೇಷ ಸವಲತ್ತು ನೀಡುವುದನ್ನು ಅಂತ್ಯೋದಯ ಅನ್ನ ಯೋಜನೆಯೆಂದು ಕರೆಯಲಾಗುತ್ತದೆ. ಇದನ್ನು ೨೦೦೦ ಡಿಸೆಂಬರ್ ನಲ್ಲಿ ಕಾರ್ಯರೂಪಕ್ಕೆ ತರಲಾಯಿತು.

ಈ ಯೋಜನೆಯ ಫಲಾನುಭವಿಗಳಿಗೆ ೨೫ ಕೆ.ಜಿ. ಧಾನ್ಯವನ್ನು ಬಹಳ ಕಡಿಮೆ ದರದಲ್ಲಿ ವಿತರಿಸಲಾಗುತ್ತದೆ. ಗೋಧಿಯನ್ನು ಕಿಲೋ ಒಂದಕ್ಕೆ ರೂ. ೨ರ ದರದಲ್ಲಿ ಮತ್ತು ಅಕ್ಕಿಯನ್ನು ಕಿಲೋ ಒಂದಕ್ಕೆ ರೂ. ೩ರ ದರದಲ್ಲಿ ಈ ಯೋಜನೆಯನ್ವಯ ನೀಡಲಾಗುತ್ತದೆ. ಎಪ್ರಿಲ್ ೨೦೦೨ರಿಂದ ಫಲಾನುಭವಿಗಳಿಗೆ ೨೫ರ ಬದಲು ೩೫ ಕೆ.ಜಿ. ಧಾನ್ಯವನ್ನು ಈ ದರದಲ್ಲಿ ಒದಗಿಸಲಾಗುತ್ತದೆ.

೮. **ಸ್ವರ್ಣಜಯಂತಿ ಶಹರಿ ರೋಜಗಾರ್ ಯೋಜನಾ (SJSRY):** ೧೯೯೭ರ ಡಿಸೆಂಬರ್‌ನಲ್ಲಿ ಸ್ವರ್ಣಜಯಂತಿ ಶಹರಿ ರೋಜಗಾರ್ ಯೋಜನಾ ಜಾರಿಗೆ ಬಂದಿತು. ನಗರ ಪ್ರದೇಶದ ಸ್ವೋದ್ಯೋಗ ಕಾರ್ಯಕ್ರಮಕ್ಕೆ ಸ್ವರ್ಣಜಯಂತಿ ಶಹರಿ ರೋಜಗಾರ್ ಯೋಜನಾ ಎಂದು ಹೆಸರು. ಭಾರತವು ಸ್ವಾತಂತ್ರ್ಯ ಗಳಿಸಿ ೫೦ ವರ್ಷಗಳಾದ ಸಂದರ್ಭದಲ್ಲಿ ಸ್ವರ್ಣ ಜಯಂತಿ ಗ್ರಾಮ ಮತ್ತು ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಗಳು ರೂಪುಗೊಂಡವು. ಮೊದಲನೆಯದು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಎರಡನೆಯದು ನಗರ ಪ್ರದೇಶಗಳಲ್ಲಿ ಸ್ವೋದ್ಯೋಗವನ್ನು ಉತ್ತೇಜಿಸುವ ಕಾರ್ಯಕ್ರಮಗಳಾಗಿವೆ.

ಸ್ವರ್ಣಜಯಂತಿ ಶಹರಿ ರೋಜಗಾರ್ ಯೋಜನೆಯು ಈಗ ನಗರ ಪ್ರದೇಶದ ಬಡತನ ಮತ್ತು ನಿರುದ್ಯೋಗ ನಿವಾರಣೆಯ ಏಕೈಕ ಕಾರ್ಯಕ್ರಮವಾಗಿದೆ. ಈ ಯೋಜನೆಯ ಖರ್ಚಿನಲ್ಲಿ ಶೇ. ೭೫ ಕೇಂದ್ರ ಮತ್ತು ಶೇ. ೨೫ ರಾಜ್ಯ ಭರಿಸುತ್ತದೆ.

೯. **ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆ:** ಬಡತನ ರೇಖೆಯ ಕೆಳಗಿರುವ ನಗರ ಪ್ರದೇಶಗಳ ವಸತಿ ರಹಿತ ಕೊಳಚೆ ನಿವಾಸಿಗಳಿಗೆ ಗೃಹ ಸವಲತ್ತು ಒದಗಿಸಲು ರೂಪಿಸಲಾದ ಕಾರ್ಯಕ್ರಮಕ್ಕೆ ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆ (VAMBAY) ಎಂದು ಹೆಸರು.

ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯ ಮುಖ್ಯ ಉದ್ದೇಶಗಳು ಎರಡು:

- ಕೊಳಚೆ ನಿವಾಸಿಗಳಿಗಾಗಿ ಗೃಹ ನಿರ್ಮಾಣ ಅಥವಾ ಇರುವ ಮನೆಯನ್ನು ಮೇಲ್ದರ್ಜೆಗೇರಿಸುವುದು.
- ನಿರ್ಮಲ ಭಾರತಿ ಅಭಿಯಾನ ಯೋಜನೆಯನ್ವಯ ಸಾಮುದಾಯಿಕ ಶೌಚಾಲಯಗಳನ್ನು ನಿರ್ಮಿಸಿ ಕೊಳಚೆ ನಿವಾಸಿಗಳಿಗೆ ಆರೋಗ್ಯಕರ ಮತ್ತು ನಗರದ ವಾತಾವರಣವನ್ನು ನಿರ್ಮಿಸುವುದು.

ಈ ಯೋಜನೆಗೆ ಶೇ. ೫೦ ರಷ್ಟು ಸಬ್ಸಿಡಿಯನ್ನು ಕೇಂದ್ರ ಸರಕಾರ ನೀಡುತ್ತದೆ. ಉಳಿದ ಶೇ. ೫೦ ರಷ್ಟನ್ನು ರಾಜ್ಯ ಸರಕಾರ ಭರಿಸುತ್ತದೆ.

ಹೀಗೆ ಬಡತನ ಮತ್ತು ನಿರುದ್ಯೋಗ ನಿವಾರಣೆಗಾಗಿ ಅನೇಕ ಕ್ರಮಗಳನ್ನು ಭಾರತ ಸರ್ಕಾರ ಕೈಗೊಂಡಿದೆ. ಆದರೆ ಈ ಕ್ರಮಗಳು ಕ್ರಾಂತಿಕಾರಕ ಪರಿಣಾಮಗಳನ್ನು ಉಂಟು ಮಾಡಿಲ್ಲ. ಆಳುವವರಲ್ಲಿ ಬದಲಾವಣೆ ಸಂಭವಿಸಲೇಬೇಕೆಂಬ ಇಚ್ಛಾಶಕ್ತಿ ಇಲ್ಲದಿರುವುದು ಇದಕ್ಕೆ ಕಾರಣವಾಗಿದೆ. ಅನೇಕ ಸಂದರ್ಭಗಳಲ್ಲಿ ಯೋಜನೆಯ ಪ್ರಯೋಜನ ಅರ್ಹರಿಗೆ ಸಂದಾಯವಾಗಿಲ್ಲವೆಂಬ ದೂರುಗಳಿವೆ. ಅಲ್ಲದೆ ಅನೇಕ ಯೋಜನೆಗಳು ಕಾಗದ ಪತ್ರಗಳಲ್ಲಿ ಮಾತ್ರ ಪ್ರಗತಿ ಕಂಡಿವೆಯೆಂದೂ ಯೋಜನೆಗೆ ಬಿಡುಗಡೆಯಾದ ಹಣ ಭ್ರಷ್ಟವ್ಯವಸ್ಥೆಯಲ್ಲಿ ರಾಜಕಾರಣಿ ಮತ್ತು ಅಧಿಕಾರಿಗಳ ಪಾಲಾಗಿದೆಯೆಂದೂ ಆಕ್ಷೇಪಗಳು ಕೇಳಿಬರುತ್ತಿವೆ. ನಮ್ಮ ಜನರು ಪ್ರಾಮಾಣಿಕರಾಗದಿದ್ದರೆ ಮತ್ತು ಆಡಳಿತವು ಪಾರದರ್ಶಕವಾಗಿರದಿದ್ದರೆ ಯಾವ ಯೋಜನೆಯೂ ಯಶಸ್ವಿಯಾಗಲಾರದು.

೩.೬ ಗ್ರಾಮೀಣಾಭಿವೃದ್ಧಿಯ ಸಮಸ್ಯೆಗಳು

ಒಂದು ಕೈಯಿಂದ ಚಪ್ಪಾಳೆ ತಟ್ಟಲು ಸಾಧ್ಯವಿಲ್ಲ. ಕೆಲವೇ ಮಂದಿಗಳಿಂದ ಗ್ರಾಮೀಣಾಭಿವೃದ್ಧಿ ಸಾಧಿಸುವುದು ಅಸಾಧ್ಯದ ಮಾತು. ಅದೊಂದು ಸಾಮುದಾಯಿಕ ಕ್ರಿಯೆ. ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಯು ಐದು ಸಮಸ್ಯೆಗಳನ್ನು ಎದುರಿಸುತ್ತಿದೆ.

- **ಸರಕಾರದ ನಿರ್ಲಕ್ಷ್ಯ:** ಗ್ರಾಮೀಣಾಭಿವೃದ್ಧಿಗೆ ಸಂಬಂಧ ಪಟ್ಟಂತೆ ದೇಶ ಕಾಲ ಸೂಕ್ತವಾದ ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಸರಕಾರಗಳು ನಿರ್ಲಕ್ಷ್ಯ ತೋರುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಸರಕಾರದ

ನಡೆಸುವುದು ನಮ್ಮ ಧುರೀಣರುಗಳಿಗೆ ಅಪ್ಯಾಯಮಾನವಾಗಿದೆ. ಆದುದರಿಂದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ನೆನೆಗುದಿಗೆ ಬಿದ್ದಿವೆ.

೩.೭ ಸ್ವಸಹಾಯ ಗುಂಪುಗಳ ಅನಿವಾರ್ಯತೆ

ಸರಕಾರದ ಗ್ರಾಮೀಣಾಭಿವೃದ್ಧಿ ಯೋಜನೆಗಳು ಅರ್ಹರನ್ನು ಮುಟ್ಟುತ್ತಿಲ್ಲ ಎನ್ನುವುದು ಅನೇಕ ವರ್ಷಗಳಿಂದ ಕೇಳಿಬರುತ್ತಿರುವ ಒಂದು ಆಪಾದನೆಯಾಗಿದೆ. ಬಡತನ ಮತ್ತು ನಿರುದ್ಯೋಗ ನಿವಾರಣಾ ಯೋಜನೆಗಳು ತಮ್ಮ ಹಳೆಯ ಹೆಸರನ್ನು ಬದಲಾಯಿಸಿಕೊಂಡು ಬೇರೆ ಬೇರೆ ರೂಪಗಳಲ್ಲಿ ಅನುಷ್ಠಾನಕ್ಕೆ ಬರುತ್ತಿವೆ. ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ. ಸ್ವರ್ಣಜಯಂತಿ ಷಹರ್ ಯೋಜನೆ ಇತ್ಯಾದಿಯಾಗಿ ಈಗ ಅಸ್ತಿತ್ವದಲ್ಲಿರುವ ಯೋಜನೆಗಳು ಹಳೆಯ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (NREP) ಮತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (IRDP) ಇವುಗಳ ಆವಿಷ್ಕಾರಿಕ ನೂತನ ರೂಪಗಳಾಗಿವೆ.

ಗ್ರಾಮೀಣಾಭಿವೃದ್ಧಿ ಯೋಜನೆಯ ಹುಳುಕುಗಳು

- ಅವು ಅರ್ಹರನ್ನು ತಲುಪುತ್ತಿಲ್ಲ.
- ಫಲಾನುಭವಿಗಳ ಆಯ್ಕೆಯಲ್ಲಿ ರಾಜಕೀಯ ನಡೆಯುತ್ತದೆ.
- ಯೋಜನೆಗಳ ಅನುಷ್ಠಾನದಲ್ಲಿ ಪ್ರಾಮಾಣಿಕತೆ ಇಲ್ಲ.
- ಅರ್ಹರಿಗೆ ಯೋಜನೆಯ ಬಗ್ಗೆ ಅರಿವಿಲ್ಲ.

ಈ ಸಮಸ್ಯೆಗಳ ಹಿನ್ನೆಲೆಯಲ್ಲಿ ಸರಕಾರೇತರ ಸ್ವಸಹಾಯ ಗುಂಪುಗಳಿಗೆ ಮಹತ್ವ ಪ್ರಾಪ್ತವಾಗುತ್ತದೆ. ಶ್ರೀಕ್ಷೇತ್ರ ಧರ್ಮಸ್ಥಳದ ಪ್ರಗತಿಬಂಧು ಸ್ವಸಹಾಯ ಯೋಜನೆಯು ಸರಕಾರದ ಬಡತನದ ಮತ್ತು ನಿರುದ್ಯೋಗ ನಿವಾರಣಾ ಕಾರ್ಯಕ್ರಮಗಳನ್ನು ಅರ್ಹರಿಗೆ ಮುಟ್ಟಿಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತಿದೆ.

೩.೮ ಶ್ರೀಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ

ಶ್ರೀಕ್ಷೇತ್ರ ಧರ್ಮಸ್ಥಳವು ಭಾರತದ ಪವಿತ್ರ ಯಾತ್ರಾ ಸ್ಥಳಗಳಲ್ಲಿ ಒಂದು. ಅನ್ನದಾನ, ವಿದ್ಯಾದಾನ, ವಸ್ತ್ರದಾನ ಮತ್ತು ಆರೋಗ್ಯದಾನದಿಂದ ಖ್ಯಾತಿ ಪಡೆದಿರುವ ಶ್ರೀಕ್ಷೇತ್ರದ ಧರ್ಮಾಧಿಕಾರಿಯಾಗಿ ರಾಜರ್ಷಿ ಡಾ।ವೀರೇಂದ್ರ ಹೆಗ್ಗಡೆಯವರು ೧೯೬೮ ರಲ್ಲಿ ಪಟ್ಟಾಭಿಷಿಕ್ತರಾದ ಮೇಲೆ ಸುವರ್ಣಕ್ಕೆ ಸುಗಂಧ ಮೂಡಿದಂತೆ ಕ್ಷೇತ್ರದ ಕಾರ್ಯಗಳಿಗೆ ಹೊಸ ಆಯಾಮ ದೊರಕಿತು. ೧೯೮೨ರಲ್ಲಿ ಹುಟ್ಟಿಕೊಂಡ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಡಾ। ವೀರೇಂದ್ರ ಹೆಗ್ಗಡೆಯವರ ಮನೋಮಂಥನದಲ್ಲಿ ಮೂಡಿ ಬಂದ ನವನೀತ.

ಅಶಕ್ತರಿಗೆ ಮತ್ತು ದೀನದಲಿತರಿಗೆ ದಾನ ನೀಡಬೇಕಾದುದು ಮಾನವ ಧರ್ಮ. ಹಸಿದವನಿಗೆ ಮೀನನ್ನು ನೀಡಬೇಡ ಮೀನು ಹಿಡಿಯಲು ಕಲಿಸು ಎನ್ನುತ್ತದೆ ಒಂದು ಚೀನಿಗಾದೆ. ದಾನವನ್ನು ಶಾಶ್ವತವಾಗಿ ಅವಲಂಬಿಸುವ ಮಂದಿಗಳು ವ್ಯೆಗಳ್ಳರಾಗಿ ಆರ್ಥಿಕತೆಗೊಂದು ಹೊರೆಯಾಗುತ್ತಾರೆ. ಮೀನು ಹಿಡಿಯುಲು ಕಲಿಸುವುದು ಸ್ವಾವಲಂಬೀ ಬಾಳಿಗಾಗಿ ಮಾಡುವ ಮಾರ್ಗದರ್ಶನವಾಗಿರುತ್ತದೆ. ಡಾ। ಹೆಗ್ಗಡೆಯವರು ಸ್ವಾವಲಂಬನೆಯ ಬಾಳನ್ನು ಕಲಿಸಲೆಂದೇ ಗ್ರಾಮಾಭಿವೃದ್ಧಿ ಯೋಜನೆಯನ್ನು ರೂಪಿಸಿದರು. ಅದೀಗ ರಜತೋತ್ಸವದ ಸಂಭ್ರಮದಲ್ಲಿದೆ.

೩.೮.೧ ಪ್ರಗತಿಬಂಧು ಯೋಜನೆ:

ಭಾರತದಲ್ಲಿ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಕಳೆದ ಕೆಲವು ವರ್ಷಗಳಿಂದ ಸ್ವ-ಸಹಾಯ ಸಂಘಗಳನ್ನು ರಚಿಸಿ ನಡೆಸಿಕೊಂಡು ಬರುತ್ತಿವೆ. ಅವುಗಳಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯನ್ವಯ ರೂಪುಗೊಂಡ ಸ್ವಸಹಾಯ ಸಂಘಗಳು ಕ್ಷೇತ್ರದ ಹೆಸರು, ಡಾ। ವೀರೇಂದ್ರ ಹೆಗ್ಗಡೆಯವರ ವರ್ಚಸ್ಸು ಮತ್ತು ಕಾರ್ಯಕರ್ತರ ಬದ್ಧತೆ ಮತ್ತು ಪ್ರಾಮಾಣಿಕತೆಯಿಂದ ವಿಭಿನ್ನವಾಗಿ ನಿಲ್ಲುತ್ತವೆ. 'ಪ್ರಗತಿಬಂಧು' ಎನ್ನುವ ಹೆಸರಿನಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮ ಗ್ರಾಮೀಣ ಬಡವರ ಸರ್ವತೋಮುಖ ಅಭಿವೃದ್ಧಿಗೆ ಹೊಸ ಆಯಾಮವನ್ನು ನೀಡಿದೆ. "ಬಡವನಾಗಿ ಹುಟ್ಟಿದ್ದು ನಿನ್ನ ತಪ್ಪಲ್ಲ, ಬಡವನಾಗಿ ಸಾಯುವುದು ನಿನ್ನ ತಪ್ಪು" ಎಂಬ ವಿಶ್ವದ ಐಟಿ ದೊರೆ ಬಿಲ್‌ಗೇಟ್ಸ್‌ನ ಮಾತನ್ನು ಬಡತನದ ರೇಖೆಯ ಕೆಳಗಿರುವವರಿಗೆ ಮುಟ್ಟಿಸಿ, ಅವರಲ್ಲಿ ಸ್ವಯಂ ಅಭಿವೃದ್ಧಿಯ ಕೆಚ್ಚನ್ನು ಮೂಡಿಸಿ,

ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆಯಿರಿ ಎನ್ನುವ ಉದ್ದೇಶದಿಂದ ಪ್ರಗತಿಬಂಧು ಸ್ವಸಹಾಯ ಸಂಘಗಳು ಹುಟ್ಟಿಕೊಂಡಿದೆ.


ಪ್ರಗತಿಬಂಧು ಸಂಘಟನೆಯ ಸದಸ್ಯತ್ವ ಮತ್ತು ಸ್ವರೂಪ: ಒಂದೇ ಪ್ರದೇಶದಲ್ಲಿ ವಾಸಿಸುತ್ತಿರುವ, ಸಮಾನ ಆರ್ಥಿಕ ಮಟ್ಟ, ಸಮಾನ ಸಮಸ್ಯೆ ಮನೋಧರ್ಮಗಳನ್ನು ಹೊಂದಿರುವ ಕುಟುಂಬಗಳು ಒಂದೆಡೆ ಸೇರಿ ಸ್ವಸಹಾಯ ಮತ್ತು ಪರಸ್ಪರ ಸಹಾಯದ ಮೂಲಕ ಅಭಿವೃದ್ಧಿ ಸಾಧಿಸುವ ಉದ್ದೇಶದಿಂದ ಪ್ರಗತಿಬಂಧು ತಂಡಗಳನ್ನು ರಚಿಸಲಾಗಿದೆ. ಒಂದು ತಂಡದಲ್ಲಿ ಸದಸ್ಯರ ಕನಿಷ್ಠ ಐದು ಮತ್ತು ಗರಿಷ್ಠ ಹತ್ತು ಇರಬೇಕು.

ಅರ್ಹತೆಗಳು

- ಕನಿಷ್ಠ ಅರ್ಧ ಎಕರೆ ಕೃಷಿ ಭೂಮಿಯನ್ನು ಹೊಂದಿರಬೇಕು.
- ಕಡ್ಡಾಯ ಶ್ರಮ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವತಃ ದುಡಿಯಲು ಸಿದ್ಧನಿರಬೇಕು.
- ಕಡ್ಡಾಯ ಉಳಿತಾಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರತಿವಾರ ನಿರ್ದಿಷ್ಟ ಮೊತ್ತವನ್ನು ಉಳಿತಾಯ ಮಾಡಬೇಕು.

ಪ್ರತಿಯೊಂದು ತಂಡಕ್ಕೂ ಪ್ರಬಂಧಕ ಮತ್ತು ಸಂಯೋಜಕ ಎಂಬ ಇಬ್ಬರು ನಾಯಕರಿರುತ್ತಾರೆ. ಇವರ ನೇತೃತ್ವದಲ್ಲಿ ತಂಡದ ಕಾರ್ಯ ಕಲಾಪಗಳು ನಡೆಯುತ್ತವೆ.


ಐದರಿಂದ ಹತ್ತರವರೆಗೆ ಸದಸ್ಯರು ಸೇರಿದರೆ ಪ್ರಗತಿಬಂಧು ಗುಂಪು ರೂಪುಗೊಳ್ಳುತ್ತದೆ. ಪ್ರಗತಿಬಂಧು ಸಂಘಟನಾ ಸ್ವರೂಪ ಹೀಗಿದೆ.



ನಕ್ಷೆ ೩.೧ ಪ್ರಗತಿ ಬಂಧು ಸಂಘಟನೆಯ ಸ್ವರೂಪ


ಕುಟುಂಬಗಳು ಮೂಲ ಘಟಕಗಳಾಗಿರುತ್ತವೆ. ಐದು ಕನಿಷ್ಠ ಮತ್ತು ಹತ್ತು ಗರಿಷ್ಠ ಮಂದಿ ಸೇರಿದರೆ ಪ್ರಗತಿಬಂಧು ತಂಡ ರೂಪುಗೊಳ್ಳುತ್ತದೆ. ಇಪ್ಪತ್ತು ತಂಡಗಳು ಸೇರಿ ಪ್ರಗತಿಬಂಧು ಒಕ್ಕೂಟ ರಚನೆಯಾಗುತ್ತದೆ. ತಾಲೂಕೊಂದರ ಎಲಾ ಒಕ್ಕೂಟಗಳು ಸೇರಿ ಪ್ರಗತಿಬಂಧು ಕೇಂದ್ರ ಸಮಿತಿ ರೂಪುಗೊಳ್ಳುತ್ತದೆ.[15]

ಪ್ರಗತಿಬಂಧು ಕಾರ್ಯಕ್ರಮದ ನಿರ್ವಹಣೆ ಮತ್ತು ಆಡಳಿತ ವ್ಯವಸ್ಥೆ ಹೀಗಿರುತ್ತದೆ.



ನಕ್ಷೆ ೩.೨ ಪ್ರಗತಿ ಬಂಧು ಕಾರ್ಯಕ್ರಮದ ನಿರ್ವಹಣೆ ಮತ್ತು ಆಡಳಿತ ವ್ಯ ವಸ್ಥೆ

ಪ್ರಗತಿಬಂಧು ತಂಡವನ್ನು ನಿರ್ವಹಿಸಲು ಪ್ರಗತಿ ಸಹಾಯಕರುಗಳು ಇರುತ್ತಾರೆ. ಕಾರ್ಯನಿರ್ವಾಹಕರುಗಳು ಪ್ರಗತಿಯ ಸಹಾಯಕರುಗಳಿಗೆ ಬೇಕಾದ ತರಬೇತಿ, ನಿರ್ವಹಣೆಯನ್ನು ನೀಡುತ್ತಾರೆ. ಪ್ರಗತಿಬಂಧು ತಂಡವನ್ನು ವಲಯ ಮಟ್ಟದ



ಮೇಲ್ವಿಚಾರಕರುಗಳು ನಿರ್ವಹಣೆ ಮಾಡುತ್ತಾರೆ. ಪ್ರತಿಯೊಬ್ಬ ಮೇಲ್ವಿಚಾರಕನು ಕೃಷಿ ನಿರ್ದೇಶಕರು, ಕಾರ್ಯಸಂಯೋಜಕರು, ಕಾರ್ಯದರ್ಶಿ, ಅಭಿವೃದ್ಧಿ ಕಾರ್ಯದರ್ಶಿ, ಮತ್ತು ತರಬೇತಿ ಸಂಯೋಜಕರುಗಳ ಅಧೀನದಲ್ಲಿದ್ದು ಎಲ್ಲಾ ರೀತಿಯ ವಿಷಯಗಳನ್ನು ತಿಳಿದುಕೊಂಡು ನಂತರ ತನ್ನ ವಲಯಕ್ಕೆ ಸೀಮಿತವಾದ ತಂಡಗಳಿಗೆ ಮತ್ತು ಕಾರ್ಯನಿರ್ವಾಹಕರುಗಳಿಗೆ ತರಬೇತಿ ಮತ್ತು ಮಾಹಿತಿಯನ್ನು ನೀಡುತ್ತಾನೆ. ಪ್ರಗತಿಬಂಧು ತಂಡದ ಮುಖ್ಯವಾದ ಜವಾಬ್ದಾರಿಯನ್ನು ಹಂಚಿಕೆ ಮಾಡಿ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ನಿರ್ದೇಶಕರುಗಳಿಗೆ ಇರುತ್ತದೆ. ನಿರ್ದೇಶಕರ ಕೈಕೆಳಗೆ ಐದು ಮಂಡಳಿಗಳು ಕಾರ್ಯನಿರ್ವಹಿಸುತ್ತವೆ. ಮುಖ್ಯವಾಗಿ ಕೃಷಿ ನಿರ್ದೇಶಕರು, ಕಾರ್ಯ ಸಂಯೋಜಕರು, ಕಾರ್ಯದರ್ಶಿ, ಅಭಿವೃದ್ಧಿ ಕಾರ್ಯದರ್ಶಿ ಮತ್ತು ತರಬೇತಿ ಸಂಯೋಜಕರುಗಳು ಇರುತ್ತಾರೆ. ಪ್ರಗತಿಬಂಧು ತಂಡಗಳು ಸಂಪೂರ್ಣ ಜವಾಬ್ದಾರಿಯನ್ನು ಮತ್ತು ಮುಖ್ಯವಾದ ಅಂತಿಮ ಅಧಿಕಾರವನ್ನು ಹೊಂದಿರುವವರು ಅಧ್ಯಕ್ಷರಾಗಿರುತ್ತಾರೆ. ಅಧ್ಯಕ್ಷರ ಸಮಾಲೋಚನೆಯಂತ ಕಾರ್ಯರೂಪ, ಯೋಜನೆಗಳು ನಡೆಯುತ್ತದೆ.

೩.೮.೨ ಪ್ರಗತಿಬಂಧು ಯೋಜನೆಯ ಅನ್ವಯಿಕೆ

- **ವಾರದ ಸಭೆ:** ಪ್ರಗತಿಬಂಧು ಸ್ವಸಹಾಯ ಸಂಘದ ಜೀವನಾಡಿಯು ವಾರದ ಸಭೆಯಾಗಿರುತ್ತದೆ. ಪ್ರತಿಯೊಂದು ತಂಡವು ತನ್ನ ವಾರದ ಶ್ರಮ ವಿನಿಮಯದ ದಿನ ಕೆಲಸದ ಮಧ್ಯೆ ಬಿಡುವು ಮಾಡಿಕೊಂಡು ಸಭೆ ನಡೆಸುತ್ತದೆ. ವಾರದ ಸಭೆಯಲ್ಲಿ ಕೈಗೊಂಡ ಎಲ್ಲಾ ನಿರ್ಣಯಗಳನ್ನು ದಾಖಲಿಸಿಕೊಳ್ಳಲಾಗುತ್ತದೆ.

- **ಪ್ರಗತಿಬಂಧು ಒಕ್ಕೂಟ:** ಪ್ರಗತಿಬಂಧು ತಂಡದ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಅಲ್ಲದೆ ಅವುಗಳ ತಂಡದ ಸದಸ್ಯರ ಸಂಖ್ಯೆ ಸಹ ಹೆಚ್ಚಾಗುತ್ತದೆ. ಇದರಿಂದಾಗಿ ಅವುಗಳ ಕಾರ್ಯದಲ್ಲಿ ಏಕತೆ ಮತ್ತು ಸಮನ್ವಯದ ದೃಷ್ಟಿಯಿಂದ ಒಕ್ಕೂಟಗಳ ಸಮಿತಿಯ ಸಂಘಟನೆ ಮಾಡಲಾಗಿದೆ.

ಪ್ರಗತಿಬಂಧು ತಂಡದಲ್ಲಿ ಪರಿಹಾರವಾಗದ ಸಮಸ್ಯೆಯನ್ನು ಪರಿಹರಿಸುವುದು, ತಂಡಗಳ ಕಾರ್ಯಗಳು ಕ್ರಮವಾಗಿ ನಡೆಯುವಂತೆ ನೋಡಿಕೊಳ್ಳುವುದು ಮತ್ತು ಗ್ರಾಮಗಳ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವುದು ಒಕ್ಕೂಟದ ಜವಾಬ್ದಾರಿಯಾಗಿರುತ್ತದೆ.

ಪ್ರಗತಿ ಬಂಧು ಒಕ್ಕೂಟದಲ್ಲಿ ೨೦ ರಿಂದ ೩೦ ತಂಡಗಳು ಇರುತ್ತವೆ. ತಂಡದ ಪ್ರಬಂಧಕರು ಮತ್ತು ಸಂಯೋಜಕರುಗಳು ಒಕ್ಕೂಟದ ಸದಸ್ಯರಾಗಿರುತ್ತಾರೆ. ಪ್ರತಿಯೊಂದು ಒಕ್ಕೂಟವು ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಜೊತೆ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳೆಂಬ ಐದು ಮಂದಿ ಪದಾಧಿಕಾರಿಗಳನ್ನು ಹೊಂದಿರುತ್ತದೆ. ಒಕ್ಕೂಟದ ಸಭೆಯು ತಿಂಗಳಲ್ಲಿ ಒಂದು ಸಲ ನಡೆಯುತ್ತದೆ. ಈ ಸಭೆಯಲ್ಲಿ ತಂಡದ ಪ್ರಗತಿ ನತ್ತು ಸಮಸ್ಯೆಗಳು ಇತ್ಯಾದಿಗಳ ಬಗ್ಗೆ ಚರ್ಚಿಸಲಾಗುತ್ತದೆ. ಅಲ್ಲದೆ ಗ್ರಾಮದ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ. ಮೂರು ತಿಂಗಳಿಗೊಮ್ಮೆ ತ್ರೈಮಾಸಿಕ ಸಭೆ ನಡೆಯುತ್ತದೆ.

ಎಲ್ಲಾ ಒಕ್ಕೂಟಗಳನ್ನು ಸೇರಿಸಿ ತಾಲೂಕು ಮಟ್ಟದ ಕೇಂದ್ರ ಸಮಿತಿಯನ್ನು ರಚಿಸಲಾಗುತ್ತದೆ. ಕೇಂದ್ರ ಸಮಿತಿಯಲ್ಲಿ ಒಕ್ಕೂಟದಿಂದ ಆಯ್ಕೆ ಮಾಡಲಾದ ೧೦ ಮಂದಿ ಸದಸ್ಯರು ಮತ್ತು ಗ್ರಾಮಾಭಿವೃದ್ಧಿ ಯೋಜನೆಯಿಂದ ನಾಮಕರಣ ಮಾಡಲ್ಪಟ್ಟ ಆರು ಮಂದಿ ಯೋಜನೆಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ.

ಕೇಂದ್ರ ಸಮಿತಿಯು ಕೆಲವು ಜವಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಅವುಗಳೆಂದರೆ ಕಾರ್ಯಕ್ರಮದ ಅವಶ್ಯಕ ನಿಯಾಮವಳಿಯನ್ನು ರೂಪಿಸುವುದು, ನಿಯಾಮವಳಿಗೆ ಅವಶ್ಯವಿರುವ ತಿದ್ದುಪಡಿಗಳನ್ನು ತರುವುದು, ತಂಡಗಳಿಗೆ ತರಬೇತಿಯ ವ್ಯವಸ್ಥೆ, ದಾಖಲಾತಿಯನ್ನು ಒದಗಿಸುವುದು, ಕ್ಷೇಮ ನಿಧಿಯ ಸಂಗ್ರಹ ಮತ್ತು ನಿರ್ವಹಣೆ ಮಾಡುವುದು ಇತ್ಯಾದಿ. ಪ್ರಗತಿ ಬಂಧು ಒಕ್ಕೂಟದ ಪದಾಧಿಕಾರಿಗಳನ್ನು ಎರಡು ವರ್ಷಕ್ಕೊಮ್ಮೆ ಬದಲಾಯಿಸಲಾಗುತ್ತದೆ.[16]

- **ಪ್ರೋತ್ಸಾಹ ಮತ್ತು ಸವಲತ್ತು:** ಉತ್ತಮ ತಂಡಗಳಿಗೆ ಬಡ್ಡಿಯ ಮೇಲೆ ಪ್ರೋತ್ಸಾಹ ಧನವನ್ನು ಗ್ರಾಮಾಭಿವೃದ್ಧಿ ಯೋಜನೆಯಿಂದ ನೀಡಲಾಗುತ್ತದೆ. ತಂಡಗಳು ಪ್ರಗತಿನಿಧಿಯ ಮೇಲೆ ಗ್ರಾಮಾಭಿವೃದ್ಧಿ ಯೋಜನೆಗೆ ಪಾವತಿಸಿದ ಬಡ್ಡಿಯ ಹಣದ ಶೇಕಡಾ ೫೦ರಷ್ಟನ್ನು ಪ್ರೋತ್ಸಾಹ ಧನದ ರೂಪದಲ್ಲಿ ಹಿಂದಿರುಗಿಸಲಾಗುತ್ತದೆ.

- **ಶ್ರಮ ವಿನಿಯೋಗ:** ಪ್ರಗತಿಬಂಧುವಿನ ಬಹಳ ಮಹತ್ವದ ಅಂಗವೆಂದು ಶ್ರಮ ವಿನಿಯೋಗವನ್ನು ಗುರುತಿಸಲಾಗಿದೆ. ಸದಸ್ಯರು ತಮ್ಮ ಶ್ರಮವನ್ನು ವಿನಿಯೋಗಿಸಿ ಸಾಮೂಹಿಕವಾಗಿ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಯಲ್ಲಿ ವ್ಯವಸ್ಥಿತವಾಗಿ ಬಳಸಿಕೊಳ್ಳುವುದನ್ನು ಶ್ರಮ ವಿನಿಯೋಗ ಎಂದು ಪ್ರಗತಿಬಂಧು ಯೋಜನೆ

ವ್ಯಾಖ್ಯಾನಿಸುತ್ತದೆ. ಪ್ರಗತಿಬಂಧುವಿನ ಸದಸ್ಯರು ತಮ್ಮ ಜಮೀನಿನ ಬಹುತೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಶ್ರಮ ವಿನಿಮಯದಿಂದಲೇ ಮಾಡಿಕೊಳ್ಳುತ್ತಾರೆ. ತಂಡದ ಸದಸ್ಯರುಗಳು ವಾರದಲ್ಲಿ ಒಂದು ನಿರ್ದಿಷ್ಟ ದಿನ ಸದಸ್ಯನ/ಳ ಮನೆಯಲ್ಲಿ ಒಟ್ಟು ಸೇರಿ ಶ್ರಮದಾನ ಮಾಡುತ್ತಾರೆ. ಹಾಗೆ ಶ್ರಮದಾನ ಮಾಡುವವರಿಗೆ ಊಟ, ಉಪಹಾರಗಳನ್ನು ಮನೆಯ ಯಜಮಾನ ನೀಡುತ್ತಾನೆ/ಳೆ. ದುಡಿಮೆಗೆ ಬೇರಾವ ಪ್ರತಿಫಲವೂ ಇರುವುದಿಲ್ಲ. ಸಹಕಾರ ಮತ್ತು ಸಾಮುದಾಯಿಕ ಅಭಿವೃದ್ಧಿಯ ಪರಿಕಲ್ಪನೆ ಶ್ರಮ ವಿನಿಯೋಗದಲ್ಲಿ ಸಾಕಾರಗೊಳ್ಳುತ್ತದೆ. ಶ್ರಮ ವಿನಿಯೋಗವು ಸರದಿ ಪ್ರಕಾರ ನಡೆಯುತ್ತದೆ.

ಶ್ರಮ ವಿನಿಯೋಗದ ಲಾಭಗಳು

- ಸಹಕಾರ ಮತ್ತು ಸಾಮುದಾಯಿಕ ಪ್ರಜ್ಞೆಯ ಉದ್ದೀಪನ
- ಮಾನವ ಸಂಪನ್ಮೂಲಗಳ ಸದ್ಬಳಕೆ.
- ವಿಶೇಷ ಜ್ಞಾನ ಮತ್ತು ಕೌಶಲ್ಯ ಎಲ್ಲರ ಒಳಿತಿಗಾಗಿ ಬಳಕೆ.
- ದುಡಿಯಲು ವಿಶೇಷ ಉತ್ತೇಜನ
- ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಕ್ರಮಬದ್ಧತೆ
- ಮಾನವ ದಿನಗಳ ಉಳಿತಾಯ
- ದಿನಗೂಲಿ ನೀಡಿಕೆಯಲ್ಲಿ ಉಳಿತಾಯ
- ಸಹ ಪಂಕ್ತಿ ಭೋಜನಕ್ಕೆ ಅವಕಾಶ


ಉಳಿತಾಯ: ತಂಡದ ಪ್ರತಿಯೊಬ್ಬ ಸದಸ್ಯ ವಾರದಲ್ಲಿ ತಂಡವು ನಿರ್ದಿಷ್ಟ ಪಡಿಸಿದ ಹಣವನ್ನು (ವಾರಕ್ಕೆ ಕನಿಷ್ಠ ರೂ.೧೦) ಉಳಿತಾಯ ಮಾಡುತ್ತಾರೆ. ಪ್ರಗತಿಬಂಧುವಿನ ಸದಸ್ಯರು ತಮ್ಮ ಉಳಿತಾಯದ ಹಣವನ್ನು ಸಮೀಪದ ಬ್ಯಾಂಕು ಅಥವಾ ಸಹಕಾರಿ ಸಂಘದ ಉಳಿತಾಯ ಖಾತೆ ತೆರೆದು ಠೇವಣಿಯಾಗಿಡುತ್ತಾರೆ. ಉಳಿತಾಯ ಪ್ರಜ್ಞೆಯಿಂದಾಗಿ ಅನೇಕ ಲಾಭಗಳಾಗುತ್ತವೆ.

ಉಳಿತಾಯ ಪ್ರಜ್ಞೆಯ ಲಾಭಗಳು

- ಭವಿಷ್ಯದ ಬಗ್ಗೆ ಚಿಂತನೆ ಮತ್ತು ಯೋಜನೆ
- ಮದ್ಯಪಾನ ಮತ್ತು ಧೂಮಪಾನಕ್ಕೆ ನಿಧಾನ ವಿದಾಯ
- ಕೌಟುಂಬಿಕ ಜವಾಬ್ದಾರಿಯ ಹೆಚ್ಚಳ
- ಸುಖೀ ಕುಟುಂಬ ಜೀವನ
- ಸಾಮುದಾಯಿಕ ಸಾಲ ಪಡೆಯಲು ವಿಪುಲಾವಕಾಶ
- ಅನಗತ್ಯ ದುಂದುವೆಚ್ಚ ನಿಲುಗಡೆ
- ಆರ್ಥಿಕ ಪ್ರಗತಿಯ ಬಗ್ಗೆ ಆಶಾನೋಟ

- **ಪ್ರಗತಿ ನಿಧಿ:** ತಂಡದ ಸದಸ್ಯ ಕುಟುಂಬಗಳು ಆರ್ಥಿಕ ಅವಶ್ಯಕತೆಗಳನ್ನು ಸ್ವತಾ ನಿರ್ವಹಿಸಲು ಕಲಿಯಬೇಕೆನ್ನುವುದು ಪ್ರಗತಿ ಬಂಧು ಯೋಜನೆಯ ಮುಖ್ಯ ಉದ್ದೇಶವಾಗಿದೆ. ತಮ್ಮ ಉಳಿತಾಯದ ಹಣದಿಂದ ಸದಸ್ಯರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಅಸಾಧ್ಯವಾದಾಗ ಪ್ರಗತಿಬಂಧು ಮೂಲಕ ಅವರ ಹಣಕಾಸು ಅವಶ್ಯಕತೆಗಳನ್ನು ಈಡೇರಿಸಲು ಯತ್ನಿಸಲಾಗುತ್ತದೆ. ಸದಸ್ಯರಿಗೆ ಸಾಲ ರೂಪದ ಆರ್ಥಿಕ ನೆರವನ್ನು ನೀಡುವುದು ಪ್ರಗತಿಬಂಧು ಯೋಜನೆಯಾಗಿರುತ್ತದೆ. ಈ ಯೋಜನೆಯನ್ವಯ ಪ್ರತಿಯೊಂದು ಪ್ರಗತಿಬಂಧು ತಂಡವು ತನ್ನ ಉಳಿತಾಯದ ನಾಲ್ಕು ಪಟ್ಟು ಹಣವನ್ನು ಗ್ರಾಮಾಭಿವೃದ್ಧಿ ಯೋಜನೆಯಿಂದ ಸಾಲರೂಪದಲ್ಲಿ ಪಡೆಯುತ್ತದೆ. ಅಗತ್ಯವುಳ್ಳ ಸದಸ್ಯರಿಗೆ ಸಾಲ ವಿತರಣೆ ಮಾಡುತ್ತದೆ.

ಗ್ರಾಮಾಭಿವೃದ್ಧಿ ಯೋಜನೆಗಳಿಗೆ ಹಣಕಾಸು ನೆರವು ನೀಡುವುದು ಮೂಲತಃ ನಬಾರ್ಡ್. ಅದು ಪರೋಕ್ಷ ಹಣಕಾಸನ್ನು ವ್ಯವಸ್ಥೆ. ನಬಾರ್ಡ್ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಗ್ರಾಮಾಭಿವೃದ್ಧಿ ಯೋಜನೆಗೆ ಹಣಕಾಸು ಒದಗಿಸುತ್ತದೆ. ಗ್ರಾಮಾಭಿವೃದ್ಧಿ ಯೋಜನೆಯು ಪ್ರಗತಿ ಬಂಧು ತಂಡಗಳಿಗೆ ಮತ್ತು ತಂಡಗಳು ಸದಸ್ಯರಿಗೆ ಹನಿ ಹಣಕಾಸು ಸಹಾಯ ಒದಗಿಸುತ್ತವೆ. ಸಾಲ ಪಡೆದ ಪ್ರಗತಿಬಂಧು ತಂಡವು ಎಂಟು ವರ್ಷಗಳೊಳಗೆ ಸಾಲ ಮರುಪಾವತಿ ಮಾಡಬೇಕು. ಬಡ್ಡಿಯ ದರ ಶೇಕಡಾ ೧೧ ಆಗಿರುತ್ತದೆ.



ಚಿತ್ರ ೩.೩ ಪ್ರಗತಿನಿಧಿ ವಿತರಣೆ ವರ್ತುಲ

ಪ್ರಗತಿಬಂಧು ತಂಡದ ಸದಸ್ಯರಿಗೆ ಪ್ರಗತಿನಿಧಿಯಿಬಿಂದ ಹೇಗೆ ಸಾಲ ಸೌಲಭ್ಯ ದೊರೆಯುತ್ತದೆ ಎನ್ನುವುದನ್ನು ಚಿತ್ರ ೩.೩ ತಿಳಿಸುತ್ತದೆ.


- **ಪ್ರಗತಿಬಂಧು ತಂಡದ ಸಾಲನಿರ್ವಹಣೆ:-** ಪ್ರಗತಿಬಂಧು ತಂಡವು ಸದಸ್ಯರಿಗೆ ಸಾಲ ನೀಡುವಾಗ ಕೆಲವು ಪ್ರಮುಖ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳುತ್ತವೆ.

ಸಾಲ ನೀಡಿಕೆಯ ಪರಿಗಣನೆ

- ತಂಡದ ಖಾತೆಯಲ್ಲಿ ಹಣದ ಲಭ್ಯತೆ
- ಸಾಲ ಅಪೇಕ್ಷಿಸುವ ಸದಸ್ಯನ ಅವಶ್ಯಕತೆ ಮತ್ತು ಸದಸ್ಯರ ಮರುಪಾವತಿಯ ಸಾಮರ್ಥ್ಯ.
- ತಂಡದ ಸದಸ್ಯರ ಒಪ್ಪಿಗೆ.
- ಸಾಲದ ಹಣದ ಉದ್ದೇಶ.
- ಸಾಲದ ಹಣ ನಿರ್ದಿಷ್ಟ ಉದ್ದೇಶಕ್ಕೆ ಬಳಕೆಯಾಗುತ್ತದೆ ಎಂಬ ಖಾತರಿ.

ತಂಡದ ಸದಸ್ಯನ ಸಾಲಕ್ಕೆ ಎಲ್ಲಾ ಸದಸ್ಯರು ಸಮಾನ ಜವಾಬ್ದಾರರಾಗಿರುತ್ತಾರೆ. ಪ್ರಗತಿಬಂಧು ತಂಡವು ಪಡೆಯುವ ಸಾಲಕ್ಕೆ ಕನಿಷ್ಠ ಒಂದು ವರ್ಷ ಅವಧಿ ಮತ್ತು ಗರಿಷ್ಠ ಐದು ವರ್ಷ ಮರುಪಾವತಿ ಅವಧಿಯಾಗಿರುತ್ತದೆ.

- **ಸಾಲದ ಮರುಪಾವತಿ ಹಾಗೂ ಸೇವಾಶುಲ್ಕ:-** ಸಾಲಗಾರ ಸದಸ್ಯರು ನಿಗದಿತ ಕಂತುಗಳಲ್ಲಿ ವಾರಕ್ಕೊಮ್ಮೆ ನಿಗದಿಪಡಿಸಿದ ಅವಧಿಯೊಳಗೆ ಬ್ಯಾಂಕು ವಿಧಿಸಿದ ಸೇವಾಶುಲ್ಕದೊಂದಿಗೆ ಸಾಲವನ್ನು ಮರುಪಾವತಿ ಮಾಡಬೇಕಾಗುತ್ತದೆ. ಸಾಲಕ್ಕೆ ಶೇಕಡಾ ೧೫ ಸೇವಾ ಶುಲ್ಕವನ್ನು ವಿಧಿಸಲಾಗುತ್ತದೆ.



ಚಿತ್ರ ೩.೪ ಪ್ರಗತಿನಿಧಿ ಮರುಪಾವತಿ ವರ್ತುಲ

ತಂಡದ ಸದಸ್ಯನು ತನ್ನ ಸಾಲದ ಕಂತನ್ನು ತಂಡಕ್ಕೆ ನೀಡುತ್ತಾನೆ. ತಂಡದಿಂದ ಅದು ಗ್ರಾಮಾಭಿವೃದ್ಧಿ ಯೋಜನೆಯ ಕಛೇರಿಯನ್ನು ತಲುಪಿ ನಂತರ ರಾಷ್ಟ್ರೀಕೃತ ಬ್ಯಾಂಕಿನ ಮೂಲಕ ನಬಾರ್ಡ್‌ಗೆ ತಲುಪುತ್ತದೆ.

೩.೮.೩ ಇತರ ಮೈಲಿಗಲ್ಲುಗಳು

ಪ್ರಗತಿ ಬಂಧು ಯೋಜನೆಯೊಂದಿಗೆ ಇತರ ಕೆಲವು ಯೋಜನೆಗಳನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಅನುಷ್ಠಾನಕ್ಕೆ ತಂದಿರುತ್ತದೆ.

- **ಜ್ಞಾನ ವಿಕಾಸ ಕೇಂದ್ರಗಳು:** ಇವು ಅವಿದ್ಯಾವಂತ, ಭೂರಹಿತ ನಿರುದ್ಯೋಗಿ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣಕ್ಕಾಗಿ ಯತ್ನಿಸುವ ಕೇಂದ್ರಗಳಾಗಿವೆ. ನಹಿಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ಎಂಬ ಗೀತಾವಾಣಿಯನ್ನು, ಜನನಿ ತಾನೇ ಮೊದಲ ಗುರುವು ಎಂಬ ಕವಿವಾಣಿಯನ್ನು ಸಾಕ್ಷಾತ್ಕರಿಸುವ ಪ್ರಯತ್ನವಿದು. ದ.ಕ. ಜಿಲ್ಲೆಯಲ್ಲಿ ಬಹುತೇಕ ಬಡಮಹಿಳೆಯರು ಬೀಡಿ ಕಟ್ಟಿ ಬದುಕು ಸಾಗಿಸುತ್ತಾರೆ. ಅಂತಹ ಮಹಿಳೆಯರಿಗೆ ವಾರದಲ್ಲಿ ಎರಡು ಗಂಟೆಗಳ ಕಾಲ ಜ್ಞಾನವಿಕಾಸಕೇಂದ್ರಗಳು ಆರೋಗ್ಯ, ಕುಟುಂಬ ಕಲ್ಯಾಣ, ನೈರ್ಮಲ್ಯ, ಮಕ್ಕಳ ವಿದ್ಯಾಭ್ಯಾಸ, ಪರಿಸರ ಸಂರಕ್ಷಣೆ, ಉನ್ನತ ಮೌಲ್ಯಗಳ ರಕ್ಷಣೆಯ ಬಗ್ಗೆ ತಿಳುವಳಿಕೆ ಮೂಡಿಸುತ್ತವೆ.

ಆರ್ಥಿಕವಾಗಿ ಜೀವನ ಮಟ್ಟ ಏರಿಸಲು ಈ ಕೇಂದ್ರಗಳು ಮಹಿಳೆಯರಿಗೆ ಪರ್ಯಾಯ ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ಒದಗಿಸುತ್ತವೆ. ಹೂ, ಹಣ್ಣು, ತರಕಾರೀ ಕೃಷಿಯೊಡನೆ, ಹೈನುಗಾರಿಕೆ, ಜೇನುಗಾರಿಕೆ, ಪಶು ಸಂಗೋಪನೆ ಬಗ್ಗೆ ಮಹಿಳೆಯರಿಗೆ ಮಾಹಿತಿ, ಮಾರ್ಗದರ್ಶನ ಮತ್ತು ತರಬೇತಿ ನೀಡಲಾಗುತ್ತದೆ. ಜ್ಞಾನವಿಕಾಶ ಕೇಂದ್ರಗಳಿಂದಾಗಿ ಸುಮಾರು ನಾಲ್ಕೂವರೆ ಲಕ್ಷ ಮಹಿಳೆಯರು ಸ್ವ ಉದ್ಯೋಗಿಗಳಾಗಿದ್ದಾರೆ. ೪೫೭೫೦ ಸ್ವಸಹಾಯ ಗುಂಪುಗಳು ರೂಪುಗೊಂಡು ರೂ. ೬೬.೧೩ ಕೋಟಿ ಉಳಿತಾಯ ಸಾಧಿತವಾಗಿದೆ.[17]

ಹನಿ ಹಣಕಾಸು ಯೋಜನೆ: ಶ್ರೀಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯು ದೇಶದ ಅತಿದೊಡ್ಡ ಹನಿಹಣಕಾಸು ಕಾರ್ಯಕ್ರಮವನ್ನು ಹೊಂದಿದೆ. ಜ್ಞಾನವಿಕಾಸ ಕೇಂದ್ರಗಳ ಸದಸ್ಯೆಯರ ಉಳಿತಾಯ ರೂ. ೬೬.೧೩ ಕೋಟಿ ದಾಟಿದೆ. ಉಳಿತಾಯವನ್ನು ಆಧರಿಸಿ ಸಾಲದ ವಹಿವಾಟುಗಳನ್ನು ಹನಿ ಹಣಕಾಸು ಯೋಜನೆ ನಡೆಸುತ್ತದೆ. "ನೀನುಳಿಸಿದ ಹಣ ನಿನ್ನನ್ನು ಉಳಿಸುತ್ತದೆ, ಧನಂ ರಕ್ಷತಿ ರಕ್ಷಿತಃ" ಎಂಬ ಮಾತು ಹನಿ ಹಣಕಾಸು ಯೋಜನೆಯ ಯಶಸ್ಸಿನಲ್ಲಿ ಸಾಕಾರಗೊಂಡಿದೆ. ಹನಿ ಹಣಕಾಸು ಯೋಜನೆಯು ದಿನನಿತ್ಯದ ಅಗತ್ಯಗಳಿಗೆ, ಆದಾಯಮೂಲಗಳ ಹೆಚ್ಚಳಕ್ಕೆ, ಮನೆ, ಶೌಚಾಲಯಗಳ ನಿರ್ಮಾಣಕ್ಕೆ, ಗೋಬರ್ ಗ್ಯಾಸ್ ಸ್ಥಾವರ ರಚನೆಗೆ ಮತ್ತು ಇತರ ಮೂಲ ಸೌಕರ್ಯಗಳ ನಿರ್ಮಾಣಕ್ಕೆ ಹಣಕಾಸು ನೆರವನ್ನು ನೀಡುತ್ತದೆ.

- **ಸಂಪೂರ್ಣ ಸುರಕ್ಷಾ ವಿಮಾ ಯೋಜನೆ:** ಅಸಂಘಟಿತ ವಲಯಗಳಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಿಲ್ಲದಿರುವುದನ್ನು ಮನಗಂಡು ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ಸಂಪೂರ್ಣ ಸುರಕ್ಷಾ ವಿಮಾ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯನ್ವಯ ವಿಮೆದಾರ ವರ್ಷಕ್ಕೆ ರೂ. ೭೦೦ ಪಾವತಿಸಿದರೆ ಅವನೂ/ಅವಳೂ ಸೇರಿದಂತೆ ಕುಟುಂಬದ ಐವರು ಯೋಜನೆಯ ಫಲ ಅನುಭವಿಸಲು ಅರ್ಹರಾಗುತ್ತಾರೆ. ಪ್ರಸೂತಿ ಕಾಲದಲ್ಲಿ ಚಿಕಿತ್ಸಾ ಸೌಲಭ್ಯ, ಕುಟುಂಬ ಸದಸ್ಯರಿಗೆ ವಾರ್ಷಿಕ ರೂ. ೨೫,೦೦೦ ದವರೆಗೆ ಆಸ್ಪತ್ರೆ ಸುಶ್ರೂಷಾ ವೆಚ್ಚ ಮತ್ತು ಜೀವ ವಿಮೆ ನೀಡಲಾಗುತ್ತದೆ.

- **ಸಿರಿ ಯೋಜನೆ:** ಗ್ರಾಮೀಣ ಜನರು ತಮಗೆ ಬೇಕಾದುದನ್ನು ತಾವೇ ಉತ್ಪಾದಿಸಿಕೊಂಡು ವಿನಿಮಯ ಮಾಡಿಕೊಳ್ಳುವ ಮೂಲಕ ಸ್ವಾವಲಂಬನೆ ಸಾಧಿಸಬೇಕೆನ್ನುವುದು ಗಾಂಧೀಜಿ ಗ್ರಾಮ ಸ್ವರಾಜ್ಯ ಪರಿಕಲ್ಪನೆಯ ಮೂಲ ಆಶಯವಾಗಿದೆ. ಇದನ್ನು ಶ್ರೀ ಕ್ಷೇತ್ರ ಧರ್ಮಸ್ಥಳವು ಸಿರಿ ಯೋಜನೆಯ ಮೂಲಕ ಸಾಧಿಸಲು ಯತ್ನಿಸುತ್ತಿದೆ. ಸಿರಿ ಯೋಜನೆಯು ಸಾಮುದಾಯಿಕ ಉತ್ಪಾದನೆಯ ಮೂಲಕ ಗ್ರಾಮೀಣ ಜನರು ಸ್ವಾವಲಂಬಿಗಳಾಗಬೇಕೆಂಬ ಉದ್ದೇಶವನ್ನು ಹೊಂದಿದೆ. ಸಾಬೂನು, ಡಿಟರ್ಜಂಟುಗಳು, ಫಿನಾಯಿಲ್, ಕ್ಲೀನಿಂಗ್ ಪೌಡರು, ಮೋಂಬತ್ತಿ, ಅಗರಬತ್ತಿ, ತಿಂಡಿಗಳು, ಉಪ್ಪಿನಕಾಯಿ, ಹಣ್ಣಿನ ರಸ, ಸಿದ್ಧಉಡುಪು, ಕರಕುಶಲ ವಸ್ತುಗಳು – ಹೀಗೆ ಸಿರಿ ಯೋಜನೆಯಡಿಯಲ್ಲಿ ವೈವಿಧ್ಯಮಯವಾದ, ಉತ್ತಮ ಗುಣಮಟ್ಟದ ವಸ್ತುಗಳು ಕಡಿಮೆ ಬೆಲೆಗೆ ಲಭ್ಯವಾಗುತ್ತವೆ. ಈವರೆಗೆ ಸಿರಿ ಯೋಜನೆಯು ಸುಮಾರು ರೂ. ೧೦ ಕೋಟಿಗಳಿಗೂ ಅಧಿಕ ಆರ್ಥಿಕ ವಹಿವಾಟು ನಡೆಸಿದೆ.

- **ಮನೆ, ಶಾಲೆ ಮತ್ತು ರುದ್ರಭೂಮಿ ಯೋಜನೆ:** ಬದುಕುವುದಕ್ಕೊಂದು ಮನೆ, ಕಲಿಯೋದಕ್ಕೊಂದು ಶಾಲೆ, ಸತ್ತ ಬಳಿಕ ಆತ್ಮತೃಪ್ತಿಗೆ ರುದ್ರಭೂಮಿ ಅತ್ಯಗತ್ಯ. ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಇವು ಮೂರರ ನಿರ್ಮಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಜೀವನಧಾಮ ವಸತಿ ಯೋಜನೆಯು ೧೧,೦೦೦ ಮನೆಗಳನ್ನು ನಿರ್ಮಿಸಿ ಬಡವರಿಗೆ ಬದುಕಲೊಂದು ನೆಲೆಯನ್ನು ಒದಗಿಸಿಕೊಟ್ಟಿದೆ. ಜ್ಞಾನದೀಪ ಶಿಕ್ಷಣ ಕಾರ್ಯಕ್ರಮದನ್ವಯ ೧೫೦೦ ಕ್ಕಿಂತ ಅಧಿಕ ಎಳೆಯರನ್ನು ಮರಳಿ ಶಾಲೆಗೆ ಕರೆತರಲಾಗಿದೆ. ಸಮುದಾಯ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ೪೭೭೩ ಶಾಲಾ ಕೊಠಡಿ, ೬೩೧ ಅಂಗನವಾಡಿ ಕೊಠಡಿ, ೧೭೦ ಪಶುವೈದ್ಯಕೀಯ ಆಸ್ಪತ್ರೆ, ೪೩ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ೪೭೩ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಜಾತಸ್ಯ ಹೀ ಧ್ರುವೋ ಮೃತ್ಯು: ಹುಟ್ಟಿದವ ಸಾಯಲೇಬೇಕು. ಸತ್ತವರಿಗೆ ಸುಯೋಗ್ಯ ಅಂತ್ಯಸಂಸ್ಕಾರಕ್ಕಾಗಿ ೨೩೨ ಸುಸಜ್ಜಿತ ರುದ್ರಭೂಮಿ ನಿರ್ಮಿಸಲಾಗಿದೆ.

- **ಮದ್ಯ ಬಿಡು, ಕೃಷಿ ಮಾಡು:** ಶ್ರೀ ಕ್ಷೇತ್ರ ಧರ್ಮಸ್ಥಳವು ನಡೆಸುತ್ತಿರುವ ಮದ್ಯವರ್ಜನಾ ಶಿಬಿರಗಳು ಸಮಾಜ ಸುಧಾರಕರಲ್ಲಿ ಹೊಸ ಸಂಚಲನವನ್ನುಂಟು ಮಾಡಿವೆ. ದಾಖಲೆ ಸಂಖ್ಯೆಯಲ್ಲಿ ಕುಡುಕರು ಮದ್ಯವ್ಯಸನ ಬಿಟ್ಟು ಮನುಷ್ಯರಾಗುತ್ತಿದ್ದಾರೆ. ಈವರೆಗೆ ೧೬೦

ಮದ್ಯವರ್ಜನಾ ಶಿಬಿರಗಳನ್ನು ಸಂಘಟಿಸಲಾಗಿದೆ ಮತ್ತು ೨೦,೦೦೦ ಕ್ಕಿಂತಲೂ ಹೆಚ್ಚಿನ ಜನರನ್ನು ಮದ್ಯವ್ಯಸನ ಮುಕ್ತರನ್ನಾಗಿ ಮಾಡಲಾಗಿದೆ.

ಭಾರತದ ಆರ್ಥಿಕತೆಯು ಈಗಲೂ ಕೃಷಿ ಪ್ರಧಾನವಾಗಿರುವುದನ್ನು ಮನಗಂಡಿರುವ ಮತ್ತು ಕೃಷಿ ಸುಧಾರಣೆಯಿಂದ ಮಾತ್ರ ದೇಶ ಸುಧಾರಣೆ ಎನ್ನುವ ಸತ್ಯವನ್ನು ಅಕ್ಷರಶಃ ಅರಿತಿರುವ ಗ್ರಾಮಾಭಿವೃದ್ಧಿ ಯೋಜಯೆಯು ಕೃಷಿ ಮೇಳಗಳನ್ನು ಸಂಘಟಿಸುವ ಮೂಲಕ ಕೃಷಿಕರನ್ನು ಒಗ್ಗೂಡಿಸಲು ಮತ್ತು ಕೃಷಿಯಲ್ಲಿ ಆವಿಷ್ಕಾರಕ ಪ್ರಯೋಗಗಳನ್ನು ಮಾಡಲು ಉತ್ತೇಜಿಸುತ್ತಿದೆ. ಈವರೆಗೆ ೨೭ ಕೃಷಿ ಮೇಳಗಳನ್ನು ಸಂಘಟಿಸಲಾಗಿದೆ. ಈ ಬಾರಿಯ ಕೃಷಿ ಮೇಳವು ೨೦೦೭ ಎಪ್ರಿಲ್ ೪, ೫, ೬ ರಂದು ಬಂಟ್ವಾಳ ತಾಲೂಕಿನ ಬಿ.ಸಿ.ರೋಡಿನಲ್ಲಿ ನ ಭೂತೋ ನ ಭವಿಷ್ಯತಿ ಎಂಬಂತೆ ನಡೆದು ರಾಷ್ಟ್ರದ ಗಮನ ಸೆಳೆದಿದೆ.

ಉಲ್ಲೇಖಗಳು

೧. ಭೈರಪ್ಪ ಕೆ ; ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ಧಿ, ಸಪ್ನ ಬುಕ್ ಹೌಸ್ ಬೆಂಗಳೂರು, ೨೦೦೬, ಪು. ೨೧೬

೨. ಅದೇ, ಪು.೨೧೭

೩. ಅದೇ ಪು. ೨೧೭

೪. ಶಿಶಿಲ ಪ್ರಭಾಕರ; ಅಭಿವೃದ್ಧಿಯ ಆಯಾಮಗಳು, ಮಂಗಳ ಪ್ರಕಾಶನ ಮಂಗಳೂರು, ೨೦೦೬, ಪು. ೧೦೦

೫. ಅದೇ, ಪು. ೧೦೧

೬. ಶಿಶಿಲ ಪ್ರಭಾಕರ; ಆರ್ಥಿಕ ಭಾರತ, ೨೦೦೬, ಪು. ೧೮೧

೭. ಭೈರಪ್ಪ ಕೆ; ೨೦೦೬, ಪು. ೨೧೮-೨೧೯

೮. ಮರೆಮಾಚಿದ ನಿರುದ್ಯೋಗವೆಂಬ ಪರಿಕಲ್ಪನೆಯನ್ನು ಅಭಿವೃದ್ಧಿ ಅರ್ಥಶಾಸ್ತ್ರಜ್ಞನಾದ ರಗ್ನಾರ್ ನರ್ಕ್ಸ್ ಮೊದಲ ಬಾರಿ ಬಳಸಿದ. ಅದು ಕೃಷಿ ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿರುವ ಅಪೂರ್ಣೋದ್ಯೋಗ ಪರಿಸ್ಥಿತಿಯಾಗಿರುತ್ತದೆ. ಶ್ರಮದ ಸೀಮಾಂತ ಉತ್ಪಾದಕತೆಯು ಸೊನ್ನೆಯಾಗಿರುವುದನ್ನು ಅದು ಸೂಚಿಸುತ್ತದೆ.

೯. ಶಿಶಿಲ ಪ್ರಭಾಕರ; ಮಹಾನ್ ಅರ್ಥಶಾಸ್ತ್ರಜ್ಞರು, ಕಲಾ ಪ್ರಕಾಶನ ಬೆಂಗಳೂರು, ೧೯೯೭, ಪು. ೪೯೮-೪೯೯

೧೦. ಅದೇ ಪು. ೫೦೭

೧೧. ಶಿಶಿಲ ಪ್ರಭಾಕರ; ಆರ್ಥಿಕ ಚಿಂತನವಾಹಿನಿ, ಮಂಗಳ ಪ್ರಕಾಶನ ಮಂಗಳೂರು, ೨೦೦೨, ಪು. ೩೫೦–೩೫೫

12. Schumacher E.F: Small is Beautiful.

೧೩. ನೋಡಿ; ಭೈರಪ್ಪ ಕೆ, ೨೦೦೬

೧೪. ನೋಡಿ; ಶಿಶಿಲ ಪ್ರಭಾಕರ, ಆರ್ಥಿಕ ಭಾರತ, ೨೦೦೬

೧೫. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೈಪಿಡಿ

೧೬. ಎರ್ರಿಸ್ವಾಮಿ ಟಿ.ಎನ್; ಸ್ವಸಹಾಯ ಸಂಘಗಳ ಪರಿಕಲ್ಪನೆ, ಜಗಳೂರು ಪು. ೧೫

೧೭. ಬಸವರಾಜ ಸಂಪಳ್ಳಿ, ಗ್ರಾಮ ಸ್ವರಾಜ್ಯದ ಯಶೋಗಾಥೆ, ಪ್ರಜಾವಾಣಿ ೧೨ ಎಪ್ರಿಲ್ ೨೦೦೭

ಅಧ್ಯಾಯ – ೪

ಬಂಟ್ವಾಳ ತಾಲೂಕು ಮತ್ತು ಸ್ವಸಹಾಯ ಸಂಘಗಳು

೪.೧ ಬಂಟ್ವಾಳ ಅಂದು – ಇಂದು

೪.೧.೧ ಇತಿಹಾಸ ಮತ್ತು ಸ್ಥಳನಾಮ

೪.೧.೨ ತಾಲೂಕಿನ ಸಾಂಸ್ಕೃತಿಕ ಸಮೃದ್ಧಿ

೪.೨. ಭೌಗೋಳಿಕ ಬಂಟ್ವಾಳ

೪.೩ ಬಂಟ್ವಾಳದ ಆರ್ಥಿಕತೆ

೪.೩.೧ ಜನಸಾಂದ್ರತೆ ಮತ್ತು ಲಿಂಗಾನುಪಾತ

೪.೩.೨ ವಿತರಣೆ ಮತ್ತು ಸಾಕ್ಷರತೆ

೪.೩.೩ ಭೂಮಿಯ ಬಳಕೆ

೪.೩.೪ ವೃತ್ತಿಯ ವಿತರಣೆ

೪.೪ ಬಂಟ್ವಾಳದ ಸ್ವಸಹಾಯ ಚಟುವಟಿಕೆ

೪.೪.೧ ಸ್ತ್ರೀ ಶಕ್ತಿ ಯೋಜನೆ

೪.೪.೨ ನಾಗರಿಕ ಸೇವಾ ಟ್ರಸ್ಟ್ (ರಿ) ಗುರುವಾಯನಕೆರೆ ಪ್ರವರ್ತಿತ ಸ್ವ ಸಹಾಯ ಸಂಘ

೪.೪.೩ ನವೋದಯ ಸ್ವ ಸಹಾಯ ಸಂಘ

೪.೪.೪ ಬಂಟ್ವಾಳ ತಾಲೂಕಿನ ಪ್ರಗತಿ ಬಂಧು ಸ್ವಸಹಾಯ ಸಂಘ

೪.ಬಂಟ್ವಾಳ ತಾಲೂಕು ಮತ್ತು ಸ್ವಸಹಾಯ ಸಂಘಗಳು


೪.೧ ಬಂಟ್ವಾಳ: ಅಂದು –ಇಂದು

ತುಳುನಾಡಿನ ಇತಿಹಾಸ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಅತಿ ಮಹತ್ವದ ಕೊಡುಗೆಗಳನ್ನು ನೀಡಿದ ಪ್ರದೇಶ ಬಂಟ್ವಾಳ ತಾಲೂಕು (ನೋಡಿ ನಕ್ಷೆ ೪.೧). ಬಂಟ್ವಾಳ ತಾಲೂಕಿನ ಇತಿಹಾಸ ಅತ್ಯಂತ ವೈವಿಧ್ಯಮಯವಾದದ್ದು ಮತ್ತು ರೋಚಕವಾದದ್ದು. ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ಆಳುಪರು. ವಿಜಯನಗರ ಹಾಗೂ ಕೆಳದಿಯ ಅರಸರು ಮತ್ತು ಹೈದರಾಲಿ ಟೀಪು ಸುಲ್ತಾನರ ಆಳ್ವಿಕೆಯನ್ನು ಕಂಡ ಈ ಪ್ರದೇಶದ ವಿವಿಧ ಭಾಗಗಳಲ್ಲಿ ಕೆಲ್ಲ, ಚೌಟ, ಡೊಂಬ ಹೆಗ್ಗಡೆ ಹಾಗೂ ಬಂಗ ಅರಸರೂ ತಮ್ಮ ಪ್ರಾಬಲ್ಯವನ್ನು ಮೆರೆದಿದ್ದರು. ಕ್ರಿ.ಶ ೧೭೯೯ ರಲ್ಲಿ ಟೀಪು ಸುಲ್ತಾನನ ಪತನದೊಂದಿಗೆ ಬಂಟ್ವಾಳ ತಾಲೂಕು ಬ್ರಿಟಿಷರ ಅಧಿಪತ್ಯಕ್ಕೊಳಗಾಯಿತು. ಆದರೊಂದಿಗೆ ಈ ಪ್ರದೇಶದ ಇತಿಹಾಸದಲ್ಲಿ ಸ್ವಾತಂತ್ರ್ಯ ಹೋರಾಟದ ಒಂದು ಹೊಸ ಯುಗ ಆರಂಭವಾಯಿತು.[1]

೪.೧.೧ ಇತಿಹಾಸ ಮತ್ತು ಸ್ಥಳನಾಮ: ಶಿಲಾಯುಗದಿಂದಾರಂಭಿಸಿ ಇತ್ತೀಚಿನವರೆಗಿನ ವೈವಿಧ್ಯಮಯ ಇತಿಹಾಸದ ಪುಟಗಳನ್ನು ನಮ್ಮೆದುರು ತೆರೆದಿರುಸುವ ಹತ್ತಾರು ಶಿಲಾಶಾಸನಗಳು, ನೂರಾರು ದೇವಾಲಯಗಳು ಹಾಗೂ ಇನ್ನಿತರ ಇತಿಹಾಸದ ಕುರುಹುಗಳನ್ನು ಬಂಟ್ವಾಳ ತಾಲೂಕಿನ ವಿವಿಧೆಡೆಗಳಲ್ಲಿ ಗುರುತಿಸಲಾಗಿದೆ. ತುಳುನಾಡಿನ ಇತರ ಕೆಲವು ಪ್ರದೇಶಗಳಿಗೆ ಹೋಲಿಸಿದರೆ ಬಂಟ್ವಾಳ ತಾಲೂಕಿನಲ್ಲಿ ಕಂಡುಬರುವ ಇತಿಹಾಸದ ಕುರುಹುಗಳು ಬಹಳಷ್ಟು ಕಡಿಮೆ ಎನ್ನುವುದು ನಿಜವಾದರೂ ಈ ಪ್ರದೇಶದ ಇತಿಹಾಸ ರಚನೆಯಲ್ಲಿ ಅವುಗಳು ವಹಿಸಿವ ಪಾತ್ರ ಕಿರಿದಲ್ಲ ಎಂಬುದೂ ಅಷ್ಟೇ ನಿಜ. ಬಂಟ್ವಾಳ ತಾಲೂಕಿನಲ್ಲಿ ಈ ಸುಮಾರು ೪೦ಕ್ಕೂ ಮಿಕ್ಕ ಶಾಸನಗಳು ಬೆಳಕಿಗೆ ಬಂದಿದ್ದು ಇಲ್ಲಿನ ಪ್ರಾಚೀನ ಇತಿಹಾಸದ ಚಿತ್ರಣವನ್ನು ನೀಡುವಲ್ಲಿ ಇವು ಅತಿಮಹತ್ವದ ಪಾತ್ರವನ್ನು ವಹಿಸುತ್ತದೆ.

ಬಂಟ್ವಾಳ ಎಂಬ ಹೆಸರಿನ ಮೂಲದ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಬಂಟ್ವಾಳ ಎಂಬುದು 'ಬಂಟ' ಎಂಬ ಜನಾಂಗದಿಂದ ಹುಟ್ಟಿಕೊಂಡ ಹೆಸರು ಎನ್ನುವುದು ಕೆಲವರ

ಅಭಿಪ್ರಾಯವಾಗಿದೆ. ಶಬ್ದ ಸಾಮ್ಯದ ದೃಷ್ಟಿಯಿಂದ ಮೇಲ್ನೋಟಕ್ಕೆ ಅದು ಸರಿ ಎನಿಸುವುದು ಸಹಜವೆ. ವಟವೃಕ್ಷಗಳಿಂದ ಕೂಡಿದ ಸ್ಥಳವಾದರಿಂದ ವಟವಾಳ, ಬಂಟವಾಳ ಎಂಬ ಹೆಸರು ಬಂತು ಎಂಬ ಅಭಿಪ್ರಾಯವೂ ಪ್ರಚಲಿತವಿದೆ. ಇದನ್ನೇ ಸಂಸ್ಕೃತೀಕರಣಗೊಳಿಸಿ ವಟಪುರ ಎಂಬುದಾಗಿ ಈ ಊರನ್ನು ಗುರುತಿಸುವ ಸಂಪ್ರದಾಯವೂ ಇದೆ.[2]



ಕರ್ನಾಟಕದಲ್ಲಿ ದ.ಕ/ಬಂಟ್ವಾಳ



ಆದರೆ ಬಂಟ್ವಾಳ ಎಂಬ ಹೆಸರು ಈ ಎಲ್ಲಾ ಅಭಿಪ್ರಾಯಗಳಿಂದ ಭಿನ್ನವಾದ ಬೇರೆಯೇ ಮೂಲದಿಂದ ಹುಟ್ಟಿಕೊಂಡಿದೆ ಎಂಬ ವಾದವೂ ಇದೆ. ಸಾಮಾನ್ಯವಾಗಿ ಇಂದು ಊರಿನ ಹೆಸರಿಗೆ ಅಲ್ಲಿನ ಭೌಗೋಳಿಕ ವೈಶಿಷ್ಟ್ಯಗಳೇ ಮೂಲವಾಗಿರುತ್ತವೆ ಎಂಬುದು ಸ್ಥಳ ನಾಮಾಧ್ಯಯನಗಳಿಂದ ಖಚಿತಗೊಂಡ ವಿಚಾರ. ತುಳುನಾಡಿನ ಶೇಕಡಾ ೭೫ ಕ್ಕೂ ಹೆಚ್ಚಿನ ಸ್ಥಳನಾಮಗಳಿಗೆ ಆ ಸ್ಥಳಗಳ ಭೌಗೋಳಿಕ ವೈಶಿಷ್ಟ್ಯಗಳಾದ ಗುಡ್ಡ, ಬೆಟ್ಟ, ಕಲ್ಲು, ನದಿ ಇತ್ಯಾದಿಗಳೇ ಮೂಲ ಎಂಬುದು ಅಧ್ಯಯನಗಳಿಂದ ಸ್ಪಷ್ಟವಾಗಿದೆ. ಬಂಟ್ವಾಳದಲ್ಲಿ ಹರಿಯುವ ನೇತ್ರಾವತಿಯು ಬಂಡೆಕಲ್ಲುಗಳಿಂದ ತುಂಬಿಕೊಂಡಿರುವುದನ್ನು ಕಾಣಬಹುದು. ಬಂಡೆಕಲ್ಲಿನಿಂದ ತುಂಬಿದ ನದಿಯಿಂದಾಗಿ ಬಂಡೆ+ಆಲ್ (ಆಲ್=ನೀರು, ನದಿ) > ಬಂಡಾಲ್ > ಬಂಟಾಲ್> ಬಂಟ್ವಾಳ ಎಂಬ ಹೆಸರು ಹುಟ್ಟಿಕೊಂಡಿದೆ ಎನ್ನುವ ವಾದ ಹೆಚ್ಚು ಸ್ವೀಕಾರ್ಹವೆನಿಸುತ್ತದೆ.[3]

ಬಂಟ್ವಾಳ ತಾಲೂಕಿನ ಪ್ರಾಗಿತಿಹಾಸದ ಬಗ್ಗೆ ಹೇಳುವುದಾದರೆ ಸುಮಾರು ೨೫೦೦ ವರ್ಷಗಳಷ್ಟು ಪೂರ್ವದಲ್ಲೇ ಬೃಹತ್ ಶಿಲಾಯುಗ (ಕಬ್ಬಿಣಯುಗ) ಸಂಸ್ಕೃತಿಯು ಬಂಟ್ವಾಳ ತಾಲೂಕಿನ ಬಡಗಕಜೆಕಾರಿನ ಗ್ರಾಮದ ಪಾಂಡವರ ಕಲ್ಲು ಎಂಬಲ್ಲಿ ದೊರೆತ ಬೃಹತ್ ಆಕಾರದ ಕಲ್ಲಿನ ಚಪ್ಪಡಿಗಳ ಕುರುಹುಗಳ ಮೂಲಕ ತಿಳಿಯಬಹುದು.

ಬಂಟ್ವಾಳ ತಾಲೂಕಿನ ಇತಿಹಾಸ ಯುಗದಲ್ಲಿ ಸುಮಾರು ಕ್ರಿ.ಶ 5ನೇ ಶತಮಾನದಿಂದ 14 ನೇ ಶತಮಾನಾಂತ್ಯದ ತನಕ ತುಳುನಾಡನ್ನಾಳಿದವರು ಆಳುಪ ವಂಶದ ಅರಸರು. ಕ್ರಿ.ಶ 1336 ರಲ್ಲಿ ಸಂಪನ್ನಗೊಂಡ ವಿಜಯನಗರದ ಸಾಮ್ರಾಜ್ಯದ ಸ್ಥಾಪನೆಯು ತುಳುನಾಡಿನ ಇತಿಹಾಸದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿಯಾಯಿತು. ಸುಮಾರು ಐದು ಶಾಸನಗಳಲ್ಲಿ ಇದರ ವಿವರಗಳನ್ನು ತಿಳಿಯಬಹುದು. ಬಂಟ್ವಾಳ ತಾಲೂಕಿನಲ್ಲಿ ಗುರುತಿಸಲಾದ ವಿಜಯನಗರ ಶಾಸನಗಳ ಪೈಕಿ ಕ್ರಿ.ಶ 1364 ರ ಒಂದನೇ ಬುಕ್ಕರಾಯನ ಬಂಟ್ವಾಳ ಮೂಡ ಶಾಸನ ಅತ್ಯಂತ ಹಳೆಯದು.[4]

ವಿಜಯನಗರದ ಪತನದ ನಂತರ ಬಂಟ್ವಾಳ ತಾಲೂಕು ಕೆಳದಿ ಅರಸರ ಅಧೀನಕೊಳ್ಳಪಟ್ಟಿತು. ಬಂಟ್ವಾಳ ತಾಲೂಕಿನ ವಿವಿಧ ಪ್ರದೇಶಗಳ ಮೇಲೆ ಅಧಿಕಾರವನ್ನು ಹೊಂದಿದ್ದ ವಿಟ್ಲದ ಡೊಂಬ ಹೆಗ್ಗಡೆ ಅರಸರು, ಬಂಗರು ಹಾಗೂ ಚೌಟ ಅರಸರು ಕೆಳದಿ ಅರಸರ ಸಾಮಂತರಾಗಿ ಅವರಿಗೆ ಕಪ್ಪಕಾಣಿಕೆಗಳನ್ನು ನೀಡುತ್ತಿದ್ದರು.

ಕ್ರಿ.ಶ 1763 ರಲ್ಲಿ ಹೈದರಾಲಿಯು ಕೆಳದಿ ಸಾಮ್ರಾಜ್ಯವನ್ನು ವಶಪಡಿಸಿ ಕೊಂಡಾಗ ಅದರ ಭಾಗವಾಗಿದ್ದ ತುಳುನಾಡು ಅವನ ವಶವಾಯಿತು. ಕ್ರಿ.ಶ 1763 ರಿಂದ 1799 ರ ತನಕ ಸುಮಾರು ಮೂರುವರೆ ದಶಕಗಳ ಕಾಲ ಈ ಪ್ರದೇಶ ಹೈದರಾಲಿ ಮತ್ತು ಟೀಪು ಸುಲ್ತಾನರ ಪ್ರಾಬಲ್ಯಕ್ಕೊಳಗಾಗಬೇಕಾಯಿತು.[5]

1799 ರಲ್ಲಿ ಟೀಪು ಸುಲ್ತಾನರು ಶ್ರೀರಂಗಪಟ್ಟಣ ಯುದ್ಧದಲ್ಲಿ ಬ್ರಿಟಿಷರಿಂದ ಹತನಾದಾಗ ಆತನ ರಾಜ್ಯದ ಭಾಗವಾಗಿದ್ದ ಈ ಪ್ರದೇಶ ಬ್ರಿಟಿಷರ ಆಳ್ವಿಕೆ ಸೇರಿಹೋಯಿತು.[6] ೧೮೩೭ ರಲ್ಲಿ ಸುಳ್ಯದ ರೈತರು ಕಲ್ಯಾಣಪ್ಪನ ನೇತ್ರತ್ವದಲ್ಲಿ ನಡೆಸಿದ ದಂಗೆಯ ಕಾಲದಲ್ಲಿ ನಂದಾವರದ ಬಂಗರಸ ಪ್ರಮುಖ ಪಾತ್ರ ವಹಿಸಿದ್ದನೆಂಬುದು ಅಧ್ಯಯನಗಳಿಂದ ತಿಳಿದು ಬರುತ್ತದೆ.

ಬಂಟ್ವಾಳ ಸೀಮೆಯಲ್ಲಿರುವ ಎರಡು ಪ್ರಮುಖ ಪರ್ವತ ಶಿಖರ ದೇವಾಲಯಗಳೆಂದರೆ ಕಾರಿಂಜೆ ಮತ್ತು ನರಹರಿ ಬೆಟ್ಟಗಳು ಈ ಪರ್ವತದ ದೇವಾಲಯಗಳಲ್ಲಿ ಶಿವನು ಆರಾಧನೆಗೆ ಒಳಗಾಗಿರುವುದು ಗಮನಿಸಬೇಕಾದ ಅಂಶವಾಗಿದೆ.

೪.೧.೨ ತಾಲೂಕಿನ ಸಾಂಸ್ಕೃತಿಕ ಸಮೃದ್ಧಿ: ಜಗತ್ತಿನಾದ್ಯಂತ ಕಂಡುಬರುವ ಹೆಚ್ಚಿನ ಎಲ್ಲಾ ಸಂಸ್ಕೃತಿಗಳೂ ತಾಯಿಗೆ ಪ್ರಧಾನ ಸ್ಥಾನ ನೀಡಿವೆ. ವೈದಿಕ ಸಂಸ್ಕೃತಿ ಭಾರತದಲ್ಲಿ ಪ್ರಚಾರಕ್ಕೆ ಬರುವ ಮೊದಲು ಸಿಂಧೂನದಿ ಕಣಿವೆಯಲ್ಲಿ ನೆಲೆಸಿದ್ದ ಜನರು ಮಾತೃ ಪೂಜಕರಾಗಿದ್ದರು. ಮಣ್ಣಿನಿಂದ ಮಾಡಿದ ಮಾತೃ ದೇವತೆಯ ಸುಂದರ ಮೂರ್ತಿ ಅಲ್ಲಿ ದೊರೆತಿರುವುದು ಅದಕ್ಕೆ ಸಾಕ್ಷಿಯಾಗಿದೆ. ತುಳುವರು ಮಾತೃ ಪ್ರಧಾನ ಸಂಸ್ಕೃತಿಯವರು, ಶಕ್ತಿಯನ್ನು ಹೆಣ್ಣೆಂದು ಪರಿಗಣಿಸುವವರು. ಜಗತ್ ಶಕ್ತಿ ಮಯಂ ವಿದ್ಯಾತ್ ಎಂದು ಬಗೆದವರು. ಭೂತಾರಾಧಕರಾದ ತುಳುವರು ಶಕ್ತಿಯನ್ನು ಉಳ್ಳಾಲ್ತಿ, ಕಲ್ಲುರ್ಟಿ, ಸತ್ಯದೇವತೆ, ಜೂಮಾದಿ, ಲೆಕ್ಕೆಸಿರಿ ಇತ್ಯಾದಿ ಹೆಸರುಗಳಿಂದ ಕರೆದು ಆರಾಧಿಸತೊಡಗಿದರು. ವೈದಿಕ ಸಂಸ್ಕೃತಿಯ ಪ್ರಭಾವದಿಂದ ಇವರೆಲ್ಲ ದುರ್ಗಾಪರಮೇಶ್ವರಿ, ಉಮಾಮಹೇಶ್ವರಿ, ಕಾಳಿಕಾಪರಮೇಶ್ವರಿ, ರಾಜರಾಜೇಶ್ವರಿಯೊಂದಿಗೆ ಸಮೀಕರಣಗೊಂಡರು. ತುಳುನಾಡಿನ ಎಲ್ಲ ಭಾಗಗಳಲ್ಲಿಯೂ ಶಕ್ತಿಯ ಆರಾಧನೆ ನಡೆಯುತ್ತಿದ್ದರೂ ನೇತ್ರಾವತಿಯ ಎಡಭಾಗದಲ್ಲಿ ಅದರಲ್ಲಿಯೂ ಮುಖ್ಯವಾಗಿ ಬಂಟ್ವಾಳ ತಾಲೂಕಿನ ಬಹುಭಾಗಗಳಲ್ಲಿ ಶಕ್ತಿ ಇನ್ನೂ ಉಳ್ಳಾಲ್ತಿ ಕಲ್ಲುರ್ಟಿಯ ಆದಿ ರೂಪದಲ್ಲೇ ಭಕ್ತರಿಂದ ಸೇವೆ ಸ್ವೀಕರಿಸಿಕೊಂಡು ಬರುತ್ತಿದ್ದಾಳೆ. ವಿಟ್ಲ

ಸಮೀಪದ ಕಡಂಬು, ಪಣೋಲಿಬೈಲು, ಪಾಣೆಮಂಗಳೂರು ಕ್ಷೇತ್ರಗಳಲ್ಲಿ ಕಲ್ಲುರ್ಟಿಯು ಕಾರಣಿಕಗಳಿಂದಾಗಿ ಬಹಳಷ್ಟು ಪ್ರಸಿದ್ಧಿಯನ್ನು ಪಡೆದಿದೆ.

ಭೂತಾರಾಧನೆ ಒಂದು ಪ್ರಧಾನ ಜಾನಪದೀಯ ಆರಾಧನಾ ಕಲೆಯಾಗಿರುತ್ತದೆ. ತುಳುನಾಡಿನ ಜನರು ಭೂತಗಳನ್ನು ದೈವಿಕ ಶಕ್ತಿಗಳೆಂದು ನಂಬಿ ಆರಾಧಿಸುತ್ತಾರೆ. ನಿಗದಿ ಮಾಡಿದ ಸ್ಥಳ ಕಾಲ ಮತ್ತು ಅವಧಿಯಲ್ಲಿ ಅಲೌಕಿಕವಾದ ಆವರಣವನ್ನು ನಿರ್ಮಿಸಿಕೊಂಡು ತಾವು ನಂಬಿಕೊಂಡು ಬಂದ ಅನೇಕ ಭೂತಗಳನ್ನು ಪೂಜಿಸುತ್ತಾರೆ. ತುಳು ನಾಡಿನೊಳಗಿರುವ ಬಂಟ್ವಾಳ ಸೀಮೆಯಲ್ಲಿಯೂ ಬಹಳಷ್ಟು ಭೂತಗಳು ಆರಾಧಿಸಲ್ಪಡುತ್ತವೆ. ಬಂಟ್ವಾಳ ಸೀಮೆಯಲ್ಲಿ ಭೂತಾರಾಧನೆಯು ಯಾವುದೇ ಒಂದು ಪ್ರದೇಶದ ಅಥವಾ ಯಾವುದೇ ಒಂದು ಜಾತಿ ಮತ್ತು ಕುಟುಂಬಸ್ಥರಿಗೆ ಮಾತ್ರ ಸೀಮಿತವಾಗಿಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತರೆಂಬ ಭೇದವಿಲ್ಲದೆ ಎಲ್ಲರೂ ದೈವಗಳಿಗೆ ಗೌರವ ನೀಡುತ್ತಾರೆ.[7]

ಜಾನಪದದಲ್ಲಿ ಪ್ರದರ್ಶನ ಕಲೆ ಒಂದು ಮುಖ್ಯ ಅಂಗವಾಗಿರುತ್ತದೆ. ಪ್ರದರ್ಶನ ಕಲೆಗಳಲ್ಲಿ ಜನಪದ ಕುಣಿತಗಳು ಒಂದು ಪ್ರಕಾರವಾಗಿರುತ್ತದೆ. ಅವು ಮಾನವನ ಸಹಜ ಕ್ರಿಯೆಗಳು. ಕುಣಿತವು ಭಾಷೆ ಹುಟ್ಟುವುದಕ್ಕಿಂತ ಪೂರ್ವದಲ್ಲೇ ಹುಟ್ಟಿಕೊಂಡಿದೆ. ಸಾಮಾನ್ಯ ಸ್ತರಕ್ಕಿಂತ ಹೆಚ್ಚಿನ ಸ್ತರಗಳಲ್ಲಿ ತಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಒಂದು ಪ್ರಕ್ರಿಯೆಯೇ ಕುಣಿತ. ಓದು ಬರಹಬಾರದ ಸಮಾಜದ ಕೆಳಸ್ತರದ ಜನರು ಕುಣಿತವನ್ನೇ ತಮ್ಮ ಅಭಿವ್ಯಕ್ತ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದರು. ಜಿಲ್ಲೆಯ ಎಲ್ಲಾಕಡೆ ಪ್ರಚಲಿತವಾಗಿದ್ದ ಅನೇಕ ಜನಪದ ಕುಣಿತಗಳು ಇಂದು ಬಹಳಷ್ಟು ತಾಲೂಕುಗಳಲ್ಲಿ ನಶಿಸಿಹೋಗಿವೆ. ಆದರೆ ಬಂಟ್ವಾಳ ತಾಲೂಕಿನಲ್ಲಿ ಮಾತ್ರ ಇನ್ನೂ ಹಲವಾರು ಕುಣಿತಗಳು ಉಳಿದುಕೊಂಡಿವೆ. ಕುಣಿತವನ್ನೇ ಪ್ರಧಾನ ವೃತ್ತಿಯನ್ನಾಗಿ ಇಟ್ಟುಕೊಂಡ ನಲ್ಕೆಯವರು, ಆಟಿಕಳಂಜ, ಮಾದಿರ, ಕನ್ಯಾಪು, ಸೋಣೊದ ಜೋಗಿ ಕುಣಿತಗಳನ್ನು ನಡೆಸಿದರೆ ಮೋಗೆರರು ದುಡಿ, ಕರಂಗೋಲು ಕುಣಿತ ನಡೆಸುತ್ತಾರೆ. ಆದಿ ದ್ರಾವಿಡರೂ ಕೂಡ ಇದೇ ಕುಣಿತಗಳನ್ನು ನಡೆಸುತ್ತಾರೆ. ಪರವರು ಮದಿಮಯೆ ಮದಿಮಲ್ ಕುಣಿತವನ್ನು, ಮರಾಠಿ ಜನಾಂಗದವರು ಗೊಂದೋಳು, ಬಾಲೆಸಾಂತು ಕುಣಿತಗಳನ್ನು ನಡೆಸುತ್ತಾರೆ.[8]

ಕಂಬಳ, ಕೋಳಿ ಅಂಕ, ಚೆನ್ನೆ, ಚೆಂಡು ಕಾಯಿ ಕುಟ್ಟುವುದು ಇವೆಲ್ಲಾ ತುಳುನಾಡಿನ ಜನಪದ ಕ್ರೀಡೆಗಳು. ಬಂಟ್ವಾಳ ತಾಲೂಕಿನಲ್ಲಿ ಇವೆಲ್ಲಾ ಈಗಲೂ ಉಳಿದುಕೊಂಡಿವೆ.


ಪೊಳಲಿ ಜಾತ್ರೆಯ ಚೆಂಡಾಟ ಒಂದು ಆರಾಧನಾ ಕ್ರೀಡೆಯಾಗಿ ಬೆಳೆದಿದೆ. ಪ್ರತಿ ಗ್ರಾಮ, ಮಾಗಣೆಗಳಲ್ಲಿ ಭೂತಕೋಲ ಮುಗಿದೊಡನೆ ಕೋಳಿ ಗೂಟ ಹಾಕಿ ಮೂರು–ಐದು –ಏಳು– ದಿವಸಗಳವರೆಗೆ ಕೋಳಿ ಅಂಕ ನಡೆಸುವ ಪದ್ಧತಿ ಇದೆ. ಪ್ರತಿ ಪರ್ವ ದಿನಗಳಲ್ಲೂ ಹಳ್ಳಿಯ ಜನರು ಸೇರಿಕೊಂಡು ಕಾಯಿ ಕುಟ್ಟುವುದಂತೂ ಇದ್ದೇ ಇರುತ್ತದೆ. ಮನೆ ಮನೆಗಳಲ್ಲಿ ಚೆನ್ನೆ ಆಟ ನಡೆಯುತ್ತದೆ. ನಂದಾವರ ಪಾಣೆಮಂಗಳೂರು ಹಾಗೂ ಮೂಡೂರು– ಪಡೂರು ಜೋಡುಕೆರೆ ಕಂಬಳ ಅತ್ಯಂತ ಪ್ರಸಿದ್ಧಿ ಪಡೆದಿದೆ. ಜನಪದ ಕ್ರೀಡೆಗಳ ಬಗ್ಗೆ ಬಂಟ್ವಾಳದ ಜನರು ಈಗಲೂ ಆಸಕ್ತಿಯನ್ನು ಉಳಿಸಿಕೊಂಡಿರುವುದು ದೊಡ್ಡ ಸಂಗತಿಯಾಗಿದೆ.[9]

೪.೨ ಭೌಗೋಳಿಕ ಬಂಟ್ವಾಳ

ಬಂಟ್ವಾಳ ತಾಲೂಕು ಭೌಗೋಳಿಕವಾಗಿ ದಕ್ಷಿಣಕನ್ನಡ ಜಿಲ್ಲೆಯ ದೊಡ್ಡ ತಾಲೂಕು, ಮೂರು ವಿಧಾನ ಸಭಾ ಕ್ಷೇತ್ರ, ಎರಡು ಲೋಕಸಭಾ ಕ್ಷೇತ್ರಗಳಲ್ಲಿ ಹಂಚಿಕೊಂಡಿರುವ ರಾಷ್ಟ್ರದಲ್ಲಿಯೇ ರಾಜಕೀಯ ವಿಶಿಷ್ಟತೆಯ ಎರಡನೇ ತಾಲೂಕು ಎನಿಸಿದೆ.[10] (ನೋಡಿ ನಕ್ಷೆ ೪.೨).

ಬಂಟ್ವಾಳ ತಾಲೂಕಿನ ೮೪ ಗ್ರಾಮಗಳು ಮತ್ತು ೪೬ ಗ್ರಾಮ ಪಂಚಾಯತ್‌ಗಳಿವೆ. (ನೋಡಿ ನಕ್ಷೆ ೪.೨) ದ.ಕ ಜಿಲ್ಲೆಯ ಜೀವನದಿ ನೇತ್ರಾವತಿ ತಾಲೂಕಿನ ಮಧ್ಯ ಭಾಗದಲ್ಲಿ ಹರಿದು ಹೋಗುವ ಮೂಲಕ ಜನ ಜೀವನಕ್ಕೆ ದೊಡ್ಡ ಕೊಡುಗೆ ನೀಡಿದೆ. ತಾಲೂಕಿನ ಅಂಚಿನಲ್ಲಿ ಹರಿದು ಹೋಗುವ ಫಲ್ಗುಣಿ ನದಿ ಕೂಡಾ ವರ್ಷ ಪೂರ್ತಿ ಸಿಹಿನೀರಿನ ಒಡಲನ್ನು ಹೊಂದಿದೆ.

ಬಂಟವಾಳವೂ ಕರ್ನಾಟಕ ರಾಜ್ಯದ ದ.ಕ ಜಿಲ್ಲೆಯ ಐದು ತಾಲೂಕುಗಳಲ್ಲಿ ಒಂದಾಗಿದ್ದು ಪುತ್ತೂರು, ಮಂಗಳೂರು, ಬೆಳ್ತಂಗಡಿಗಳಿಂದ ಆವೃತವಾಗಿದೆ. ಬಂಟವಾಳದ ಒಂದು ಪಾರ್ಶ್ವವು ಕೇರಳಕ್ಕೆ ತಾಗಿಕೊಂಡಿದೆ.



ಸಮಗ್ರ ಬಂಟ್ವಾಳ ತಾಲೂಕು

ತಾಲೂಕಿನ ಬಹುಭಾಗವು ನೇತ್ರಾವತಿ ನದಿಯ ಇಕ್ಕೆಲಗಳಲ್ಲಿ ಹಬ್ಬಿಹೋಗಿದೆ. ರಾಷ್ಟ್ರೀಯ ಹೆದ್ದಾರಿ ೪೮ ಮತ್ತು ಮಂಗಳೂರು – ಬೆಂಗಳೂರು ರೈಲು ಹಾದಿ ಬಂಟ್ವಾಳ ತಾಲೂಕನ್ನು ಸೀಳಿಕೊಂಡು ಹಾದು ಹೋಗುತ್ತದೆ. ತಾಲೂಕಿನ ಕೇಂದ್ರವಾದ ಬಂಟ್ವಾಳ ನಗರಕ್ಕೆ ಇವೆರಡರ ಸ್ಪರ್ಶ ಭಾಗ್ಯವಿಲ್ಲ. ಆದೇನಿದ್ದರೂ ಬಿ.ಸಿ ರೋಡು ನಗರಕ್ಕೆ ಮಾತ್ರ ಅವುಗಳ ಸ್ಪರ್ಶ ಭಾಗ್ಯ. ತಾಲೂಕಿನ ಒಳನಾಡಿನ ಹೆಚ್ಚಿನ ಗ್ರಾಮಗಳು ತೀರಾ ಹಿಂದುಳಿದಿವೆ. ಅಭಿವೃದ್ಧಿಯ ಕಾರ್ಯಕ್ರಮದೊಡನೆ ಯಾವುದಾದರೂ ಸಂಘಟನೆಗಳು ತಮ್ಮಲ್ಲಿಗೆ ಬರಬಾರದೇ ಎಂದು ಹಂಬಲಿಸುತ್ತಿದ್ದ ಗ್ರಾಮೀಣ ಬಂಟ್ವಾಳಕ್ಕೆ ಸ್ವಸಹಾಯ ಚಳವಳಿಯು ಭಗೀರಥ ಧರೆಗಿಳಿಸಿದ ಗಂಗೆಯಂತಾಗಿದೆ.

೧.೧೦ ೧೯೫೫ ರಂದು ಈಗಿನ ಬಂಟ್ವಾಳ ತಾಲೂಕಿನ ರಚನೆಯಾಯಿತು. ಪ್ರಸ್ತುತ ಬಂಟ್ವಾಳ ತಾಲೂಕು ಬಂಟ್ವಾಳ, ಪಾಣೆಮಂಗಳೂರು, ವಿಟ್ಲ ಎಂಬ ಮೂರು ಹೋಬಳಿಗಳನ್ನು ಹೊಂದಿದೆ. ಬಂಟ್ವಾಳ ತಾಲೂಕು ೮೪ ಗ್ರಾಮಗಳು, ೫೫ ಗ್ರಾಮ ಚಾವಡಿಗಳು, ೪೭ ಗ್ರಾಮ ಪಂಚಾಯತ್‌ಗಳು ಹಾಗೂ ೩ ನಾಡ ಕಛೇರಿಗಳನ್ನು ಹೊಂದಿದೆ. ಬಂಟ್ವಾಳ ತಾಲೂಕು ೨ ಲೋಕಸಭಾ ಕ್ಷೇತ್ರಗಳಲ್ಲಿ ವ್ಯಾಪಿಸಿಕೊಂಡಿದೆ. (ಉಡುಪಿ ಮತ್ತು ಮಂಗಳೂರು)[11]

೪. ೩ ಬಂಟ್ವಾಳದ ಆರ್ಥಿಕತೆ

ದ.ಕ ಜಿಲ್ಲೆಯಲ್ಲಿ ಬಂಟ್ವಾಳ ತಾಲೂಕಿನ ಒಟ್ಟು ಸ್ಥಾನಮಾನದ ಅವಲೋಕನದೊಂದಿಗೆ ಆರ್ಥಿಕತೆಯ ಅಧ್ಯಯನ ಆರಂಭಗೊಳ್ಳುತ್ತದೆ. ಕೋಷ್ಟಕ ೪.೧ ತುಲನಾತ್ಮಕ ಅಧ್ಯಯನ ಮಾಡುತ್ತದೆ.

ಕೋಷ್ಟಕ ೪.೧: ದ.ಕ ಜಿಲ್ಲೆಯಲ್ಲಿ ಬಂಟ್ವಾಳ

ಕ್ರಮ ಸಂಖ್ಯೆ	ವಿವರಗಳು	ಭಾರತ	ಕರ್ನಾಟಕ	ದಕ್ಷಿಣ ಕನ್ನಡ	ಬಂಟ್ವಾಳ
1	ಒಟ್ಟು ವಿಸ್ತೀರ್ಣ (ಚ.ಕಿ.ಮೀ)	30650127	191791	4560	735
2	ಜನಸಂಖ್ಯೆ ಒಟ್ಟು	1027015247	52733958	1897730	361554
	ಗಂಡಸರು	531277078	26856343	938434	178664
	ಹೆಂಗಸರು	495738169	25877615	959296	182890
3	ಗ್ರಾಮೀಣ ಪ್ರದೇಶ ಒಟ್ಟು	741660293	34814100	1168428	306734
	ಗಂಡಸರು	381141184	17618593	574657	151394
	ಹೆಂಗಸರು	360519109	17195507	593771	155340
4	ನಗರ ಪ್ರದೇಶ ಒಟ್ಟು	285354954	1799858	729302	54820
	ಗಂಡಸರು	150135894	9237750	363777	27270
	ಹೆಂಗಸರು	135219050	8682108	365525	27550
5	ದಶಕದ ಬೆಳವಣಿಗೆ ಒಟ್ಟಾರೆ (೧೯೯೧ ರಿಂದ ೨೦೦೧) ಶೇಕಡಾ	180627359 21.34	7756757 17.25	241565 14.58	-
6	ಜನಸಾಂದ್ರತೆ	324	275	416	492
7	ಲಿಂಗಾನುಪಾತ (೧೦೦೦ ಪ್ರತಿ ಪುರುಷರಿಗೆ ಮಹಿಳೆಯರ ಸಂಖ್ಯೆ)	933	964	1022	1020
8	ಸಾಕ್ಷರತೆ ಪ್ರಮಾಣ ಒಟ್ಟು	566714995	30774988	1391738	255387
	ಶೇಕಡಾ	65.38	67.04	79.7	80.2
	ಗಂಡಸರು ಒಟ್ಟು	33996904	17817382	593890	116255
	ಶೇಕಡಾ	75.85	76.29	87	88
	ಹೆಂಗಸರು ಒಟ್ಟು	2267745947	12957306	654776	99730
	ಶೇಕಡಾ	54.15	57.45	72.7	73
9	ತಾಲೂಕುಗಳ ಸಂಖ್ಯೆ	3298	176	5	-

ಆಧಾರ: ದ.ಕ ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೬, ಪು: ೭೨

೪.೩.೧: ಜನ ಸಾಂದ್ರತೆ ಮತ್ತು ಲಿಂಗಾನುಪಾತ: ದ.ಕ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ತಾಲೂಕಿನ ಪಾಲು ಶೇ ೧೬.೧೨ ರಷ್ಟಿದೆ. ಐದು ತಾಲೂಕುಗಳ ಪೈಕಿ ಅತ್ಯಂತ ಸಣ್ಣದು ಬಂಟ್ವಾಳವೇ. ಆದರೆ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ (ಶೇ ೧೯.೦೫) ರಷ್ಟು ಬಂಟ್ವಾಳದ ಕೊಡುಗೆಯಾಗಿದೆ. ಮಂಗಳೂರು ತಾಲೂಕನ್ನು ಹೊರತು ಪಡಿಸಿದರೆ (ಶೇ೪೬.೫) ಅತ್ಯಂತ ಹೆಚ್ಚು ಜನರಿರುವುದು ಬಂಟ್ವಾಳ ತಾಲೂಕಿನಲ್ಲೇ. ಮೂರ್ತಿ(ವಿಸ್ತೀರ್ಣ) ಚಿಕ್ಕದಾದರೂ ಕೀರ್ತಿ (ಜನಸಂಖ್ಯೆ) ದೊಡ್ಡದು! ತಾಲೂಕಿನ ಜನಸಾಂದ್ರತೆ ಪ್ರತಿ ಚದರ ಕಿ.ಮೀ ಗೆ ೪೯೨ ರಷ್ಟಿದ್ದು ಇದು ಜಿಲ್ಲೆಯ (೪೧೬) ಜನಸಾಂದ್ರತೆಗಿಂತಲೂ ಅಧಿಕವಾಗಿದೆ. ಮಂಗಳೂರು ತಾಲೂಕಿನ ಬಳಿಕ (೧೦೪೮) ಬಂಟ್ವಾಳವು ಜಿಲ್ಲೆಯ ಅತ್ಯಧಿಕ ಜನಸಾಂದ್ರತೆ ಹೊಂದಿರುವ ತಾಲೂಕಾಗಿದೆ.[13]

ದ.ಕ ಜಿಲ್ಲೆಯ ಲಿಂಗಾನುಪಾತವು ಪ್ರತಿ ೧೦೦೦ ಗಂಡಸರಿಗೆ ೧೦೨೨ ಆಗಿರುತ್ತದೆ. ಬಂಟ್ವಾಳ ತಾಲೂಕಿನಲ್ಲಿ ಇದು ೧೦೦೦: ೧೦೨೦ ಇರುವುದು ಗಮನಾರ್ಹವಾಗಿದೆ. ಇದು ಅಖಿಲ ಭಾರತದ (೧೦೦೦: ೯೩೩) ಮತ್ತು ಕರ್ನಾಟಕದ (೧೦೦೦: ೯೬೪) ಲಿಂಗಾನುಪಾತಕ್ಕಿಂತ ಅಧಿಕವಾಗಿರುತ್ತದೆ. ಹೆಣ್ಣಾದರೇನು, ಗಂಡಾದರೇನು? ಮಗು ಮಗುವೇ. ಸ್ತ್ರೀ – ಪುರುಷ ಸಮಾನತೆಯ ಧೋರಣೆಯ ಪ್ರತಿಫಲವಿದು. ೨೦೦೧ ರ ಜನಗಣತಿಯ ಪ್ರಕಾರ ಭಾರತದಲ್ಲಿ ಕಳೆದುಹೋದ ಜನಸಂಖ್ಯೆಯ ಒಟ್ಟು ಮೊತ್ತ ೩೫ ದಶಲಕ್ಷಗಳು.[14] ಕಳೆದ ಹೋದ ಜನಸಂಖ್ಯೆಯೆಂದರೆ ಲಿಂಗ ಪತ್ತೆ ಹಚ್ಚಿ ಮಾಡಿದ ಹೆಣ್ಣು ಭ್ರೂಣ ಹತ್ಯೆ ಎಂದರ್ಥ. ಈ ವಿಷಯದಲ್ಲಿ ದ.ಕ ಜಿಲ್ಲೆ ಸಮಗ್ರವಾಗಿ ಮತ್ತು ಬಂಟ್ವಾಳ ತಾಲೂಕು ನಿರ್ದಿಷ್ಟವಾಗಿ ಶ್ಲಾಘನೆಗೆ ಒಳಗಾಗುತ್ತದೆ. ಏಕೆಂದರೆ ತಾಲೂಕಿನಲ್ಲಿ ಗಂಡಸರಿಗಿಂತ ಹೆಂಗಸರು ಅಧಿಕ ಸಂಖ್ಯೆಯಲ್ಲಿದ್ದಾರೆ.

೪.೩.೨ ವಿತರಣೆ ಮತ್ತು ಸಾಕ್ಷರತೆ: ಬಂಟ್ವಾಳ ತಾಲೂಕಿನ ಒಟ್ಟು ಜನ ಸಂಖ್ಯೆಯಲ್ಲಿ ಶೇ ೮೫ ರಷ್ಟು ಗ್ರಾಮವಾಸಿಗಳಾದರೆ ಕೇವಲ ಶೇ ೧೫ ರಷ್ಟು ಮಾತ್ರ ನಗರವಾಸಿಗಳು. ದ.ಕ ಜಿಲ್ಲೆ ಯಲ್ಲಿ ಒಟ್ಟು ಜನಸಂಖ್ಯೆಯಲ್ಲಿ ನಗರವಾಸಿಗಳ ಪ್ರಮಾಣ ಶೇ ೬೧.೫೭. ಬಂಟ್ವಾಳವು ಮಂಗಳೂರು ತಾಲೂಕಿಗೆ ಅಂಟಿಕೊಂಡಿದ್ದರೂ (ಗ್ರಾಮವಾಸಿಗಳು ಶೇ ೩.೨) ನಗರೀಕರಣ ಪ್ರಕ್ರಿಯೆಗೆ ಪೂರ್ತಿಯಾಗಿ ಒಳಗಾಗಿಲ್ಲ. ಆದುದರಿಂದ ಗ್ರಾಮೀಣಾಭಿವೃದ್ಧಿಯ

ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬಲ್ಲ ಸರಕಾರೇತರ ಸಂಸ್ಥೆಗಳಿಗೆ ಈ ತಾಲೂಕಿನಲ್ಲಿ ವಿಪುಲವಕಾಶಗಳಿವೆ.

ಬಂಟ್ವಾಳ ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ (೪.೭%) ಮತ್ತು ಪರಿಶಿಷ್ಟ ಪಂಗಡಗಳ (೪.೧೧%) ಒಟ್ಟು ಪ್ರಮಾಣ ಶೇ ೮.೮೧ ರಷ್ಟು. ಇದು ಇಡೀ ಜಿಲ್ಲೆಯ ಪ್ರಮಾಣಕ್ಕಿಂತ (೧೦.೦೦%) ಕಡಿಮೆಯಾಗಿರುತ್ತದೆ. ತಾಲೂಕಿನ ಸಾಕ್ಷರತೆಯ ಪ್ರಮಾಣ ಶೇ ೮೦.೨ರಷ್ಟಿದ್ದು ಇದು ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ ೭೯.೭ ರಕ್ಕಿಂತ ಸ್ವಲ್ಪ ಹೆಚ್ಚಿದೆ. ಯಥಾಪ್ರಕಾರ ತಾಲೂಕಿನಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣವು (ಶೇ ೭೨.೭) ಪುರುಷ ಸಾಕ್ಷರತಾ ಪ್ರಮಾಣಕ್ಕಿಂತ (ಶೇ ೮೭.೯) ಎಷ್ಟೋ ಕಡಿಮೆಯಿದೆ. ಪುರುಷರಿಗಿಂತ ಮಹಿಳೆಯರ ಒಟ್ಟು ಸಂಖ್ಯೆ ಹೆಚ್ಚಿದ್ದರೂ ಮಹಿಳಾ ಸಾಕ್ಷರತಾ ಪ್ರಮಾಣ ಕಡಿಮೆಯಿರುವುದು ಆತಂಕಕಾರಿ ವಿಷಯವಾಗಿದೆ. ಮನೆಯು ಮೊದಲ ಪಾಠ ಶಾಲೆಯಾಗಬೇಕಾದರೆ, ಜನನಿ ನಿಜವಾದ ಅರ್ಥದಲ್ಲಿ ಗುರುವಾಗಬೇಕಾದರೆ ಆಕೆ ಸಾಕ್ಷರಳಾಗಿರಬೇಕು. ಬಂಟ್ವಾಳ ತಾಲೂಕಿನ ಸ್ತ್ರೀ ಶಕ್ತಿ ಯೋಜನೆಗಳು ಮಹಿಳಾ ಸಾಕ್ಷರತೆಯ ಬಗ್ಗೆ ಕೆಲಸ ಮಾಡಲು ವಿಪುಲಾವಕಾಶಗಳಿವೆಯೆನ್ನುವುದನ್ನು ಈ ಅಂಕಿ ಅಂಶಗಳು ತಿಳಿಯಪಡಿಸುತ್ತವೆ.


೪.೩.೩ ಭೂಮಿಯ ಬಳಕೆ: ಬಂಟ್ವಾಳ ತಾಲೂಕಿನ ಒಟ್ಟು ವಿಸ್ತೀರ್ಣ ೭೧೭೫೮ ಹೆಕ್ಟೇರುಗಳು. ದ.ಕ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಬಂಟ್ವಾಳ ತಾಲೂಕಿನ ಪಾಲು ಶೇ ೧೬.೧೨ ರಷ್ಟು ಮಾತ್ರ. ತಾಲೂಕಿನ ಭೂಮಿಯ ಬಳಕೆಯ ಚಿತ್ರಣವನ್ನು ಕೋಷ್ಟಕ ೪.೨ ತೋರಿಸುತ್ತದೆ.

ಕೋಷ್ಟಕ ೪.೨: ಬಂಟ್ವಾಳದ ಭೂಮಿಯ ಬಳಕೆ

ವಿವರಗಳು	ಬಳಕೆಯ ಭೂಮಿ (ಹೆಕ್ಟೇರುಗಳಲ್ಲಿ)	ಶೇಕಡಾ	ಕೋನ
ವ್ಯ ವಸಾಯ ಭೂಮಿ	26421	36.82	133^0
ಸಾಗುವಳಿಯಾಗದಿರುವ ಭೂಮಿ	14857	20.70	75^0
ಬಂಜರು ಭೂಮಿ	12833	17.88	64^0
ವ್ಯವಸಾಯೇತರ ಭೂಮಿ	10221	14.21	51^0
ಅರಣ್ಯ ಭೂಮಿ	5069	07.06	25^0
ಬೀಳು ಭೂಮಿ	2357	03.30	12^0
ಒಟ್ಟು	**71758**	**100**	**360^0**

ಆಧಾರ: ದ.ಕ ಜಿಲ್ಲಾ ಅಂಕಿ– ಅಂಶಗಳ ನೋಟ ೨೦೦೬

ಬಂಟ್ವಾಳದ ಭೂಮಿಯ ಬಳಕೆಯನ್ನು ಚಿತ್ರ ೪.೧ ಸ್ಪಷ್ಟವಾಗಿ ತಿಳಿಯಪಡಿಸುತ್ತದೆ.



ಚಿತ್ರ ೪.೧ : ಬಂಟ್ವಾಳದ ಭೂಮಿಯ ಬಳಕೆ

ಬಂಟ್ವಾಳದ ಭೂಮಿಯ ಬಳಕೆಯ ಪಕ್ಷಿ ನೋಟದಿಂದ ಕೆಲವು ಪ್ರಮುಖ ತೀರ್ಮಾನಗಳಿಗೆ ಬರಬಹುದು.

- ತಾಲೂಕಿನ ಕೃಷಿ ಭೂಮಿಯ ಪ್ರಮಾಣ ತೀರಾ ಕಡಿಮೆಯಿದ್ದು (೩೬.೮೭%) ಇದನ್ನು ಹೆಚ್ಚಿಸಬೇಕಾದ ಅನಿವಾರ್ಯತೆಯಿದೆ. ಸಾಗುವಳಿಯಾಗದಿರುವ ಭೂಮಿಯ ಪ್ರಮಾಣ ಶೇ ೨೦.೭ ರಷ್ಟು. ಇದರಲ್ಲಿ ೯೮೭೨ ಹೆಕ್ಟೇರು ಭೂಮಿಯನ್ನು ಕೃಷಿಗೆ ಬಳಸಬಹುದೆಂದು ಸರಕಾರದ ವರದಿ ತಿಳಿಸುತ್ತದೆ. ಇದು ಒಟ್ಟು ಭೂಮಿಯ ಶೇ ೧೩.೭೫ ರಷ್ಟು ಎನ್ನುವುದು ಗಮನಾರ್ಹವಾದ ಅಂಶವಾಗಿದೆ. ಇಷ್ಟು ಭೂಮಿಯನ್ನು ಸಾಗುವಳಿಗೆ ಬಳಸಲು ಸಾಧ್ಯವಾದರೆ ಒಟ್ಟು ಭೂಮಿಯಲ್ಲಿ ಅರ್ಧಾಂಶದಷ್ಟು ಕೃಷಿ ಭೂಮಿಯಾಗಿಬಿಡುತ್ತದೆ. ಸಾಗುವಳಿಗೆ ಅರ್ಹವಾದರೂ ಸಾಗುವಳಿಯಾಗದಿರುವ ಭೂಮಿಯನ್ನು ಬಡತನದ ರೇಖೆಯ ಕೆಳಗಿರುವ ಸ್ವಸಹಾಯ/ಪ್ರಗತಿ ಬಂಧು ಗುಂಪುಗಳ ಸದಸ್ಯರಿಗೆ ಹಂಚಲು ಸಾಧ್ಯವಾದರೆ ಅದು ಬಡತನ ಮತ್ತು ಅಪೂರ್ಣೋದ್ಯೋಗ ನಿವಾರಣೆಯಲ್ಲೊಂದು ಮೈಲಿಗಲ್ಲಾಗುತ್ತದೆ.

- ಬಂಟ್ವಾಳ ತಾಲೂಕಿನ ಒಟ್ಟು ಭೂ ಪ್ರದೇಶದಲ್ಲಿ ಶೇ ೧೭.೮೮ ರಷ್ಟು ಬಂಜರು ಭೂಮಿ ಮತ್ತು ಶೇ ೩.೩ ರಷ್ಟು ಬೀಳುಭೂಮಿಯೆಂದು ಸರಕಾರದ ಅಂಕಿ ಅಂಶಗಳಿಂದ ತಿಳಿದುಬರುತ್ತದೆ. ಈ ಬಂಜರು ಭೂಮಿಯನ್ನು ಮತ್ತು ಬೀಳು ಭೂಮಿಯನ್ನು ಸಮರ್ಪಕವಾಗಿ ಬಳಸಲು ಮಾರ್ಗೋಪಾಯಗಳನ್ನು ಕಂಡು ಹಿಡಿದು ಅದನ್ನು ಭೂರಹಿತ



ಸ್ವಸಹಾಯ/ಪ್ರಗತಿ ಬಂಧು ಗುಂಪುಗಳ ಸದಸ್ಯರಿಗೆ ವಿತರಿಸಬಹುದು. ಇದೊಂದು ಬಲು ದೊಡ್ಡ ಸವಾಲಿನ ವಿಷಯವಾಗಿದೆ.

- ಬಂಟ್ವಾಳ ತಾಲೂಕಿನ ಒಟ್ಟು ಭೂ ಪ್ರದೇಶದಲ್ಲಿ ಅರಣ್ಯ ಭೂಮಿಯ ಪಾಲು ಕೇವಲ ಶೇ೭.೦೬ ರಷ್ಟು ಮಾತ್ರ. ತಾಲೂಕಿನ ಪರಿಸರ ಅಸಮತೋಲನಕ್ಕಿದು ಸ್ಪಷ್ಟ ಪುರಾವೆಯಾಗಿದೆ. ಯಾವುದೇ ಭೂ ಪ್ರದೇಶದ ಮೂರನೇ ಒಂದರಷ್ಟು ಭೂಮಿ ಅರಣ್ಯಮಯವಾಗಿದ್ದರೆ ಮಾತ್ರ ಪರಿಸರ ಸಂರಕ್ಷಣೆಯಾಗುತ್ತದೆಂಬುದು ಪರಿಸರ ವಿಜ್ಞಾನಿಗಳು ಸಂಶೋಧನೆಯ ಮೂಲಕ ಕಂಡುಕೊಂಡ ಸತ್ಯ.[15] ಬಂಟ್ವಾಳ ತಾಲೂಕಿನ ಅರಣ್ಯ ಭೂಮಿ ಶೇ ೭ ರಿಂದ ಶೇ ೩೩ ಕ್ಕೆ ಹೆಚ್ಚಬೇಕಾಗಿದೆ. ಬಂಜರು ಬೂಮಿ ಮತ್ತು ಬೀಳು ಭೂಮಿಯನ್ನು ಅರಣ್ಯ ಭೂಮಿಯನ್ನಾಗಿ ಪರಿವರ್ತಿಸಲು ಸಾಧ್ಯವೇ ಎಂಬ ಬಗ್ಗೆ ಅರಣ್ಯ ಮತ್ತು ಕಂದಾಯ ಇಲಾಖೆ ಜಂಟಿಯಾಗಿ ಯೋಚಿಸಿ ಕಾರ್ಯ ಪ್ರವೃತ್ತವಾಗಬೇಕಾಗಿದೆ.

ಬಂಟ್ವಾಳ ತಾಲೂಕಿನ ಭೂ ಬಳಕೆಯ ವಿಧಾನವನ್ನು ಬದಲಾಯಿಸುವ ಅಗತ್ಯವಿದೆ. ಸರಕಾರವು ಸರಕಾರೇತರ ಸಂಸ್ಥೆಗಳ ಮತ್ತು ಸ್ವಸಹಾಯ/ ಪ್ರಗತಿ ಬಂಧು ಚಳುವಳಿಯ ನೆರವನ್ನು ಪಡೆದುಕೊಂಡು ಭೂ ಬಳಕೆಯ ವಿಧಾನವನ್ನು ಬದಲಾಯಿಸಿ ಇದನ್ನೊಂದು ಸಮೃದ್ಧ ತಾಲೂಕನ್ನಾಗಿ ಪರಿವರ್ತಿಸಬೇಕಾಗಿದೆ.


೪.೩.೪ ವೃತ್ತಿಯ ವಿತರಣೆ: ಬಂಟ್ವಾಳ ತಾಲೂಕಿನ ಒಟ್ಟು ಜನಸಂಖ್ಯೆ ೨೦೦೧ ರ ಜನಗಣತಿಯ ಪ್ರಕಾರ ೩೬೧೫೫ ಮತ್ತು ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಬಂಟ್ವಾಳಿಗರ ಪ್ರಮಾಣ ಶೇ ೧೯.೦೫ ರಷ್ಟಿದೆ. ತಾಲೂಕಿನ ವೃತ್ತಿಯ ವಿತರಣೆಯ ಚಿತ್ರಣವನ್ನು ಕೋಷ್ಟಕ ೪.೩ ತೋರಿಸುತ್ತದೆ.

ಕೋಷ್ಟಕ ೪.೩ ಬಂಟ್ವಾಳದ ವೃತ್ತಿಯ ವಿತರಣೆ


ವೃತ್ತಿಗಳು	ಗಂಡು	ಹೆಣ್ಣು	ಒಟ್ಟು	ಶೇಕಡಾ	ಕೋನ
ಕೃಷಿ ಸಾಗುವಳಿ	9246	3670	12916	6.48	23^0
ಕೃಷಿ ಕಾರ್ಮಿಕರು	8221	3564	11785	5.91	21^0
ಗೃಹ ಕೈಗಾರಿಕೆ	2196	8490	10686	5.36	20^0
ಇತರ	86584	77456	164037	82.25	296^0
ಒಟ್ಟು	**106244**	**93180**	**199424**	**100.00**	**360^0**
ಮುಖ್ಯ ಕೆಲಸಗಾರರು	-	-	180126	48.82	176^0
ಅರೆ ಕೆಲಸಗಾರರು	-	-	19298	06.34	23^0
ಕೆಲಸಗಾರರಲ್ಲದವರು	-	-	162130	44.84	161^0
ಒಟ್ಟು ಜನಸಂಖ್ಯೆ	-	-	**361554**	**100.00**	**360^0**

ಆಧಾರ: ದ.ಕ ಜಿಲ್ಲೆ ಅಂಕಿ ಅಂಶಗಳು ೨೦೦೬

ಬಂಟ್ವಾಳದ ವೃತ್ತಿಯ ವಿತರಣೆಯನ್ನು ಚಿತ್ರ ೪.೨ ಮತ್ತು ಚಿತ್ರ ೪.೩ ತಿಳಿಯಪಡಿಸುತ್ತದೆ.



ಚಿತ್ರ ೪.೨: ವೃತ್ತಿಯ ವಿತರಣೆ



ಚಿತ್ರ ೪.೩: ಕೆಲಸಗಾರರ ಪ್ರಮಾಣ





ಬಂಟ್ವಾಳ ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಶೇ ೪೮.೮೨ ರಷ್ಟು ಮುಖ್ಯ ಕೆಲಸಗಾರರು ಮತ್ತು ಶೇ ೬.೩೪ ರಷ್ಟು ಅರೆ ಕೆಲಸಗಾರರು. ಉಳಿದ ಶೇ ೪೪.೮೪ ರಷ್ಟು ಕೆಲಸಗಾರರಲ್ಲದವರು.

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಕೆಲಸಗಾರರಲ್ಲದವರ ಪ್ರಮಾಣ ಶೇ ೫೮ ರಷ್ಟಿದೆ. ಬಂಟ್ವಾಳ ತಾಲೂಕಿನಲ್ಲಿ ಈ ಪ್ರಮಾಣ ಶೇ ೪೫ ರಷ್ಟು ಅನ್ನುವುದು ಸಮಾಧಾನಕರ ವಿಷಯ. ಕೆಲಸಗಾರರಲ್ಲದವರೆಂದರೆ ೧೫ ವಯಸ್ಸಿಗಿಂತ ಕೆಳಗಿನವರು, ೬೦ ಕ್ಕಿಂತ ಹೆಚ್ಚು ವಯಸ್ಸಿನವರು, ಕಾಲೇಜು ವಿದ್ಯಾರ್ಥಿಗಳು ಮತ್ತು ನಿರುದ್ಯೋಗಿಗಳು. ಈ ವರ್ಗಗಳ ಖಚಿತ ಅಂಕಿ ಅಂಶ ಲಭ್ಯವಿಲ್ಲ. ಕೆಲಸಗಾರರಲ್ಲದವರ ಮಾಹಿತಿಗಳನ್ನು ಸಂಗ್ರಹಿಸಿ ವರ್ಗೀಕರಿಸಿ, ಅವರಲ್ಲಿ ನಿರುದ್ಯೋಗಿಗಳು ಎಷ್ಟಿದ್ದಾರೆ ಮತ್ತು ಅವರನ್ನು ಹೇಗೆ ಉದ್ಯೋಗಯೋಗ್ಯರನ್ನಾಗಿ ಮಾಡಬಹುದು ಎನ್ನುವುದನ್ನು ಅಧ್ಯಯನ ಮಾಡಬೇಕಾಗಿದೆ. ಹಾಗೆಯೇ ಶೇ ೬.೩೪ ರಷ್ಟಿರುವ ಅರೆಕೆಲಸಗಾರರನ್ನು ಪೂರ್ಣಕೆಲಸಗಾರರನ್ನಾಗಿ ಪರಿವರ್ತಿಸಬೇಕಾಗಿದೆ. ಇದು ಗ್ರಾಮೀಣಾಭಿವೃದ್ಧಿ ಯೋಜನೆಗಳ ಮುಂದಿರುವ ಸವಾಲುಗಳು.

ವೃತ್ತಿಯ ವಿತರಣೆಯನ್ನು (ಚಿತ್ರ ೪.೨ ಮತ್ತು ೪.೩) ಅವಲೋಕಿಸಿದಾಗ ಕೆಲವು ಕುತೂಹಲಕರ ಅಂಶಗಳು ಗೋಚರಿಸುತ್ತವೆ. ಕೃಷಿ ಸಾಗುವಳಿ ಮಾಡಿಕೊಂಡು ಮತ್ತು ಕೃಷಿ ಕಾರ್ಮಿಕರಾಗಿ ಜೀವನ ಕಂಡುಕೊಳ್ಳುವವರ ಪ್ರಮಾಣ ಒಟ್ಟು ಜನಸಂಖ್ಯೆಯಲ್ಲಿ ಶೇ ೧೨.೪ ರಷ್ಟಿದೆ. ಉದ್ಯೋಗ ಒದಗಿಸುವ ದೃಷ್ಟಿಯಿಂದ ಕೃಷಿಯು ಬಂಟ್ವಾಳದ ಆರ್ಥಿಕತೆಯ ಬೆನ್ನೆಲುಬಾಗಿ ಉಳಿದಿಲ್ಲ. ದೇಶದ ವೃತ್ತಿ ವಿತರಣೆಯನ್ನು ಗಮನಿಸಿದರೆ ಕೃಷಿಯು ಹಳೆಯ ವೈಭವದ ಸ್ಥಾನವನ್ನು ಉಳಿಸಿಕೊಂಡಿಲ್ಲದಿರುವುದು ಸ್ಪಷ್ಟವಾಗಿದೆ. ಆದರೆ ದೇಶದಲ್ಲಿ ಈಗಲೂ ಶೇ ೫೬.೭ ರಷ್ಟು ಮಂದಿ ಕೃಷಿ ಯಲ್ಲಿ ಮತ್ತು ಸಂಬಂಧೀ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.[16] ಬಂಟವಾಳ ತಾಲೂಕಿನ ಪರಿಸ್ಥಿತಿ ತೀರಾ ವಿಭಿನ್ನವಾಗಿದೆ.

- ತಾಲೂಕಿನ ಕೆಲಸಗಾರರಲ್ಲಿ ಶೇ ೫.೩೬ ಮಂದಿ ಗೃಹ ಕೈಗಾರಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೀಡಿ ಕಟ್ಟುವುದು ತಾಲೂಕಿನ ಪ್ರಮುಖ ಗೃಹ ಕೈಗಾರಿಕೆಯಾಗಿದೆ. ಒಂದು ಕಾಲದಲ್ಲಿ ಮಣ್ಣಿನ ಮಡಿಕೆ ತಯಾರಿ ತಾಲೂಕಿನ ಪ್ರಮುಖ ಕೈಗಾರಿಕೆಯೆನಿಸಿತ್ತು. ಆಧುನಿಕತೆ ಆಪೋಶನಗೊಂಡ ಅಂತ್ಯವಿಲ್ಲದ ವಿಷಯಗಳಲ್ಲಿ ಮಣ್ಣಿನ ಮಡಿಕೆ ತಯಾರಿಯೂ ಒಂದು. ಬೀಡಿ ಕಟ್ಟುವುದು ಅತ್ಯಂತ ಅನುಕೂಲಕರವಾದ

ಉದ್ಯೋಗವಾಗಿದೆ. ಇದರಲ್ಲಿ ಮಹಿಳೆಯರದೇ ಸಿಂಹಪಾಲು. ಬೀಡಿ ಕಟ್ಟುವವರು ಸೇದದಿದ್ದರೂ ಸೇದುವವರಿಗೆ ಬರುವ ಸಕಲ ಕಾಯಿಲೆಗಳು ಕಟ್ಟುವವರಿಗೂ ಬರುತ್ತದೆಯೆನ್ನುವುದನ್ನು ಕ್ಷೇತ್ರಾಧ್ಯಯನ ಕಾಲದಲ್ಲಿ ಮನವರಿಕೆಯಾಯಿತು. ಶ್ವಾಸಕೋಶದ ಕಾಯಿಲೆ, ಕ್ಯಾನ್ಸರ್, ಕೆಮ್ಮು- ಇತ್ಯಾದಿಗಳಿಂದ ಎಲುಬು ಗೂಡುಗಳಾಗುತ್ತಿರುವ ಬೀಡಿ ಕಾರ್ಮಿಕರು ಪರ್ಯಾಯ ವೃತ್ತಿಯ ಬಗ್ಗೆ ಯೋಚಿಸುತ್ತಿದ್ದಾರೆ.[17] ಸ್ವಸಹಾಯ ಮತ್ತು ಪ್ರಗತಿ ಬಂಧು ಗುಂಪುಗಳ ಅವರ ಪಾಲಿನ ಆಶಾಕಿರಣಗಳಾಗಿವೆ.

- ತಾಲೂಕಿನ ಕೆಲಸಗಾರರಲ್ಲಿ ಶೇ ೮೨.೨೫ ಇತರ ವೃತ್ತಿಗೆ ಸೇರಿದವರು. ಇತರ ವೃತ್ತಿಗಳಲ್ಲಿ ಸೇವಾ ವಲಯದ ಮತ್ತು ಕೈಗಾರಿಕಾ ವಲಯದ ವೃತ್ತಿಗಳು ಒಳಗೊಂಡಿವೆ. ದೇಶದ ಆರ್ಥಿಕತೆಯಲ್ಲಿ ಈಗ ಸೇವಾವಲಯ ಬಹಳ ಮಹತ್ವ ಪಡೆದುಕೊಳ್ಳುತ್ತಿದೆ. ವ್ಯಾಪಾರ, ಬ್ಯಾಂಕು ವ್ಯವಹಾರ, ಸಾರಿಗೆ, ಸಂಪರ್ಕ, ಹೋಟೆಲು, ಪ್ರವಾಸೋದ್ಯಮ, ಆಸ್ಪತ್ರೆ, ವಿಮೆ, ಶಿಕ್ಷಣ ಸಂಸ್ಥೆ, ಧಾರ್ಮಿಕ ಸಂಸ್ಥೆ ಇತ್ಯಾದಿಗಳನ್ನು ಒಳಗೊಂಡಿರುವ ದೇಶದ ಸೇವಾವಲಯದಲ್ಲಿ ಒಟ್ಟು ಜನಸಂಖ್ಯೆಯ ಶೇ ೨೬ ರಷ್ಟು ಮಂದಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ರಾಷ್ಟ್ರೀಯ ಆದಾಯದಲ್ಲಿ ಇದರ ಪಾಲು ಅರ್ಧಾಂಶಕ್ಕಿಂತಲೂ ಅಧಿಕ.[18] ಸಹಜವಾಗಿ ಬಂಟ್ವಾಳದ ಆರ್ಥಿಕತೆಯಲ್ಲೂ ತೃತೀಯ ರಂಗದ ಪಾಲು ದೊಡ್ಡದಾಗಿಯೇ ಇರಬೇಕು.[19]

- ತಾಲೂಕಿನಲ್ಲಿ ಸಣ್ಣ ಕೈಗಾರಿಕಾ ಘಟಕಗಳು ಚೆನ್ನಾಗಿ ಕಾರ್ಯನಿರ್ವಹಿಸುವುದನ್ನು ಅಂಕಿ-ಅಂಶಗಳು ತಿಳಿಯಪಡಿಸುತ್ತದೆ. ತಾಲೂಕಿನಲ್ಲಿ ೨೦೦೬ ರ ಅಂತ್ಯಕ್ಕೆ ಒಟ್ಟು ೧೫೧೬ ಸಣ್ಣ ಕೈಗಾರಿಕಾ ಘಟಕಗಳಿದ್ದು ಇವು ೭೩೦೭ ಮಂದಿಗೆ ಉದ್ಯೋಗ ಕಲ್ಪಿಸಿವೆ. ಒಟ್ಟು ಕೆಲಸಗಾರರಲ್ಲಿ ಸಣ್ಣ ಕೈಗಾರಿಕಾ ಉದ್ಯೋಗಿಗಳ ಪ್ರಮಾಣ ಶೇ೪.೧ ರಷ್ಟು. ತಾಲೂಕಿನಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಗೆ ಇನ್ನೂ ವಿಪುಲಾವಕಾಶಗಳಿವೆ. ಪ್ರಗತಿ ಬಂಧು ಗುಂಪುಗಳು ಈ ಬಗ್ಗೆ ಗಮನ ಹರಿಸಬಹುದು.

೪.೪ ಬಂಟ್ವಾಳದ ಸ್ವ-ಸಹಾಯ ಚಳುವಳಿ

ಬಂಟ್ವಾಳದ ಜನರಿಗೆ ಸ್ವಸಹಾಯ ಸಂಘದ ಪರಿಕಲ್ಪನೆಯು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘದ ಕಾರ್ಯಕ್ರಮಗಳನ್ನು ಇತರ ತಾಲೂಕುಗಳಲ್ಲಿ ನೋಡಿ ಕೇಳಿ ತಿಳಿದಿತ್ತು. ಆದರೆ ಸ್ವಸಹಾಯದ ಬಗೆಗಿನ ನಿಜವಾದ ಪ್ರಯೋಗಾತ್ಮಕವಾದ ಅರ್ಥ ತಿಳಿದದ್ದು ೧೯೯೯ರಲ್ಲಿ. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರವರ್ತಿತ 'ಸ್ತ್ರೀ-ಶಕ್ತಿ' ಯೋಜನೆಯ ಮೂಲಕ ಬಂಟ್ವಾಳ ಜನತೆಗೆ ಸ್ವ ಸಹಾಯದ ನೈಜ ವಿಷಯ ತಿಳಿಯಲು ಸಾಧ್ಯವಾಯಿತು.

೧೯೯೯ರಲ್ಲಿ ಸ್ತ್ರೀಶಕ್ತಿ ಯೋಜನೆಯ ಸ್ಥಾಪನೆ ಮತ್ತು ೨೦೦೦ ರಲ್ಲಿ ಅದರ ವಿದ್ಯುಕ್ತ ಜಾರಿಯಿಂದ ಮೊಟ್ಟಮೊದಲು ಸ್ವಸಹಾಯ ಸಂಘವು ಪ್ರಾರಂಭವಾಯಿತು ಎನ್ನಬಹುದು.

೪.೪.೧ ಸ್ತ್ರೀ ಶಕ್ತಿ ಯೋಜನೆ: ಮಹಿಳೆಯರನ್ನು ರಾಷ್ಟ್ರೀಯ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ತಾರದೆ ರಾಷ್ಟ್ರದ ಪ್ರಗತಿ ಮತ್ತು ಸಮಾಜದ ಆರೋಗ್ಯಪೂರ್ಣ ಬೆಳವಣಿಗೆ ಅಸಾಧ್ಯವಾದುದರಿಂದ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಮಹಿಳೆಯರಿಗೆ ದೇಶದ ಅಭ್ಯುದಯದ ಪ್ರತಿಯೊಂದು ಚಟುವಟಿಕೆಯಲ್ಲಿ ಪಾಲುದಾರಿಕೆಗೆ ಅವಕಾಶ ಕಲ್ಪಿಸಿಕೊಡಲು ಸ್ತ್ರೀ ಶಕ್ತಿ ಯೋಜನೆಗಳನ್ನು ಹುಟ್ಟು ಹಾಕಲಾಗಿದೆ.

ಗ್ರಾಮೀಣ ಮಹಿಳೆಯರ ಸಬಲೀಕರಣ ಹಾಗೂ ಸ್ವಾವಲಂಬನೆಯನ್ನು ಮುಖ್ಯ ಗುರಿಯನ್ನಾಗಿ ಮಾಡಿಕೊಂಡು ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆ ಕಾರ್ಯ ರೂಪಕ್ಕೆ ೧೯೯೯ರಲ್ಲಿ ಕಾರ್ಯರೂಪಕ್ಕೆ ಬಂತು. ಆಗಸ್ಟ್ ೧, ೨೦೦೦ ರಂದು ವಿದ್ಯುಕ್ತವಾಗಿ ಜಾರಿಗೊಂಡಿತು.ಈ ಯೋಜನೆಯನ್ವಯ ಬಡತನದ ರೇಖೆಗಿಂತ ಕೆಳಗೆ ವಾಸಿಸುತ್ತಿರುವ ಗ್ರಾಮೀಣ ಮಹಿಳೆಯರನ್ನು ಸೇರಿಸಿ ಸ್ವ ಸಹಾಯ ಗುಂಪು ರಚಿಸುವುದರಿಂದ ಅವು ಗುಂಪುಗಳಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. ಮಹಿಳಾ ಸಾಕ್ಷರತೆಗೆ ಪ್ರಾಮುಖ್ಯತೆ ನೀಡಲಾಗುತ್ತದೆ. ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ ಅಥವಾ ವರ್ಗಕ್ಕೆ ಸೇರಿದ ಕುಟುಂಬದವರು ಮದ್ಯಪಾನ ಮಾಡುವ ಅಥವಾ ಮಾದಕ ಪದಾರ್ಥಗಳನ್ನು ಸೇವಿಸುವ ಅಥವಾ ವಿಕಲಾತೀತ ವ್ಯಕ್ತಿ ಇರುವ ಕುಟುಂಬದ ಮಹಿಳೆಯರಿಗೆ ಆದ್ಯತೆ ನೀಡಿ ಗುಂಪನ್ನು

ರಚಿಸಲಾಗುತ್ತದೆ. ಪ್ರತಿಯೊಂದು ಗುಂಪಿನಲ್ಲಿ ೧೦ ರಿಂದ ೨೦ ಸದಸ್ಯರಿರುತ್ತಾರೆ. ಈ ಗುಂಪುಗಳು ಸಂಘಟಿತ ಗ್ರಾಮೀಣ ಮಹಿಳೆಯರಿಂದ ನಿರ್ವಹಿಸುವ ಹಣಕಾಸಿನ ವ್ಯವಹಾರದ ಘಟಕಗಳಾಗಿವೆ.

ಸ್ವ ಸಹಾಯ ಗುಂಪುಗಳನ್ನು ಆ ಗುಂಪಿನ ಸದಸ್ಯರೇ ನಿರ್ವಹಿಸುವುದರಿಂದ ಅವರಲ್ಲಿ ಕಾರ್ಯದಕ್ಷತೆ, ನಾಯಕತ್ವ ಗುಣಗಳು ಹೆಚ್ಚುತ್ತವೆ. ಈ ಗುಂಪುಗಳಲ್ಲಿ ಸದಸ್ಯರೆಲ್ಲ ನಿಯಮಿತವಾಗಿ ಸಭೆಯಲ್ಲಿ ಹಾಜರಾಗಿ ಗುಂಪಿನ ಹಣಕಾಸು ಸ್ಥಿಗತಿಗಳ ಬಗ್ಗೆ ಹಾಗೂ ತತ್ಸಂಬಂಧೀ ಇತರ ವಿಷಯಗಳ ಬಗ್ಗೆ ಚರ್ಚಿಸುವುದರಿಂದ ಅವರಲ್ಲಿ ಹಣಕಾಸು ವಿಷಯದ ವ್ಯವಹಾರ ಜ್ಞಾನ ಹಾಗೂ ಸಂಭಾಷಣಾ ಕೌಶಲ್ಯಗಳು ಬೆಳೆಯುತ್ತವೆ. ಅವರು ತಮ್ಮ ಬೇಕು ಬೇಡಗಳನ್ನು ಧ್ವನಿ ಎತ್ತಿ ಹೇಳಿಕೊಳ್ಳಲು ಸಾಧ್ಯವಾಗುತ್ತದೆ.

ಗುಂಪುಗಳ ರಚನೆಯ ಹಂತದಲ್ಲಿ ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬ್ಯಾಂಕುಗಳೊಂದಿಗೆ ಸಂಬಂಧ ಕಲ್ಪಿಸಲಾಗುತ್ತದೆ. ಗುಂಪುಗಳು ತಮ್ಮ ಉಳಿತಾಯದ ಹಣವನ್ನು ಬ್ಯಾಂಕುಗಳಲ್ಲಿ ಜಮಾ ಮಾಡುತ್ತದೆ. ಗುಂಪುಗಳು ಮಾಡಿದ ಉಳಿತಾಯದ ಆಧಾರದಲ್ಲಿ ಅವುಗಳಿಗೆ ಬ್ಯಾಂಕು ಸಾಲ ದೊರೆಯುತ್ತದೆ.

ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ (೨೦೦೬-ಮಾರ್ಚ್) ದ.ಕ ಜಿಲ್ಲೆಯ ೫ ತಾಲೂಕುಗಳಲ್ಲಿ ಒಟ್ಟು ೩೩೫೨ ಸ್ತ್ರೀ ಶಕ್ತಿ ಗುಂಪುಗಳಿದ್ದು ೪೨೭೬೪ ಸದಸ್ಯರಿದ್ದಾರೆ.[20] ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸ್ತ್ರೀ ಶಕ್ತಿ ಯೋಜನೆಯಲ್ಲಿ ಬಂಟ್ವಾಳದಲ್ಲಿ ೩೧-೩-೨೦೦೬ ರ ವರೆಗಿನ ಒಟ್ಟು ಗುಂಪು ಮತ್ತು ಸದಸ್ಯರ ಪ್ರಮಾಣ ವಿವರ ಕೆಳಗೆ ನೀಡಲಾಗಿದೆ.

ಸ್ತ್ರೀ ಶಕ್ತಿ ಯೋಜನೆಯ ವಿವರ

ಸ್ತ್ರೀ ಶಕ್ತಿ ಯೋಜನೆಯ ಗುಂಪುಗಳು ೧೧೭೧

ಎಲ್ಲಾ ಗುಂಪುಗಳ ಸದಸ್ಯರು (ಮಹಿಳೆಯರು) ೧೪೧೮೮

ಪರಿಶಿಷ್ಟ ಜಾತಿ ಸದಸ್ಯರು ೧೧೪೭

ಪರಿಶಿಷ್ಟ ಪಂಗ್ಡಡ ಸದಸ್ಯರು ೧೪೭೭

ಆಗಿರುವ ಉಳಿತಾಯ ರೂ. ೩.೪ ಲಕ್ಷ

ಪಡೆದಿರುವ ಸಾಲ ರೂ. ೫.೪ ಲಕ್ಷ

ಬಂಟ್ವಾಳದ ಗ್ರಾಮೀಣ ಮಹಿಳೆಯರು ಮನೆಗೆಲಸದೊಂದಿಗೆ ಕೃಷಿ ಚಟುವಟಿಕೆ, ಹೈನುಗಾರಿಕೆ, ಕೋಳಿಸಾಕಣೆ, ಊದುಬತ್ತಿ ತಯಾರಿ, ಹಪ್ಪಳ ಸಂಡಿಗೆ ತಯಾರಿ, ಉಪ್ಪಿನಕಾಯಿ ತಯಾರಿ, ಮಲ್ಲಿಗೆ ಕೃಷಿ, ಅಣಬೆ ಕೃಷಿ, ಬೇಕರಿ ತಿಂಡಿ ತಯಾರಿ ಇತ್ಯಾದಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಆರ್ಥಿಕಾಭಿವೃದ್ಧಿಯನ್ನು ಮಾಡಿಕೊಂಡಿರುತ್ತಾರೆ. ಈ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರಿಗೆ ವಿವಿಧ ಕ್ಷೇತ್ರಗಳಲ್ಲಿ ತರಬೇತಿಯನ್ನು ನೀಡಲಾಗಿದೆ. ಉದಾಹರಣೆಗೆ ಮಲ್ಲಿಗೆ ಕೃಷಿಯ ಕುರಿತಂತೆ, ಫಿನಾಯಿಲ್, ಕ್ಯಾಂಡಲ್ ಮತ್ತು ಉಪ್ಪಿನಕಾಯಿ ಕುರಿತಂತೆ ತರಬೇತಿ ನೀಡಿ ಅವರನ್ನು ಆರ್ಥಿಕ ಸ್ವಾಲಂಬಿಗಳಾಗಿ ಮಾಡಲು ಉತ್ತೇಜಿಸಲಾಗುತ್ತದೆ.

ಬಂಟ್ವಾಳ ತಾಲೂಕಿನಲ್ಲಿ ವಿಜಯಾ ಬ್ಯಾಂಕು, ಸಿಂಡಿಕೇಟ್ ಬ್ಯಾಂಕು, ಕೆನರಾ ಬ್ಯಾಂಕು ಮತ್ತು ಕಾರ್ಪೋರೇಶನ್ ಬ್ಯಾಂಕು ಮಾತ್ರವಲ್ಲದೆ ಸಹಕಾರಿ ಬ್ಯಾಂಕುಗಳು ಸಾಲನೀಡಿ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸ್ತ್ರೀ ಶಕ್ತಿ ಗುಂಪುಗಳಿಗೆ ಉತ್ತೇಜನ ನೀಡಿದೆ.

೪.೪.೨ ನಾಗರಿಕ ಸೇವಾ ಟ್ರಸ್ಟ್ (ರಿ) ಗುರುವಾಯನಕೆರೆ ಪ್ರವರ್ತಿತ ಸ್ವಸಹಾಯ ಸಂಘ: ಈ ಸ್ವಸಹಾಯ ಸಂಘವು ೧೯೯೯ ರ ಅಕ್ಟೋಬರ್ ನಲ್ಲಿ ಪ್ರಾರಂಭವಾಯಿತು. ಬೆಳ್ತಂಗಡಿ ತಾಲೂಕಿನಲ್ಲಿ ಮೊದಲು ಪ್ರಾರಂಭವಾಗಿ ಅನಂತರ ದ.ಕ ಮತ್ತು ಉಡುಪಿ ಜಿಲ್ಲೆಗಳ ಎಲ್ಲಾ ತಾಲೂಕುಗಳಲ್ಲಿ ತನ್ನ ಕಾರ್ಯವನ್ನು ವಿಸ್ತರಿಸಿಕೊಂಡಿತು. ಪ್ರಸ್ತುತ ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿ ಸ್ವಸಹಾಯ ಸಂಘಗಳು ಇವೆ.

ಬಂಟ್ವಾಳ ತಾಲೂಕಿನಲ್ಲಿ ೨೦೦೧ ರಲ್ಲಿ ಈ ಸ್ವಸಹಾಯ ಸಂಘವು ಪ್ರಾರಂಭವಾಗಿದೆ. ನಾಗರಿಕ ಸೇವಾ ಟ್ರಸ್ಟ್ ಪ್ರವರ್ತಿತ ಸ್ವಸಹಾಯ ಸಂಘವು ೧೫ ರಿಂದ ೨೦ ಜನರಿರುವ ಗ್ರಾಮೀಣ ಬಡವರನ್ನು ಮಾತ್ರ ಹೊಂದಿರುವ ತಮ್ಮ ಪರಿಸರದ ಜನರು ಒಗ್ಗೂಡಿಸಿ ಮಾಡಿರುವ ಸಂಘಟನೆಯಾಗಿದೆ.

ಸಾಮಾನ್ಯ ನಿಬಂಧನೆಗಳು

- ೧೫ ರಿಂದ ೨೦ ಸದಸ್ಯರುಳ್ಳ ಚಿಕ್ಕ ಗುಂಪಾಗಿರಬೇಕು
- ಬಡ ಕುಟುಂಬದ ಶೋಷಿತ ಮಹಿಳೆಯರು ಸಂಘಟಿತರಾಗಿ ತಮ್ಮ ಅಭಿವೃದ್ಧಿ ತಾವೇ ಸಾಧಿಸಬೇಕು
- ಸಾಮಾರ್ಥ್ಯ ಹೆಚ್ಚಿಸಿಕೊಳ್ಳುವುದರ ಮೂಲಕ ನಾಯಕತ್ವ ಹಂಚಿಕೆಯಾಗಬೇಕು
- ನಿಗದಿಯ ಸಭೆಗಳು ಹಾಗೂ ಉತ್ತಮ ಹಾಜರಾತಿ ಒಳ್ಳೆಯ ಸಂಘಟನೆಯ ಬುನಾದಿ
- ನಿಯಮಗಳನ್ನು ಅನುಸರಿಸಿ ಸಂಘದಲ್ಲಿ ಸಕ್ರಿಯವಾಗಿ ಎಲ್ಲಾ ಸದಸ್ಯರು ಭಾಗವಹಿಸುತ್ತಿರಬೇಕು
- ಸಮಾನ ಆಸಕ್ತಿ ಮತ್ತು ಸ್ವ ಇಚ್ಛೆಯಿಂದ ಭಾಗವಹಿಸಬೇಕು
- ಕನಿಷ್ಠ ಉಳಿತಾಯ ರೂ ೫, ಗರಿಷ್ಠ ೨೫ ಮಾತ್ರ
- ಮಹಿಳೆಯರ ಆರ್ಥಿಕ ಭದ್ರತೆಗೆ ಉಳಿತಾಯವೇ ಆಧಾರವಾಗಿರಬೇಕು
- ಸುಲಭದಲ್ಲಿ ಸಾಲ ದೊರಕುವುದರಿಂದ ಕುಟುಂಬದಲ್ಲಿ ಆರ್ಥಿಕ ಸುಧಾರಣೆ
- ನಿರಂತರ ಉಳಿತಾಯ ಮಾಡುವುದರಿಂದ ಭವಿಷ್ಯ ಉತ್ತಮವಾಗುತ್ತದೆ
- ಮಹಿಳೆಯರು ತಮ್ಮದೇ ಆದ ಆಸ್ತಿ ಹೊಂದಿದರೆ ಕುಟುಂಬದಲ್ಲಿ ಸ್ಥಾನ ಮಾನ ಹೆಚ್ಚಾಗುತ್ತದೆ.

ಕೋಷ್ಟಕ ೪.೪ : ನಾಗರಿಕ ಸೇವಾ ಟ್ರಸ್ಟ್ ಪ್ರವರ್ತಿತ ಸ್ವ ಸಹಾಯ ಸಂಘಗಳು

ಕ್ರಮ ಸಂಖ್ಯೆ	ತಾಲೂಕು	ಪುರುಷ	ಮಹಿಳೆ	ಮಿಶ್ರ	ಒಟ್ಟು
1	ಬೆಳ್ತಂಗಡಿ	294	424	282	1001
2	ಸುಳ್ಯ	61	136	27	224
3	ಪುತ್ತೂರು	64	126	72	262
4	**ಬಂಟ್ವಾಳ**	**40**	**125**	**83**	**248**
5	ಮಂಗಳೂರು	20	70	49	139
6	ಕಾರ್ಕಳ	50	136	58	244
7	ಉಡುಪಿ	21	119	21	161
8	ಕುಂದಾಪುರ	15	72	23	116
	ಒಟ್ಟು	**565**	**1214**	**616**	**2495**

ಆಧಾರ: ನಾಗರಿಕ ಸೇವಾ ಟ್ರಸ್ಟ್ ಪ್ರಕಟಣೆಗಳು. ೨೦೦೭

ಒಟ್ಟು ಸದಸ್ಯರು: ಪುರುಷರು ೭೮೯೬, ಮಹಿಳೆಯರು ೧೫೬೨೩, ಒಟ್ಟು ೨೩೬೦೯

ಬಂಟ್ವಾಳದಲ್ಲಿ ಒಟ್ಟು ಸದಸ್ಯರು: ೪೨೮ ಪುರುಷರು, ೧೪೭೦ ಮಹಿಳೆಯರು, ೯೧೦ ಮಿಶ್ರ ಒಟ್ಟು ೨೮೦೮ ಸದಸ್ಯರಿದ್ದಾರೆ.

೪.೪.೩ ನವೋದಯ ಸ್ವಸಹಾಯ ಸಂಘಗಳು: ನವೋದಯ ಸ್ವಸಹಾಯ ಸಂಘಗಳು ದ.ಕ ಜಿಲ್ಲೆಯಲ್ಲಿ ೧೯೯೯ ರಲ್ಲಿ ಪ್ರಾರಂಭವಾದವು. ಇವುಗಳನ್ನು ದ.ಕ. ಜಿಲ್ಲಾ ಕೇಂದ್ರ ಬ್ಯಾಂಕು ಪ್ರಾಯೋಜಿಸುತ್ತದೆ. ೨೦೦೪ರಲ್ಲಿ ನವೋದಯ ಟ್ರಸ್ಟ್ ರಚನೆಯೊಂದಿಗೆ ಬಂಟ್ವಾಳದಲ್ಲಿ ನವೋದಯ ಸ್ವ ಸಹಾಯ ಸಂಘಗಳು ಕಾರ್ಯಾರಂಭಗೊಂಡವು. ಇವು ೧೦ ರಿಂದ ೨೦ ಜನರಿರುವ ಸದಸ್ಯರನ್ನು ಒಳಗೊಂಡ ಗುಂಪು ಆಗಿರುತ್ತದೆ. ದ.ಕ ಜಿಲ್ಲೆಯಲ್ಲಿ ಒಟ್ಟು ೨೩,೦೦೦ ದಷ್ಟು ನವೋದಯ ಸ್ವಸಹಾಯ ಸಂಘಗಳಿವೆ. ಬಂಟ್ವಾಳದಲ್ಲಿ ೩೪೪೩ ನವೋದಯ ಸ್ವಸಹಾಯ ಸಂಘಗಳು ಕಾರ್ಯಚರಿಸುತ್ತವೆ. ಇವು ಒಟ್ಟು ೩೦,೪೨೦ ಸದಸ್ಯ ಬಲವನ್ನು ಹೊಂದಿವೆ.

೪.೪.೪. ಬಂಟ್ವಾಳ ತಾಲೂಕಿನ ಪ್ರಗತಿ ಬಂಧು ಸ್ವ ಸಹಾಯ ಸಂಘಗಳು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ಯು ಪ್ರಾಯೋಜಿಸುತ್ತಿರುವ ಸ್ವಸಹಾಯ ಸಂಘಗಳಲ್ಲಿ ಪ್ರಗತಿ ಬಂಧು ಜ್ಞಾನವಿಕಾಸ ಸ್ವಸಹಾಯ ಸಂಘಗಳು ಬಂಟ್ವಾಳ ತಾಲೂಕಿನಲ್ಲಿಗ್ರಾಮಾಭಿವೃದ್ಧಿಯ ಆಶಾಕಿರಣವನ್ನು ಮೂಡಿಸುತ್ತಿವೆ.

ಬಂಟ್ವಾಳ ತಾಲೂಕಿನಲ್ಲಿ ಒಟ್ಟು ೧೩೩೭ ಪ್ರಗತಿ ಬಂಧು ತಂಡಗಳು ೨೩೦೯ ಸ್ವಸಹಾಯ ತಂಡಗಳು ಮತ್ತು ೩೩ ಜ್ಞಾನವಿಕಾಸ ಕೇಂದ್ರಗಳು ಇವೆ. ಪ್ರಗತಿ ಬಂಧು ಸ್ವಸಹಾಯ ಸಂಘಗಳಲ್ಲಿ ೧೦೭೩ ಪುರುಷರ ತಂಡಗಳು, ೧೩೭ ಮಹಿಳಾ ತಂಡಗಳು ಮತ್ತು ೧೨೭ ಪುರುಷ ಮತ್ತು ಸ್ತ್ರೀಯರ ಮಿಶ್ರ ತಂಡಗಳು ಕಾರ್ಯಚರಿಸುತ್ತಾ ಗ್ರಾಮಾಭಿವೃದ್ಧಿಯ ಕನಸನ್ನು ನನಸು ಮಾಡುವತ್ತ ಸಾಗುತ್ತಿವೆ. ಈ ತನಕ ಪ್ರಗತಿ ಬಂಧು ತಂಡಗಳು ಉಳಿತಾಯ ಮಾಡಿರುವ ಮೊತ್ತ ರೂ ೭೨,೧೧,೦೦೦. ಮತ್ತು ಪ್ರಗತಿನಿಧಿಯಿಂದ ವಿತರಿಸಿರುವ ಸಾಲದ ಮೊತ್ತ ೯೨೧,೧೭,೦೦೦. ಮತ್ತು ಒಟ್ಟು ೧೧೫೬ ತಂಡಗಳು ಸಾಲ ಪಡೆದಿವೆ. ಪಡೆದ ಸಾಲದ ಸಂಖ್ಯೆ ೧೭೭೨. ಬಂಟ್ವಾಳ ತಾಲೂಕಿನಲ್ಲಿ ಹೆಚ್ಚು ಪ್ರಗತಿ ಬಂಧು ತಂಡವನ್ನು

ಹೊಂದಿರುವ ಗ್ರಾಮ ಪುಣಚ, ಕೇಪು, ಪೆರುವಾಯಿ, ಕರೋಪಾಡಿ ಹಾಗೂ ಕಡಿಮೆ ತಂಡವನ್ನು ಹೊಂದಿರುವ ಗ್ರಾಮಗಳು ಪಜೀರು,ಅಮ್ಟೂರು, ಮೇರೆಮಜಲು, ತುಂಬೆ ಮತ್ತು ಸಜಿಪನಡು.

ಪ್ರತಿಯೊಂದು ತಂಡವು ವಾರಕ್ಕೆ ಕನಿಷ್ಠ ೧೦ ರೂಪಾಯಿಯನ್ನು ಉಳಿತಾಯ ಮಾಡುತ್ತಿವೆ. ಅಲ್ಲದೆ ಎಲ್ಲಾ ಪ್ರಗತಿ ಬಂಧು ತಂಡಗಳು ಸಂಪೂರ್ಣ ಸುರಕ್ಷಾ ವಿಮೆಯನ್ನು ಮಾಡಿರುತ್ತವೆ. ಕುಟುಂಬ ವಿಮೆಯನ್ನು ಮಾಡಿಸಿರುವ ಒಟ್ಟು ಸದಸ್ಯರು ೪೩,೫೦೦. ಇವರು ೧೩,೯೭೮ ಕುಟುಂಬಗಳಿಗೆ ಸೇರಿದವರು.

ಕರ್ನಾಟಕದಲ್ಲಿ ದ.ಕ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿಯ ಸ್ವ ಸಹಾಯ ಸಂಘಗಳಿವೆ. ಮೂರು ಜಿಲ್ಲೆಗಳಲ್ಲಿ ಒಟ್ಟು ೧೨,೯೨೩ ಪ್ರಗತಿ ಬಂಧು ತಂಡಗಳು ೨೩,೬೯೧ ಸ್ವಸಹಾಯ ಸಂಘಗಳು ಹಾಗೂ ಹಾಗೂ ೭೬೬ ಜ್ಞಾನವಿಕಾಸ ಕೇಂದ್ರಗಳು ೨೦೦೬ ರ ಅಂತ್ಯಕ್ಕೆ ಕಾರ್ಯಾಚರಿಸುತ್ತಿದ್ದವು.

ಬಂಟ್ವಾಳ ತಾಲೂಕಿನಲ್ಲಿ ಇರುವ ಒಟ್ಟು ಪ್ರಗತಿ ಬಂಧು ತಂಡಗಳು ೧೩೩೭. ಈ ತನಕ ३೫३೭೨ ದಿನಗಳ ಶ್ರಮ ವಿನಿಯೋಗವಾಗಿದೆ. ಕೆಲಸದ ಮೌಲ್ಯ ಆಳಿಗೆ ರೂ. ೭೫.೦೦ ರಂತೆ ಒಟ್ಟು ೪೪೫.೪೨ ಲಕ್ಷ ದಷ್ಟು ಮೌಲ್ಯದ ಕೆಲಸ ಕಾರ್ಯಗಳು ನಡೆದಿವೆ. ಈತನಕ ಮರುಪಾವತಿಯಾದ ಪ್ರಗತಿನಿಧಿ ೧೫೭.೧೦ ಲಕ್ಷ ರೂಪಾಯಿಗಳು. ಈ ತನಕ ೧.೫೭ ಕೋಟಿ ರೂಪಾಯಿ ಸಾಲ ಮರುಪಾವತಿಯಾಗಿದೆ.[21]

ಮುಂದಿನ ಅಧ್ಯಾಯವು ಬಂಟ್ವಾಳ ತಾಲೂಕಿನ ಎರಡು ಗ್ರಾಮಗಳಲ್ಲಿ ಪ್ರಗತಿ ಬಂಧು ಯೋಜನೆಯ ಮೂಡಿಸಿದ ಹೆಜ್ಜೆಗುರುತನ್ನು ದಾಖಲಿಸುತ್ತದೆ.

ಉಲ್ಲೇಖಗಳು

೧. ಡಾ। ಗಣಪತಿ ಭಟ್‌ಪುಂಡಿಕ್ಯಾ; ಬಂಟ್ವಾಳ ಇತಿಹಾಸ ದರ್ಶನ, ಐತಿಹಾಸಿಕ ಹಿನ್ನಲೆ, ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ೨೦೦೩ ಪು. ೫

೨. ಅದೇ, ಪು. ೦೫

೩. ಅದೇ, ಪು. ೦೬

೪. ಅದೇ, ಪು. ೦೯

೫. ಗಣಪತಿ ರಾವ್ ಐಗಳ್; ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಪು. ೧೯೩

೬. ಅದೇ, ಪು. ೨೦೩

೭. ಡಾ।ಪಾಲ್ತಾಡಿ ರಾಮಕೃಷ್ಣ ಆಚಾರ್; ಬಂಟ್ವಾಳಕ್ಕುಂಟು ಜಾನಪದ ನಂಟು, ಬಂಟ್ವಾಳ ಇತಿಹಾಸ ದರ್ಶನ, ರಾಣಿ ಅಬ್ಬಕ್ಕ ತುಳು ಸಂಶೋಧನ ಕೇಂದ್ರ, ೨೦೦೩ ಪು. ೨೮

೮. ಅದೇ, ಪು. ೩೦

೯. ಅದೇ, ಪು. ೩೩

೧೦. ಉದಯವಾಣಿ ದೀಪಾವಳಿ ವಿಶೇಷ ಪುರವಣಿ, ೨೦೦೬ – ಪು. ೦೩

೧೧. ಅದೇ, ಪು. ೦೫

೧೨. ತುಕಾರಾಂಪೂಜಾರಿ; ಬಂಟ್ವಾಳ ಇತಿಹಾಸ ದರ್ಶನ, ಭೌಗೋಳಿಕ ಹಿನ್ನಲೆ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ೨೦೦೩ ಪು. ೩೪

೧೩. ಜಯಂತಿ ಕೆ. ವೈ; ಕರ್ನಾಟಕ ಮುನ್ನೋಟ, ೨೦೨೫

೧೪. ಡಾ। ಎಸ್. ಆರ್. ಕೃಷ್ಣಯ್ಯ ಗೌಡ; ಪರಿಸರ ಅರ್ಥಶಾಸ್ತ್ರ – ಸ್ಪಂದನ ಪ್ರಕಾಶ

೧೫. ಡಾ।ಶಿಶಿಲ; ಆರ್ಥಿಕ ಭಾರತ, ೨೦೦೬, ಪುಟ. ೩೫

೧೬. ಅದೇ, ಪುಟ. ೩೮

೧೭. ಕ್ಷೇತ್ರಾಧ್ಯಯನದ ಕಾಲದಲ್ಲಿ ಕಂಡುಬಂದ ವಿಷಯ

೧೮. ಡಾ। ಶಿಶಿಲ; ೨೦೦೬, ಪು. ೪೧

೧೯. ಪ್ರತ್ಯೇಕ ದತ್ತಾಂಶ ಲಭ್ಯವಿಲ್ಲದ ಕಾರಣ ಊಹೆ ಮಾಡಲಾಗಿದೆ.

೨೦. ಆಶಾಲತಾ ಸುವರ್ಣ ತತ್ವಾನ್ವೇಷಣೆ, ಮಹಿಳಾ ಸಬಲೀಕರಣ ಮತ್ತು ಸ್ವಸಹಾಯ, ಪು. ೨೩೫

೨೧. SKDRDP Report 2007

ಅಧ್ಯಾಯ – ೫

೫. ಪ್ರಗತಿ ಬಂಧು ಗುಂಪುಗಳ ಕಾರ್ಯವಿಶ್ಲೇಷಣೆ

೫.೧ ಸಂದರ್ಶಿಸಿದ ಪ್ರಗತಿ ಬಂಧು ತಂಡಗಳು

೫.೨ ಸದಸ್ಯರ ವಯೋಮಾನ, ಶಿಕ್ಷಣ ಮತ್ತು ವೃತ್ತಿ ವಿತರಣೆ

೫.೩ ಸದಸ್ಯರ ಮೂಲ ಸವಲತ್ತುಗಳು

೫.೪ ಸದಸ್ಯರ ಭೂ ಸಂಪನ್ಮೂಲದ ವಿವರ

೫.೫ ಉಳಿತಾಯ, ಸಾಲ ಮತ್ತು ಮರುಪಾವತಿ

೫.೬ ಪ್ರಗತಿ ಬಂಧು ತಂಡಗಳ ಇತರ ಕಾರ್ಯಗಳು

೫.೭ ಸಂಶೋಧನೆಯ ಕಾಣ್ಕೆಗಳು

೫. ಪ್ರಗತಿ ಗುಂಪುಗಳ ಕಾರ್ಯ ವಿಶ್ಲೇಷಣೆ

ಪ್ರಕೃತ ಅಧ್ಯಯನವು ಬಂಟ್ವಾಳ ತಾಲೂಕಿನ ಎರಡು ಗ್ರಾಮಗಳಾದ ಕಡೇಶ್ವಾಲ್ಯ ಮತ್ತು ಕೆದಿಲಗಳಲ್ಲಿನ ಪ್ರಗತಿ ಬಂಧು ತಂಡಗಳ ಕಾರ್ಯ ವಿಶ್ಲೇಷಣೆಯನ್ನು ಆಧಾರಿಸಿದೆ. ಇವೆರಡು ಗ್ರಾಮಗಳ ನಡುವೆ ರಾಷ್ಟ್ರೀಯ ಹೆದ್ದಾರಿ ೪೮ ಹಾದು ಹೋಗುತ್ತದೆ. ಆದರೆ ಈ ಗ್ರಾಮಗಳ ಜನರು ಎಕ್ಸ್‌ಪ್ರೆಕ್ಸ್ ಬಸ್ಸ್ ಹತ್ತಬೇಕಾದರೆ ಸರಾಸರಿ ಆರು ಕಿ.ಮೀ ದೂರದ ಮಾಣಿಗೆ ಹೋಗಬೇಕಾಗುತ್ತದೆ. ಕಡೇಶ್ವಾಲ್ಯದಿಂದ ಕೆದಿಲಕ್ಕಾಗಿ ಪುತ್ತೂರಿಗೆ ಸುಮಾರು ೧೦ ಕಿ.ಮೀ ದೂರವಿದೆ. ತಾಲೂಕಿನ ಕೇಂದ್ರ ಬಂಟ್ವಾಳಕ್ಕೆ ಕೆದಿಲದಿಂದ ಸುಮಾರು ೨೦ ಕಿ. ಮೀ ಮತ್ತು ಕಡೇಶ್ವಾಲ್ಯದಿಂದ ಸುಮಾರು ೨೩ ಕಿ. ಮೀ ದೂರ ಇದೆ. ಹಾಗಾಗಿ ಇವೆರಡು ಗ್ರಾಮಗಳು ಇನ್ನೂ ನಗರೀಕರಣದ ಪ್ರಭಾವಕ್ಕೆ ಒಳಗಾಗಿಲ್ಲ. ಆದರೆ ಗ್ರಾಮದ ಎಲ್ಲಾ ಕಡೆಗಳಲ್ಲಿ ದೂರವಾಣಿ ಮತ್ತು ವಿದ್ಯುತ್ ಸೌಲಭ್ಯವಿದೆ. ಕೆದಿಲದಲ್ಲಿ ಮೂರು ಪ್ರಾಥಮಿಕ ಶಾಲೆಗಳಿವೆ. ಆದರೆ ಪ್ರೌಢ ಶಾಲೆಗಳಿಲ್ಲ. ಕಡೇಶ್ವಾಲ್ಯದಲ್ಲಿ ಎರಡು ಪ್ರಾಥಮಿಕ ಮತ್ತು ಪ್ರೌಢ ಶಾಲೆ ಇದೆ. ಎರಡು ಗ್ರಾಮಗಳೂ ರೈಲು ಸೇವೆಯಿಂದ ವಂಚಿತವಾಗಿವೆ.

೫.೧ ಸಂದರ್ಶಿಸಿದ ಪ್ರಗತಿ ಬಂಧು ತಂಡಗಳು

ಪ್ರಕೃತ ಅಧ್ಯಯನಕ್ಕಾಗಿ ಕೆದಿಲ ಗ್ರಾಮದಿಂದ ೧೦ ಮತ್ತು ಕಡೇಶ್ವಾಲ್ಯ ಗ್ರಾಮದಿಂದ ೧೦ ಪ್ರಗತಿ ಬಂಧು ಸ್ವಸಹಾಯ ತಂಡಗಳನ್ನು ಆರಿಸಿಕೊಳ್ಳಲಾಯಿತು. ಇವೆರಡು ಗ್ರಾಮಗಳಲ್ಲಿ ಒಟ್ಟು ೭೪ ಪ್ರಗತಿ ಬಂಧು ಸ್ವಸಹಾಯ ಸಂಘಗಳಿವೆ. ಇವುಗಳಲ್ಲಿ ಪುರುಷರ ಮತ್ತು ಮಿಶ್ರ ತಂಡಗಳು ೬೪. ಇವುಗಳ ಪೈಕಿ ೧೦ ಪುರುಷರ ತಂಡಗಳನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ. ಎರಡು ಗ್ರಾಮಗಳಲ್ಲಿರುವ ಒಟ್ಟು ಮಹಿಳಾ ಪ್ರಗತಿ ಬಂಧು ತಂಡಗಳ ಸಂಖ್ಯೆ ೧೦. ಇವೆಲ್ಲವನ್ನೂ ಅಧ್ಯಯನ ಮಾಡಲಾಗಿದೆ.

ಕಡೇಶ್ವಾಲ್ಯದಲ್ಲಿ ಅಧ್ಯಯನಕ್ಕೆ ಆರಿಸಲಾದ ತಂಡಗಳ ವಿವರಗಳನ್ನು ಕೋಷ್ಟಕ ೫.೧ ರಲ್ಲಿ ನೀಡಲಾಗಿದೆ.

ಕೋಷ್ಟಕ ೫.೧ ಕಡೇಶ್ವಾಲ್ಯ ಗ್ರಾಮದಲ್ಲಿ ಸಂದರ್ಶಿಸಿದ ಪ್ರಗತಿ ಬಂಧು ತಂಡಗಳು

ಕ್ರಮ ಸಂಖ್ಯೆ	ಪ್ರಗತಿ ಬಂಧು ತಂಡ	ಸ್ಥಳದ ಹೆಸರು
೦೧	ಉದಯ ಭಾಗ್ಯ	ಪೆರ್ಲಾವು
೦೨	ದೈವಾನು ಗ್ರಹ	ಆರಿಕಲ್ಲು
೦೩	ಧರ್ಮಶ್ರೀ	ಕಡೇಶ್ವಾಲ್ಯ
೯೪	ಪಾಂಚಾಲಿ	ನೆಕ್ಕಿಲಾಡಿ
೦೫	ಬಂಗೇರ ಬೆಟ್ಟು	ಬಂಗೇರ ಬೆಟ್ಟು
೦೬	ಮಂಜುಶ್ರೀ	ಕಡೇಶ್ವಾಲ್ಯ
೦೭	ಚಾಮುಂಡೇಶ್ವರಿ	ಗುಡ್ಡಕೋಡಿ
೦೮	ಧನಲಕ್ಷ್ಮಿ	ಅಮೈ
೦೯	ಧರ್ಮ ನಿಧಿ	ಪೆರ್ಲಾವು
೧೦	ಸಮೃದ್ಧಿ	ಆರಿಕಲ್ಲು

ಕಡೇಶ್ವಾಲ್ಯ ಗ್ರಾಮಕ್ಕೆ ಆ ಹೆಸರು ಬಂದ ಬಗ್ಗೆ ಹಿರಿಯರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.[1] ಈ ಗ್ರಾಮದಲ್ಲಿ ಲಕ್ಷ್ಮೀ ನರಸಿಂಹ ದೇವಾಲಯವಿದೆ. ಅದರ ಹತ್ತಿರದಲ್ಲಿ ಪುಟ್ಟದೊಂದು ಗುಡಿ ಇದ್ದು ಅದರಲ್ಲಿ ಶಿವಲಿಂಗ ಒಂದಿದೆ. ಪುತ್ತೂರು ಜಾತ್ರೆಯ ಬಳಿಕ ಈ ಶಿವಾಲಯದ ಜಾತ್ರೆ ನಡೆಯುವುದರಿಂದ ಇಲ್ಲಿಗೆ ಕಡೇಶಿವಾಲಯ ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ.[2] ಆದರೆ ಜನಸಾಮಾನ್ಯರು ಈ ಗ್ರಾಮವನ್ನು ಕಡೇಶ್ವಾಲ್ಯ ಎಂದೇ ಕರೆಯುತ್ತಿದ್ದಾರೆ. ಕಡೇಶ್ವಾಲ್ಯದ ಬಲಬದಿಯಲ್ಲಿ ನೇತ್ರಾವತಿ ನದಿ ಹರಿಯುತ್ತದೆ. ಇದು ದ.ಕ ಜಿಲ್ಲೆಯ ಜೀವನದಿ. ಕಡೇಶ್ವಾಲ್ಯಕ್ಕೆ ಸೇರಿದ ನದಿಯ ಭಾಗದಲ್ಲಿ ಒಂದು ದೊಡ್ಡ ಸಾಲಿಗ್ರಾಮವಿದೆ. ಅದಕ್ಕೆ ಜಾತ್ರೆಯ ಸಂದರ್ಭದಲ್ಲಿ ವಿಶೇಷ ಪೂಜೆ ಸಲ್ಲುತ್ತದೆ. ಈ ಗ್ರಾಮದ ದೇವರು ಲಕ್ಷ್ಮೀ ನರಸಿಂಹ ಮತ್ತು ಪೂಜೆಗೊಳ್ಳುವುದು ಸಾಲಿಗ್ರಾಮ. ಎರಡು ಕೂಡಾ ವೈಷ್ಣವ ಪಂಥಕ್ಕೆ ಸೇರಿದವುಗಳು. ಆದುದರಿಂದ ವೈದಿಕರು ಹೇಳುವ ಕಡೇ ಶಿವಾಲಯ ಎನ್ನುವ ಹೆಸರು ಈ ಊರಿಗೆ ಯಾವ ಕಾರಣಕ್ಕೂ ಒಪ್ಪುವುದಿಲ್ಲ. ಅದು ಕಡೇಶಾಲ ಎಂದಿದ್ದು ಕಡೇಶ್ವಾಲ್ಯ ಎಂದಾಗಿರಬೇಕು.ಕಡೇಶಾಲ ಎಂದರೆ ಕೊನೆಗಿರುವ ಸಾಲಿಗ್ರಾಮ ಎಂದರ್ಥ. ಇನ್ನೂ ಒಂದು ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ವೈಷ್ಣವರು ಪ್ರಬಲರಾದಾಗ ಶಿವ ದೇವಾಲಯಗಳನ್ನು ವೈಷ್ಣವ ದೇವಾಲಯಗಳಾಗಿ ಪರಿವರ್ತಿಸುವ ಸಾಧ್ಯತೆಗಳಿವೆ. ಲಕ್ಷ್ಮೀನರಸಿಂಹ ದೇವಾಲಯ ಮೂಲತ: ಏನಾಗಿತ್ತು ಎಂಬ ಬಗ್ಗೆ ಖಚಿತ ಮಾಹಿತಿಗಳಿಲ್ಲ.

ಕೆದಿಲ ಗ್ರಾಮದಲ್ಲಿ ಅಧ್ಯಯನಕ್ಕೆ ಆರಿಸಲಾದ ತಂಡಗಳ ವಿವರವನ್ನು ಕೋಷ್ಟಕ ೫.೨ ನೀಡುತ್ತದೆ.

ಕೋಷ್ಟಕ ೫.೨ : ಕೆದಿಲ ಗ್ರಾಮದಲ್ಲಿ ಸಂದರ್ಶಿಸಿದ ಪ್ರಗತಿ ಬಂಧು ತಂಡಗಳು

ಕ್ರಮ ಸಂಖ್ಯೆ	ಪ್ರಗತಿ ಬಂಧು ತಂಡ	ಸ್ಥಳದ ಹೆಸರು
೦೧	ಮೂಕಾಂಬಿಕಾ	ದರ್ಬೆ
೦೨	ಪ್ರಗತಿ	ಕರಿಮಜಲು
೦೩	ಧರ್ಮಶ್ರೀ	ಸತ್ತಿಕಲ್ಲು
೦೪	ದುರ್ಗಾಶ್ರೀ	ಕುದುಮಾನ
೦೫	ಧೂಮವತೀ ಮಲರಾಯ	ಕೆದಿಲ
೦೬	ಶ್ರೀ ಧೂಮಾವತೀ ಮಲರಾಯ	ಕ್ಷೇತ್ರಪಳಿಕೆ
೦೭	ಶ್ರೀ ಗಣೇಶ್	ಬಡೆಕ್ಕಿಲ
೦೮	ಸ್ವಸ್ತಿಕ್	ಕೈಲಾರ್
೦೯	ಚೇತನಾ	ಆನಡ್ಕ
೧೦	ಪಾಟ್ರಕೋಡಿ	ಪಾಟ್ರಕೋಡಿ

ಕೆದಿಲ ಗ್ರಾಮವು ನದಿಯ ಸೌಲಭ್ಯದಿಂದ ವಂಚಿತವಾಗಿದೆ. ಆದರೆ ಗ್ರಾಮ ಅಂತರ್ಜಲ ಭರಿತವಾಗಿದೆ. ಕೆದಿಲ (ಕೆದು+ಇಲ್ಲ್) ಎನ್ನುವ ಶಬ್ದವು ಕೆರೆ ಎನ್ನುವ ಅರ್ಥವನ್ನು ನೀಡುತ್ತದೆ. ಈ ಗ್ರಾಮದಲ್ಲಿ ಅನೇಕ ಕೆರೆಗಳಿರುವುದರಿಂದ ಇದಕ್ಕೆ ಕೆದಿಲ ಎಂಬ ಹೆಸರು ಬಂತೆಂದು ಅನೇಕ ಹಿರಿಯರು ಹೇಳುತ್ತಾರೆ. [3]

ಸಂದರ್ಶನಕ್ಕೆ ಆಯ್ಕೆ ಮಾಡಿದ ೧೦೦ ಮಂದಿ ಸದಸ್ಯರಲ್ಲಿ ಒಂದು ಎಕರೆಗಿಂತ ಹೆಚ್ಚು ಭೂಮಿ ಇರುವವರ ಪ್ರಮಾಣ ಶೇಕಡಾ ೪ ರಷ್ಟು ಮಾತ್ರ. ಉಳಿದ ಶೇಕಡಾ ೯೬ ಮಂದಿ ತಮ್ಮ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗಾಗಿ ಪ್ರಗತಿ ಬಂಧು ತಂಡದ ಸದಸ್ಯರಾಗಿರುತ್ತಾರೆ. ಅವರ ಪಾಲಿಗೆ ಅದು ಅನಿವಾರ್ಯ ಮತ್ತು ಅನೀರಿಕ್ಷಿತವಾಗಿ ದೊರೆತ ಸೌಭಾಗ್ಯ. ಈ ಬಗ್ಗೆ ಸದಸ್ಯರಿಗೆ ತುಂಬಾ ತೃಪ್ತಿ ಇದೆ. ತಮ್ಮ ಜೀವನ ಮೌಲ್ಯವನ್ನು ಸ್ವ ಸಹಾಯ ಮತ್ತು ಪರಸ್ಪರ ಸಹಾಯದ ಮೂಲಕ ಎತ್ತರಿಸಬೇಕೆಂದು ಮಹತ್ವಾಕಾಂಕ್ಷೆಯಿದೆ.

ಒಂದು ಎಕರೆಗಿಂತ ಹೆಚ್ಚು ಭೂಮಿ ಇರುವ ಬಡತನದ ರೇಖೆಯ ಮೇಲಿರುವ ಜನರು ಪ್ರಗತಿ ಬಂಧು ಸದಸ್ಯರಾಗಲು ಆದ ಕಾರಣಗಳನ್ನು ನೀಡಿದ್ದಾರೆ.

ಸದಸ್ಯರಾಗಲು ಕಾರಣಗಳು

- ಉತ್ಕೃಷ್ಟ ಜೀವನ ಮಟ್ಟವನ್ನು ಸಾಧಿಸುವುದು
- ಏಕಾಕಿತನವನ್ನು ಹೋಗಾಲಾಡಿಸುವುದು
- ವಿಭಿನ್ನ ಅಭಿರುಚಿಯ ಜನರೊಡನೆ ಸೌಹಾರ್ದ ಸಂಬಂಧ ಬೆಳೆಸುವುದು
- ಕುಟುಂಬ ಸದಸ್ಯರ ಅವಗಣನೆಗೆ ತುತ್ತಾಗಿರುವುದು
- ಆತ್ಮ ವಿಶ್ವಾಸ ಮತ್ತು ಸ್ವ ಗೌರವವನ್ನು ಬೆಳೆಸುವುದು
- ಸ್ಥಳೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಕಾಪಾಡುವುದು
- ಬದಲಾಗುತ್ತಿರುವ ಆರ್ಥಿಕ ಚಿತ್ರಣದ ಬಗ್ಗೆ ಜ್ಞಾನ ಹೆಚ್ಚಿಸಿಕೊಳ್ಳುವುದು

ಕೋಷ್ಟಕ ೫.೩: ಸಂದರ್ಶನಕ್ಕೊಳಗಾದವರ ಜಾತಿವಾರು ವಿವರ


ಜಾತಿ	ಗಂಡಸರು	ಹೆಂಗಸರು	ಒಟ್ಟು
ಮುಂದುವರಿದವರು	೦೪	–	೦೪
ಹಿಂದುಳಿದವರು	೧೪	೧೮	೩೨
ಪರಿಶಿಷ್ಟವರ್ಗ	೧೦	೧೦	೨೦
ಪರಿಶಿಷ್ಟ ಜಾತಿ	೧೦	೧೦	೨೦
ಮುಸ್ಲಿಂ	೧೦	೧೦	೨೦
ಕ್ರಿಶ್ಚಿಯನ್	೦೨	೦೨	೦೪
ಒಟ್ಟು	**೫೦**	**೫೦**	೧೦೦

ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಎಲ್ಲಾ ಜಾತಿಗಳಿಗೂ ಸಮಾನ ಪ್ರಾಶಸ್ತ್ಯ ನೀಡುವುದು ಸಂಶೋಧಕನ ಉದ್ದೇಶವಾಗಿತ್ತು. ಆದರೆ ಪ್ರಗತಿ ಬಂಧು ಸ್ವ ಸಹಾಯ ಗುಂಪುಗಳಲ್ಲಿ ಕೆಲವು ಜಾತಿಗಳ ಪ್ರಾತಿನಿಧ್ಯ ತುಂಬಾ ಕಡಿಮೆ ಇದೆ. ಆದುದರಿಂದ ಕೇವಲ

ನಾಲ್ಕು ಮಂದಿಯನ್ನು ಮುಂದುವರಿದ ಜಾತಿಯಿಂದ ಆರಿಸಿಕೊಳ್ಳಲಾಯಿತು. ಕ್ರಿಶ್ಚಿಯನ್ ಸಮುದಾಯದಿಂದಲೂ ೪ ಮಂದಿಯನ್ನು ಮಾತ್ರ ಆರಿಸಬೇಕಾಯಿತು. ಹಿಂದುಳಿದ ಸಮುದಾಯದವರಿಗೆ ಸಹಜವಾಗಿ ಹೆಚ್ಚು ಪ್ರಾತಿನಿಧ್ಯ ದೊರೆಯಿತು. ಪರಿಶಿಷ್ಟ ಜಾತಿ/ವರ್ಗ ಮತ್ತು ಮುಸ್ಲಿಂ ಸಮುದಾಯಗಳು ಅವುಗಳ ಸಂಖ್ಯೆಗೆ ಅನುಗುಣವಾಗಿ ಪ್ರಾಶಸ್ತ್ಯಗಳಿಸಿಕೊಂಡವು.

ಗ್ರಾಮೀಣ ಭಾರತದ ಬಹುದೊಡ್ಡ ಸಮಸ್ಯೆ ಜಾತೀಯ ಮನೋಭಾವನೆ. ಇದು ಪ್ರಗತಿ ಬಂಧು ಸ್ವ ಸಹಾಯ ಗುಂಪುಗಳಲ್ಲಿ ಢಾಳಾಗಿ ಕಾಣಸಿಗುತ್ತದೆ. ಮುಂದುವರಿದ ಜಾತಿಗಳ ಜನ ಬಡವರಾದರೂ ದಲಿತರೊಂದಿಗೆ ಮತ್ತು ಅನ್ಯಧರ್ಮೀಯರೊಂದಿಗೆ ಹಾಗೂ ಶೂದ್ರರೊಂದಿಗೆ ಬೆರೆಯಲು ಇಚ್ಛಿಸುವುದಿಲ್ಲ. ದೈಹಿಕ ಪರಿಶ್ರಮದ ಬಗ್ಗೆ ಮುಂದುವರಿದ ಜನಾಂಗಗಳಿಗೆ ಈಗಲೂ ತಿರಸ್ಕಾರವಿದೆ. ಪ್ರಗತಿ ಬಂಧು ಸ್ವ ಸಹಾಯ ತಂಡದ ಸದಸ್ಯರಲ್ಲಿ ಮುಂದುವರಿದ ಜಾತಿಗೆ ಸೇರಿದವರು ಶ್ರಮದಾನಗಳಿಗೆ ತಮ್ಮ ಬದಲಿಗೆ ಇತರನ್ನು ಕಳಿಸಿಕೊಡುತ್ತಾರೆ. ಉಳಿದಂತೆ ಬಡವರಲ್ಲಿ ಜಾತಿಗಿಂತ ಬಡತನ ಮುಖ್ಯವಾಗುತ್ತದೆ. ಅದು ಅವರನ್ನು ಒಗ್ಗೂಡಿಸುವ ಒಂದು ಅಂಶವಾಗಿದೆ.

ಸದಸ್ಯರ ಧರ್ಮವಾರು ವಿತರಣೆ ಚಿತ್ರ ೫.೧ ತೋರಿಸುತ್ತದೆ.



ಚಿತ್ರ ೫.೧: ಸದಸ್ಯರ ಧರ್ಮವಾರು ವಿತರಣೆ



ಒಟ್ಟು ಸಂದರ್ಶಿಸಿದ ಸದಸ್ಯರಲ್ಲಿ ಶೇಕಡಾ ೭೫ ಮಂದಿ ಹಿಂದುಗಳು ಮತ್ತು ಶೇಕಡಾ ೨೦ ಮಂದಿ ಮುಸಲ್ಮಾನರು. ಜೈನರ ಪ್ರಮಾಣ ಶೇಕಡಾ ಒಂದು ಮತ್ತು ಕ್ರಿಶ್ಚಿಯನ್ನರ ಪ್ರಮಾಣ ಶೇಕಡಾ ೪ ರಷ್ಟು. ಗ್ರಾಮಸ್ಥರಲ್ಲಿ ಮಾತು ಕತೆಯ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಸಂಗ್ರಹಿಸಲು ಸಾಧ್ಯವಾಯಿತು. ಎರಡು ಗ್ರಾಮಗಳಲ್ಲಿ ಬ್ರಾಹ್ಮಣರ ಸಂಖ್ಯೆ ದೊಡ್ಡದಾಗಿಯೇ ಇದೆ. ಆದರೆ ಬಹುತೇಕರು ಈಗಾಗಲೇ ಉಲ್ಲೇಖಿಸಿದಂತೆ ಅನ್ಯ ಜಾತಿಗಳೊಡನೆ ಬೆರೆಯಲು ಹಿಂಜರಿಯುತ್ತಾರೆ. ಭಾರತದ ಶ್ರೇಣೀಕೃತ ಜಾತಿ ವ್ಯವಸ್ಥೆಯು ಅಭಿವೃದ್ಧಿಗೆ ಹೇಗೆ ಪ್ರತಿಕೂಲಕರವಾಗಿದೆ ಎನ್ನುವುದಕ್ಕೆ ಈ ಗ್ರಾಮಗಳ ಬ್ರಾಹ್ಮಣ ವರ್ಗ ಸಾಕ್ಷಿಯಾಗಿದೆ. ಭೂ ಸುಧಾರಣೆ ಕಾಲದಲ್ಲಿ ಬಹುತೇಕ ಜಮೀನನ್ನು ಕಳಕೊಂಡು ಬಡವರಾಗಿರುವ ಬಹುತೇಕ ಬ್ರಾಹ್ಮಣರು ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ.

ಎರಡು ಗ್ರಾಮಗಳಲ್ಲಿ ಮುಸಲ್ಮಾನರ ಸಂಖ್ಯೆ ಗಣನೀಯವಾಗಿದೆ. ಅಫಘಾನಿಸ್ತಾನದಲ್ಲಿ ತಾಲಿಬಾನ್ ಆಡಳಿತ ಕುಸಿದ ಬಳಿಕ ವಿಶ್ವದಾದ್ಯಂತ ಮುಸ್ಲಿಂ ಜನರಲ್ಲಿ ಹೆಚ್ಚಿರುವ ಜ್ಞಾನದ ಹಸಿವಿಗೆ ಈ ಎರಡು ಗ್ರಾಮಗಳಲ್ಲಿ ಸಾಕ್ಷಿಗಳು ಸಿಗುತ್ತವೆ. ವಿದೇಶಗಳಲ್ಲಿ ಉದ್ಯೋಗದಲ್ಲಿರುವ ಏಳು ಎಂಟು ಕುಟುಂಬಗಳನ್ನು ಬಿಟ್ಟರೆ ಉಳಿದ ಮುಸ್ಲಿಂ ಜನರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರಾಗಿದ್ದಾರೆ. ಆದುದರಿಂದ ಅವರು ಸ್ವಸಹಾಯ ಚಳುವಳಿಯಲ್ಲಿ ಮುಕ್ತವಾಗಿ ಭಾಗವಹಿಸುತ್ತಿದ್ದಾರೆ. ಕೆಲವರು ಪ್ರಗತಿಬಂಧುವಿನ ಮಾತ್ರವಲ್ಲದೆ ನವೋದಯ ಗುಂಪಿನ ಸದಸ್ಯರೂ ಆಗಿದ್ದಾರೆ. ಮುಸ್ಲಿಂ ಹೆಂಗಸರು ಸ್ತ್ರೀ ಶಕ್ತಿ ಯೋಜನೆಯ ಸದಸ್ಯರಾಗಿರುವುದರೊಂದಿಗೆ ಪ್ರಗತಿ ಬಂಧು ಸ್ವ ಸಹಾಯ ಗುಂಪಿನ ಸದಸ್ಯರೂ ಆಗಿದ್ದಾರೆ.

ಇವೆರಡು ಗ್ರಾಮಗಳಲ್ಲಿ ಕ್ರಿಶ್ಚಿಯನ್ನರು ಮತ್ತು ಜೈನರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಬಹುತೇಕ ಕ್ರಿಶ್ಚಿಯನ್ನರು ಬಡತನ ರೇಖೆಯ ಕೆಳಗಿದ್ದಾರೆ. ಈ ಸಮುದಾಯದ ಜನರು ಸ್ವ ಸಹಾಯ ಮತ್ತು ಸ್ತ್ರೀ ಶಕ್ತಿ ಯೋಜನೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಸ್ವ ಸಹಾಯ ಸಂಘಗಳಿಗಿಂತಲೂ ಅಭಿವೃದ್ಧಿಯ ದೃಷ್ಟಿಯಿಂದ ಪ್ರಗತಿ ಬಂಧು ಗುಂಪುಗಳು ಮಹತ್ವ ಪಡೆಯುತ್ತದೆ. ಈ ನಿಟ್ಟಿನಲ್ಲಿ ಪ್ರಗತಿ ಬಂಧು ಗುಂಪುಗಳು ಸದಸ್ಯತ್ವ ಹೆಚ್ಚಿಸಿ ಕ್ರಿಶ್ಚಿಯನ್ನರ ಪ್ರಗತಿಯನ್ನು ಸಾಧಿಸಲು ಅವಕಾಶ ಮಾಡಿ ಕೊಡಬೇಕಾದ ಅಗತ್ಯವಿದೆ.

ಭಾರತದ ಗ್ರಾಮೀಣ ಸಾಮುದಾಯಿಕ ಬದುಕು ವಿಘಟನೆಗೊಳ್ಳುತ್ತಿರುವ ದುರಂತ ವರ್ತಮಾನದಲ್ಲಿ ಸ್ವ ಸಹಾಯ ಗುಂಪುಗಳಿಗಿಂತಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪ್ರಗತಿ ಬಂಧು ಸ್ವ ಸಹಾಯ ಗುಂಪುಗಳಿಗೆ ನೀಡಬೇಕಾಗಿದೆ.

ಈ ಗ್ರಾಮಗಳಲ್ಲಿ ಜೈನರ ಸಂಖ್ಯೆ ಬಹಳ ಕಡಿಮೆ ಇದೆ. ಒಂದು ಕಾಲದಲ್ಲಿ ತುಳುನಾಡನ್ನು ಆಳುತ್ತಿದ್ದ ಈ ವರ್ಗ ಈಗ ತನ್ನ ಆರ್ಥಿಕ ಮತ್ತು ಸಾಮಾಜಿಕ ಮಹತ್ವವನ್ನು ಮೊದಲಿನ ಹಾಗೆ ಉಳಿಸಿಕೊಳ್ಳುವಲ್ಲಿ ವಿಫಲವಾಗಿದೆ. ಆದರೆ ಇರುವ ಜೈನ ಸಮುದಾಯದವರಲ್ಲಿ ಬಡತನದ ರೇಖೆಯ ಕೆಳಗೆ ಯಾರೂ ಇಲ್ಲವೆನ್ನುವುದು ಹೊರನೋಟಕ್ಕೆ ವೇದ್ಯವಾಗುತ್ತದೆ. ಬದಲಾದ ಸಾಮಾಜಿಕ ಪರಿಸ್ಥಿಯನ್ನು ಅರ್ಥಮಾಡಿಕೊಂಡು ಈ ಸಮುದಾಯದವರು ಇತರ ಸಮುದಾಯದೊಡನೆ ಮುಕ್ತವಾಗಿ ಬೆರೆಯಲು ಹವಣಿಸುತ್ತಿದ್ದಾರೆ. ಇದಕ್ಕೆ ಅನೇಕ ಮಂದಿ ಜೈನರು ಸ್ವ ಸಹಾಯ ಗುಂಪುಗಳ ಸದಸ್ಯರಾಗಿರುವುದು ಸಾಕ್ಷಿಯಾಗಿದೆ.

೫.೨ ಸದಸ್ಯರ ವಯೋಮಾನ, ಶಿಕ್ಷಣ ಮತ್ತು ವೃತ್ತಿ ವಿತರಣೆ

ಸಂದರ್ಶನ ಮಾಡಿದ ೧೦೦ ಸದಸ್ಯರು ಬೇರೆ ಬೇರೆ ವಯೋಮಾನಕ್ಕೆ ಸೇರಿದವರು. ಸದಸ್ಯರ ವಯೋಮಾನ ವಿವರವನ್ನು ಕೋಷ್ಟಕ ೫.೪ ಒದಗಿಸುತ್ತದೆ.

ಕೋಷ್ಟಕ ೫.೪ ಸದಸ್ಯರ ವಯೋಮಾನ

ವಯಸ್ಸಿನ ವಿಭಜನೆ	ಪುರುಷರು	ಮಹಿಳೆಯರು	ಒಟ್ಟು
೧೮–೨೫	–	೦೭	೭
೨೬–೩೫	೧೨	೨೩	೩೫
೩೬–೫೦	೩೪	೨೦	೫೪
೫೦ ಕ್ಕಿಂತ ಹೆಚ್ಚು	೦೪	–	೦೪
ಒಟ್ಟು	೫೦	೫೦	೧೦೦

ಸದಸ್ಯರಲ್ಲಿ ೧೮–೨೫ ವರೆಗಿನ ವಯೋಮಾನದ ಪುರುಷರು ಒಬ್ಬರೂ ಇಲ್ಲ. ಮಹಿಳೆಯರ ಸಂಖ್ಯೆ ೦೭. ಇದು ತುಂಬು ಯವ್ವನದ ಕಾಲ. ಭವಿಷ್ಯದ ಬಗ್ಗೆ ಯುವಕರು ಯೋಚಿಸುವುದು ಸ್ವಲ್ಪ ಕಡಿಮೆ. ಸಾಮಾದಾಯಿಕ ಜೀವನದ ಬಗೆ ಅವರಿಗೆ ಈ ವಯಸ್ಸಿನಲ್ಲಿ


ಹೆಚ್ಚು ಒಲವು ಇಲ್ಲದಿರುವುದನ್ನು ವೀಕ್ಷಣೆಯಿಂದ ತಿಳಿದುಕೊಳ್ಳಬಹುದು. ಮಹಿಳೆಯರಿಗೆ ಇದು ವಿವಾಹ ಕಾಲ. ಗ್ರಾಮೀಣ ಭಾರತದಲ್ಲಿ ೨೦ ತುಂಬುವ ಮೊದಲೇ ಬಹುತೇಕ ಮಹಿಳೆಯರು ವಿವಾಹವಾಗಿ ಬಿಡುತ್ತಾರೆ. ಗಂಡ ಕುಡುಕನೋ, ಜುಗಾರಿ ವ್ಯಸನಿಯೋ ಎಂದಾದರೆ ಸಂಸಾರ ನಿಭಾಯಿಸುವ ಹೊಣೆಗಾರಿಕೆಯನ್ನು ಎಳೆಯ ಹೆಗಲುಗಳು ಹೊರಬೇಕಾಗುತ್ತವೆ. ಅದಕ್ಕೆ ಈ ವಯೋಮಾನದ ಮಹಿಳೆಯರು ಪ್ರಗತಿ ಬಂಧು ಸದಸ್ಯರಾಗುತ್ತಿರುವುದು ಸಾಕ್ಷಿ.

ಸಂದರ್ಶಿಸಿದ ಸದಸ್ಯರಲ್ಲಿ ೨೬ ರಿಂದ ೫೦ ರ ವರೆಗಿನ ವಯೋಮಾನದವರು ಅಧಿಕವಾಗಿದ್ದಾರೆ. ೨೫-೩೬ರ ವರೆಗಿನ ವಯೋಮಾನದ ಪುರುಷರ ಸಂಖ್ಯೆಗಿಂತ ಮಹಿಳೆಯರ ಸಂಖ್ಯೆ ಅಧಿಕ. ಆದರೆ ವಯಸ್ಸಾಗುತ್ತಾ ಹೋದಂತೆ ಪುರುಷರು ಪ್ರಗತಿ ಬಂಧು ಸ್ವ ಸಹಾಯದ ಸದಸ್ಯತನದತ್ತ ಹೆಚ್ಚು ಒಲವು ತೋರುವುದನ್ನು ಮತ್ತು ಮಹಿಳೆಯರು ಕಡಿಮೆ ಒಲವು ತೋರುವುದನ್ನು ಅಧ್ಯಯನ ಕಾಲದಲ್ಲಿ ಗಮನಿಸಲಾಯಿತು. ಪುರುಷರಿಗೆ ವಯಸ್ಸಾದಂತೆ ಜವಬ್ದಾರಿ ಬರುವುದನ್ನು ಇದು ತಿಳಿಸುತ್ತದೆ. ಪುರುಷರು ಕುಟುಂಬದ ಜವಾಬ್ದಾರಿ ವಹಿಸಿಕೊಂಡಾಗ ಮಹಿಳೆಯರು ಜವಾಬ್ದಾರಿಯಿಂದ ಸ್ವಲ್ಪ ಮುಕ್ತರಾಗುವಂತೆ ಕಾಣುತ್ತದೆ. ಅಧ್ಯಯನಕ್ಕೆ ಆಯ್ದ ೧೦೦ ಮಂದಿಯಲ್ಲಿ ೪ ಮಂದಿ ೫೦ ಕ್ಕಿಂತ ಹೆಚ್ಚಿನ ವಯಸ್ಸಿನ ಪುರುಷರು. ಆದರೆ ಈ ವಯೋಮಾನದ ಮಹಿಳಾ ಸದಸ್ಯೆ ಒಬ್ಬರು ಕೂಡ ಕಾಣಸಿಗಲಿಲ್ಲ.

ಕೋಷ್ಟಕ ೫.೫: ಸಂದರ್ಶನಕ್ಕೆ ಆಯ್ದ ಸದಸ್ಯರ ಶಿಕ್ಷಣದ ಮಟ್ಟ

ಶಿಕ್ಷಣ ಪ್ರಮಾಣ	ಪುರುಷರು	ಮಹಿಳೆಯರು	ಒಟ್ಟು
ಅನಕ್ಷರಸ್ಥರು	೧೩	೧೫	೨೮
ಪ್ರಾಥಮಿಕ	೨೪	೨೪	೪೮
ಪ್ರೌಢ ಶಿಕ್ಷಣ	೧೧	೦೯	೨೦
ಕಾಲೇಜು	೦೨	೦೨	೦೪
ಇತರ	–	–	೦೦
ಒಟ್ಟು	**೫೦**	**೫೦**	೧೦೦

ಆಯ್ದ ಸದಸ್ಯರಲ್ಲಿ ಅನಕ್ಷರಸ್ಥ ಪುರುಷರ ಪ್ರಮಾಣ ಶೇಕಡಾ ೨೬ ಮತ್ತು ಮಹಿಳೆಯರ ಪ್ರಮಾಣ ಶೇಕಡಾ ೩೦. ಮಹಿಳಾ ಶಿಕ್ಷಣದ ಬಗೆಗಿನ ಸಾಂಪ್ರಾದಾಯಿಕ ದೃಷ್ಟಿಕೋನ ಬದಲಾಗುತ್ತಿದ್ದರೂ ಗ್ರಾಮೀಣ ಭಾರತದ ಅನಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣವೇ ಅಧಿಕ. ಉಳಿದಂತೆ ಶಿಕ್ಷಣ ಹಂತಗಳ ವಿಶ್ಲೇಷಣೆ ನಡೆಸುವಾಗ ಪುರುಷರಲ್ಲಿ ಮತ್ತು ಮಹಿಳೆಯರಲ್ಲಿ ಸಮಾನತೆ ಇರುವುದು ಗೋಚರವಾಯಿತು. ಆಯ್ದ ಸದಸ್ಯರಲ್ಲಿ ಶೇಕಡಾ ೪೮ ರಷ್ಟು ಪುರುಷರು ಮತ್ತು ಅಷ್ಟೇ ಪ್ರಮಾಣದ ಸ್ತ್ರೀಯರು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದವರು. ಶೇಕಡಾ ೨೨ ರಷ್ಟು ಗಂಡಸರು ಮತ್ತು ಶೇಕಡಾ ೧೮ ಹೆಂಗಸರು ಪ್ರೌಢಶಿಕ್ಷಣ ಪಡೆದವರು. ಕೆದಿಲ ಮತ್ತು ಕಡೇಶ್ವಾಲ್ಯ ಗ್ರಾಮಗಳು ತೀರಾ ಹಿಂದುಳಿದ ಗ್ರಾಮಗಳಾದರೂ ಇಲ್ಲಿ ಕಾಲೇಜು ಶಿಕ್ಷಿತರ ಸಂಖ್ಯೆ ಸಾಕಷ್ಟಿದೆ. ಮಾಣಿ, ಪೆರ್ನೆ, ಪುತ್ತೂರು, ಉಪ್ಪಿನಂಗಡಿ, ಬಂಟ್ವಾಳಗಳಲ್ಲಿ ಪದವಿಪೂರ್ವ ಕಾಲೇಜುಗಳು ಮತ್ತು ಪುತ್ತೂರು ಉಪ್ಪಿನಂಗಡಿ ಮತ್ತು ಬಂಟ್ವಾಳದಲ್ಲಿ ಪ್ರಥಮ ದರ್ಜೆ ಕಾಲೇಜುಗಳಿರುವುದು ಇದಕ್ಕೆ ಕಾರಣ. ಆಯ್ದ ಸದಸ್ಯರಲ್ಲಿ ತಲಾ ಇಬ್ಬರಂತೆ ಹೆಂಗಸರು ಮತ್ತು ಗಂಡಸರು ಕಾಲೇಜು ಶಿಕ್ಷಣ ಮುಗಿಸಿದವರು. ಆದರೆ ವೃತ್ತಿಪರ ಶಿಕ್ಷಣ ಪಡೆದವರು ಒಬ್ಬರೂ ಅಧ್ಯಯನ ಕಾಲದಲ್ಲಿ ದೊರಕಲಿಲ್ಲ.



ಚಿತ್ರ ೫.೨ ಸದಸ್ಯರ ವೃತ್ತಿ ವಿತರಣೆ



ಒಟ್ಟು ಸದಸ್ಯರಲ್ಲಿ ಶೇಕಡಾ ೪೪ ಮಂದಿ ಬೀಡಿ ಕಟ್ಟುವವರು ಇವರಲ್ಲಿ ಮಹಿಳೆಯರದ್ದೇ ಪ್ರಾಬಲ್ಯ. ಲಿಂಗವಾರು ವಿಶ್ಲೇಷಣೆ ನಡೆ.ಸುವಾಗ ಪುರುಷರಲ್ಲಿ ಶೇಕಡಾ ೬ ಮಂದಿ ಮತ್ತು ಮಹಿಳೆಯರಲ್ಲಿ ಶೇಕಡಾ ೮೨ ಮಂದಿ ಬೀಡಿ ಕಟ್ಟಿ ಹೊಟ್ಟೆ ಹೊರೆಯುವುದು ವೇದ್ಯವಾಗುತ್ತದೆ. ಈ ಮಹಿಳೆಯರು ಕೃಷಿ ಕಾಲದಲ್ಲಿ ಕೃಷಿ ಕೆಲಸಗಳಿಗೆ ನೆರವಾಗುತ್ತಾರೆ. ಅದು ಅವರ ಋತು ಸಂಬಂಧೀ ಉದ್ಯೋಗವಾಗಿದೆ. ಬೀಡಿ ಕಟ್ಟುವುದು ಶಾಶ್ವತ ಉದ್ಯೋಗ. ಬೀಡಿಕಟ್ಟುವರಿಗೆ ಸಿಗುವ ಸವಲತ್ತುಗಳು ಇವರನ್ನು ಪೂರ್ಣಾವಧಿ ಕೃಷಿಕರಾಗದಂತೆ ಅಥವಾ ಕೃಷಿ ಕಾರ್ಮಿಕರಾಗದಂತೆ ತಡೆಗಟ್ಟಿವೆ. ಆದರೆ ಬೀಡಿಕಟ್ಟುವ ಮಹಿಳೆಯರು ಅನೇಕ ಶ್ವಾಸಕೋಶದ ಕಾಯಿಲೆಗಳಿಗೆ ಮತ್ತು ಕ್ಷಯರೋಗಕ್ಕೆ ತುತ್ತಾಗುತ್ತಿರುವುದು ಅಧ್ಯಯನ ಕಾಲದಲ್ಲಿ ಗಮನಕ್ಕೆ ಬಂತು.

ಪುರುಷರಲ್ಲಿ ಶೇಕಡಾ ೬೨ ಮಂದಿ ಕೃಷಿಯಲ್ಲಿ ಪೂರ್ಣಾವಧಿಯಾಗಿ ತೊಡಗಿಸಿಕೊಂಡಿದ್ದಾರೆ. ಇವರು ಬಿಡುವಿನ ಕಾಲದಲ್ಲಿ ಬೀಡಿಕಟ್ಟುವುದುಂಟು. ಮಹಿಳೆಯರಲ್ಲಿ ಶೇಕಡಾ ೪ ಮಂದಿ ಕೃಷಿಯಲ್ಲಿ ಪೂರ್ಣಾವಧಿಯಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪುರುಷ ಸದಸ್ಯರಲ್ಲಿ ಶೇಕಡಾ ೧೮ ಮಂದಿ ಮತ್ತು ಮಹಿಳಾ ಸದಸ್ಯರಲ್ಲಿ ಶೇಕಡಾ ೧೦ ಮಂದಿ ಕೂಲಿ ಮಾಡಿ ಜೀವಿಸುವವರು. ಒಟ್ಟು ಸದಸ್ಯರಲ್ಲಿ ಶೇಕಡಾ ೧೮ ರಷ್ಟು ಮಂದಿ ಇತರ ಉದ್ಯೋಗ ಮಾಡುತ್ತಿದ್ದಾರೆ. ಇತರ ಉದ್ಯೋಗಿಗಳಲ್ಲಿ ಗೂಡಂಗಡಿ ವ್ಯವಹಾರ ನಡೆಸುವವರು, ಸಿರಿ ಉತ್ಪನ್ನಗಳನ್ನು ಮಾರಾಟ ಮಾಡುವವರು, ಟೈಲರಿಂಗ್ ಮಾಡುವವರು ಒಳಗೊಂಡಿರುತ್ತಾರೆ.

ಸದಸ್ಯರಲ್ಲಿ ಬಹುತೇಕರು ಬೀಡಿಕಟ್ಟುವ ವೃತ್ತಿಯವರು. ಅವರು ಹೆಚ್ಚು ಬೀಡಿ ಕಟ್ಟಿ ಹೆಚ್ಚುಗಳಿಸಲು ಸಾಧ್ಯವಾಗುತ್ತದೆ. ಪ್ರಗತಿ ಬಂಧು ಸ್ವಸಹಾಯ ಗುಂಪುಗಳು ವಾರಕ್ಕೊಮ್ಮೆ ಶ್ರಮದಾನ ಮಾಡಬೇಕಾಗುತ್ತದೆ. ಶ್ರಮದಾನದಂದು ಅವರು ಕಟ್ಟುವ ಬೀಡಿಯ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತದೆ. ಅದನ್ನು ಮತ್ತಿನ ದಿನಗಳಲ್ಲಿ ಸರಿದೂಗಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಇದು ಅವರ ಕೆಲಸದ ಒತ್ತಡವನ್ನು ಹೆಚ್ಚಿಸುತ್ತದೆ. ವಯಸ್ಸಾದಂತೆ ಅವರ ಕೌಶಲ್ಯ ಮತ್ತು ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಪ್ರಗತಿ ಬಂಧು ಸ್ವ ಸಹಾಯ ಗುಂಪುಗಳು ವಾರಕ್ಕೊಮ್ಮೆ ಸಭೆ ಸೇರುತ್ತವೆ. ಸಭೆಗಳು ಶ್ರಮದಾನದ ದಿನದಂತೆ ನಡೆಯುತ್ತವೆ. ಯಾವ ಸದಸ್ಯರ ಮನೆಯಲ್ಲಿ ಶ್ರಮದಾನ

ನಡೆಯುತ್ತದೆಯೋ ಅವನು/ಅವಳು ಊಟ ಮತ್ತು ಫಲಾಹಾರದ ವ್ಯವಸ್ಥೆ ಮಾಡುತ್ತಾನೆ/ಮಾಡುತ್ತಾಳೆ. ಸಭೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು ಎಂಬ ನಿಯಮವಿದೆ. ಸ್ವಯಂ ಹಾಜರಾಗಲು ಸಾಧ್ಯವಾಗದವರು ತಮ್ಮ ಪ್ರತಿನಿಧಿಯನ್ನು ಕಳುಹಿಸಿಕೊಡಬಹುದು. ಅನಿವಾರ್ಯ ಕಾರಣಗಳಿಗಾಗಿ ಹಾಜರಾಗಲು ಸಾಧ್ಯವಾಗದವರ ಮೇಲೆ ದಂಡ ಹಾಕಲಾಗುವುದಿಲ್ಲ. ಎಲ್ಲಾ ಸಭೆಗಳು ಸದಸ್ಯರ ಮನೆಗಳಲ್ಲೇ ನಡೆಯುತ್ತವೆ. ಈ ಎರಡು ಗ್ರಾಮಗಳ ಪ್ರಗತಿಬಂಧು ತಂಡದ ಸದಸ್ಯರಿಗೆ ಯಾವುದೇ ರೀತಿಯ ಸಮವಸ್ತ್ರಗಳಿರುವುದಿಲ್ಲ.

೫.೩ ಮೂಲ ಸವಲತ್ತುಗಳು

ಆರೋಗ್ಯ, ಶಿಕ್ಷಣ, ಸಾರಿಗೆ ಸಂಪರ್ಕ, ನೀರು ಮತ್ತು ವಿದ್ಯುತ್ ಇವನ್ನು ಪ್ರಕೃತ ಅಧ್ಯಯನದಲ್ಲಿ ಮೂಲ ಸವಲತ್ತುಗಳೆಂದು ಪರಿಗಣಿಸಲಾಗಿದೆ. ಸಂದರ್ಶನಕ್ಕೆ ಆಯ್ದ ಸದಸ್ಯರಲ್ಲಿ ಒಟ್ಟು ೨೮ ಮಂದಿ ಅನಕ್ಷರಸ್ಥರು ಮತ್ತು ೪೮ ಮಂದಿ ಪ್ರಾಥಮಿಕ ಶಿಕ್ಷಣ ಪಡೆದವರು. ಪ್ರಾಥಮಿಕ ಶಿಕ್ಷಣ ಪಡೆದವರಲ್ಲಿ ಹೆಚ್ಚಿನವರು ತಮ್ಮ ದಸ್ಕತ್ತು ಮಾತ್ರ ಹಾಕಬಲ್ಲ ಪ್ರವೀಣರು ಅವರಿಂದ ಬೇರೇನನ್ನೂ ಓದಲು ಸಾಧ್ಯವಾಗುತ್ತಿಲ್ಲ.ಪ್ರಾಥಮಿಕ ಶಿಕ್ಷಣ ಪಡೆದವರಲ್ಲಿ ಹೆಬ್ಬೆಟ್ಟು ಒತ್ತುವ ವೀರರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಹಾಗಾಗಿ ಸಂದರ್ಶಿಸಿದ ಸದಸ್ಯರಲ್ಲಿ ಶೇಕಡಾ ೭೬ ಮಂದಿ ನಿರಕ್ಷರಿಗಳ ಸಾಲಿಗೆ ಸೇರಿರುತ್ತಾರೆ. ಇವರು ನಿರಂತರ ಶಿಕ್ಷಣ ಯೋಜನೆಯಲ್ಲಿಯೂ ಪಾಲ್ಗೊಳ್ಳುತ್ತಿಲ್ಲ. ಆದುದರಿಂದ ಇವರನ್ನು ಶಿಕ್ಷಣ ಸೌಲಭ್ಯ ವಂಚಿತರೆಂದು ಕರೆಯಬಹುದು.


ಸಂದರ್ಶಿಸಿದ ಎಲ್ಲಾ ಪ್ರಗತಿ ಬಂಧು ಸದಸ್ಯರ ಮನೆಗಳಿಗೆ ವಿದ್ಯುತ್ ಸಂಪರ್ಕ ಇದೆ. ಈ ಎರಡು ಗ್ರಾಮಗಳು ನೂರು ಶೇಕಡಾ ವಿದ್ಯುತ್ ಸಂಪರ್ಕ ಹೊದಿರುವ ಗ್ರಾಮಗಳಾಗಿವೆ. ಬಡತನದ ರೇಖೆಯ ಕೆಳಗಿರುವ ಸದಸ್ಯರು ಭಾಗ್ಯಜ್ಯೋತಿ ಫಲಾನುಭವಿಗಳಾಗಿದ್ದಾರೆ. ಎರಡು ಗ್ರಾಮಗಳ ಮಧ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ೪೮ ಹಾದು ಹೋಗುತ್ತದೆ. ಕೆದಿಲಕ್ಕೆ ಪುತ್ತೂರಿನಿಂದ, ಕಡೇಶ್ವಾಲ್ಯಕ್ಕೆ ಪುತ್ತೂರು ಮತ್ತು ಮಂಗಳೂರಿನಿಂದ ಬಸ್ಸು ಸೌಕರ್ಯವಿದೆ. ಇವೆರಡು ಗ್ರಾಮಗಳಿಗೆ ರಸ್ತೆ ಮತ್ತು ವಿದ್ಯುತ್‌ನ ಬಗ್ಗೆ ಹೇಳಿಕೊಳ್ಳುವಂತಹ ದೊಡ್ಡ ಸಮಸ್ಯೆಗಳಿಲ್ಲ.

ಸಂದರ್ಶಿಸಿದ ಸದಸ್ಯರಲ್ಲಿ ಶೇಕಡಾ ೬೮ ಮಂದಿ ದೂರವಾಣಿ ಸೌಲಭ್ಯವನ್ನು ಹೊಂದಿದ್ದಾರೆ. ಬಡತನದ ರೇಖೆಯ ಮೇಲಿರುವ ಸದಸ್ಯರು ದೂರವಾಣಿ ಸೌಲಭ್ಯ ಹೊಂದಿದ್ದರೆ ಅದು ಆಶ್ಚರ್ಯವೇನಲ್ಲ. ಕೆಲವು ವರ್ಷಗಳ ಹಿಂದೆ ಭಾರತದ ದೂರವಾಣಿ ಇಲಾಖೆಯು ಗ್ರಾಮೀಣ ಬಡವರಿಗಾಗಿ ಕಡಿಮೆ ವೆಚ್ಚದ ದೂರವಾಣಿ ಸೌಲಭ್ಯವನ್ನು ಒದಗಿಸಿತ್ತು. ಬಡತನದ ರೇಖೆಯ ಕೆಳಗಿರುವ ಕೆಲವು ಮಂದಿ ಈ ಸೌಲಭ್ಯ ಪಡಕೊಂಡರು ಆದರೆ ಸರಕಾರವು ಬಡತನದ ರೇಖೆಯನ್ನು ನಿರ್ಧರಿಸಲು ದೂರವಾಣಿಯನ್ನು ಕೂಡಾ ಒಂದು ಮಾನದಂಡವಾಗಿ ಬಳಸಿತು. ದೂರವಾಣಿ ಸಂಪರ್ಕ ಹೊಂದಿರುವ ಕುಟುಂಬಗಳನ್ನು ಬಡತನ ರೇಖೆಯ ಮೇಲಿರುವ ಕುಟುಂಬವೆಂದು ವ್ಯಾಖ್ಯಾನಿಸಲಾಯಿತು. ಪರಿಣಾಮವಾಗಿ ಬಡತನ ರೇಖೆಯ ಕೆಳಗಿರುವ ಅನೇಕ ಕುಟುಂಬಗಳು ಸರಕಾರದ ಕೆಲವು ಯೋಜನೆಯಿಂದ ವಂಚಿತವಾದವು. ದೂರವಾಣಿಯನ್ನು ಬಡತನದ ರೇಖೆಯ ಮಾನದಂಡವಾಗಿ ಬಳಸಬಾರದೆಂಬ ಸಲಹೆ ಕ್ಷೇತ್ರಾಧ್ಯಯನ ಕಾಲದಲ್ಲಿ ಹಲವರಿಂದ ದೊರೆಯಿತು.

ಫಲಾನುಭವಿಗಳಲ್ಲಿ ಇಬ್ಬರು ಸ್ವಂತ ಜೀಪು ಮತ್ತು ಬೈಕನ್ನು ಹೊಂದಿದ್ದಾರೆ. ಬೈಕು ಮಾತ್ರ ಹೊಂದಿದವರ ಸಂಖ್ಯೆ ೫. ಮೂವತ್ತೇಳು ಮಂದಿ ಬೈಸಿಕಲ್ಲನ್ನು ಹೊಂದಿದ್ದಾರೆ. ಊರಿಗೆ ಬಸ್ಸು ಬರುತ್ತಿರುವುದರಿಂದ ಮತ್ತು ಸಾಕಷ್ಟು ರಿಕ್ಷಾಗಳು ಓಡಾಡುವುದರಿಂದ ಸಾರಿಗೆ ಸಮಸ್ಯೆ ಉಂಟಾಗುವುದಿಲ್ಲವೆಂದು ಜನ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕಡೇಶ್ವಾಲ್ಯ ಗ್ರಾಮದಿಂದ ಪಕ್ಕದ ಬೆಳ್ತಂಗಡಿ ತಾಲೂಕಿನ ಅಜಿಲ ಮೊಗೆರು ಗ್ರಾಮಕ್ಕೆ ತುಂಬಾ ಮಂದಿ ಕೂಲಿ ಕೆಲಸಕ್ಕೆ ಹೋಗುವವರು ಇದ್ದಾರೆ. ಅವರು ನೇತ್ರಾವತಿ ನದಿಯನ್ನು ದಾಟಿ ಹೋಗಬೇಕಾಗುತ್ತದೆ. ಈ ಪ್ರದೇಶದಲ್ಲಿ ನೇತ್ರಾವತಿ ತುಂಬಾ ಆಳವನ್ನು ಹೊಂದಿದೆ. ಆದುದರಿಂದ ದೋಣಿಗಳು ಸಂಚಾರಕ್ಕೆ ಬಳಕೆಯಾಗುತ್ತವೆ. ಮಳೆಗಾಲದ ಕೊನೆಯಲ್ಲಿ ಕಡೇಶ್ವಾಲ್ಯದಿಂದ ಆಚೆ ಉಪ್ಪಿನಂಗಡಿಯ ವರೆಗೆ ಮತ್ತು ಈಚೆ ಸರಪಾಡಿಯವರೆಗೆ ದೋಣಿಗಳು ಆಂತರಿಕ ಸಾರಿಗೆ ಸೌಲಭ್ಯಗಳಿಗೆ ಬಳಕೆಯಾಗುತ್ತವೆ.

ಬಂಟ್ವಾಳ ತಾಲೂಕಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಬೀಳುತ್ತಿರುವ ಮಳೆಯ ಪ್ರಮಾಣ ಕಡಿಯಾಗುತ್ತಿದೆ. ಎಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಕೆದಿಲ ಮತ್ತು ಕಡೇಶ್ವಾಲ್ಯ ಸೇರಿದಂತೆ ಅನೇಕ ಗ್ರಾಮಗಳು ಜಲಕ್ಷಾಮಕ್ಕೆ ತುತ್ತಾಗುತ್ತವೆ.

ಬಂಟ್ವಾಳ ತಾಲೂಕು ತುಂಬಾ ಮಳೆ ಬೀಳುವ ಪ್ರದೇಶವಾಗಿದೆ. ದ.ಕ ಜಿಲ್ಲೆಗೆ ಹೋಲಿಸಿದಂತೆ ಬಂಟ್ವಾಳದಲ್ಲಿ ಬೀಳುವ ಮಳೆಯ ಪ್ರಮಾಣವನ್ನು ಚಿತ್ರ. ೫.೩ ತೋರಿಸುತ್ತದೆ.




ಚಿತ್ರ ೫.೩: ಕಡಿಮೆಯಾಗುತ್ತಿರುವ ಮಳೆ

ಸಂದರ್ಶಿಸಿದ ಸದಸ್ಯರು ಶೇಕಡ ೪೬ ಮಂದಿ ಸ್ವಂತ ಬಾವಿಯನ್ನು ಹೊಂದಿದ್ದಾರೆ. ಉಳಿದವರು ಸಾರ್ವಜನಿಕ ನೀರು ಪೂರೈಕೆಯನ್ನು ಅವಲಂಬಿಸಿದ್ದಾರೆ. ಬೇಸಿಗೆಯ ಎರಡು ತಿಂಗಳುಗಳಲ್ಲಿ ತುಂಬಾ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ.

೫.೪ ಸದಸ್ಯರ ಭೂ ಸಂಪನ್ಮೂಲದ ವಿವರ

ಸದಸ್ಯರ ಸಂಪನ್ಮೂಲ ವಿವರವನ್ನು ಚಿತ್ರ ೫.೪ ತೋರಿಸುತ್ತದೆ.



ಚಿತ್ರ ೫.೪: ಸದಸ್ಯರ ಭೂ ಸಂಪನ್ಮೂಲ





ಸಂದರ್ಶಿಸಿದ ಸದಸ್ಯರಲ್ಲಿ ½ ಎಕರೆಗಿಂತ ಕಡಿಮೆ ಭೂಮಿ ಹೊಂದಿದವರು ಬಹುಸಂಖ್ಯಾತರಾಗಿದ್ದಾರೆ. ಅವರ ಪ್ರಮಾಣ ಶೇಕಡಾ ೫೫. ಉಳಿದಂತೆ ಶೇಕಡಾ ೪೧ ಮಂದಿ ಒಂದು ಎಕರೆಗಿಂತ ಕಡಿಮೆ ಭೂಮಿ ಹೊಂದಿದ್ದಾರೆ. ಶೇಕಡಾ ೪ ರಷ್ಟು ಮಂದಿ ಸದಸ್ಯರು ಒಂದರಿಂದ ಮೂರು ಎಕರೆಯ ವಿಸ್ತೀರ್ಣದ ಭೂಮಿಯನ್ನು ಹೊಂದಿದ್ದಾರೆ.

ಶೇಕಡಾ ೮೧ ಮಂದಿಗೆ ಪಿತ್ರಾರ್ಜಿತ ಭೂಮಿಯನ್ನು ಅನುಭವಿಸುವ ಭಾಗ್ಯ ಒದಗಿಬಂದಿದೆ. ಶೇಕಡಾ ೩ ರಷ್ಟು ಸದಸ್ಯರು ಕಷ್ಟ ಪಟ್ಟು ದುಡಿದು ತಮ್ಮ ಸಂಪಾದನೆಯಿಂದ ಭೂಮಿಯನ್ನು ಪಡೆದುಕೊಂಡಿದ್ದಾರೆ. ಶೇಕಡಾ ೫ ರಷ್ಟು ಸದಸ್ಯರಿಗೆ ಸರಕಾರ ದರಕಾಸ್ತು ಮಂಜೂರು ಮಾಡಿದೆ. ಶೇಕಡಾ ೧೧ ರಷ್ಟು ಮಂದಿ ಅಕ್ರಮ ಸಕ್ರಮ ಫಲಾನುಭವಿಗಳಾಗಿದ್ದಾರೆ.

ಸಂದರ್ಶಿಸಿದ ಎಲ್ಲಾ ಸದಸ್ಯರು ಸ್ವಂತ ಮನೆಗಳನ್ನು ಹೊಂದಿದ್ದಾರೆ. ಶೇಕಡಾ ೬೪ ರಷ್ಟು ಮಂದಿಗಳಿಗೆ ಪಿತ್ರಾರ್ಜಿತ ಮನೆಗಳಿವೆ. ಶೇಕಡಾ ೨೩ ಸದಸ್ಯರು ತಮ್ಮ ಸ್ವಂತಗಳಿಕೆಯ ಮೂಲಕ ಮನೆ ಕಟ್ಟಿ ನೋಡಿದ್ದಾರೆ. ಶೇಕಡಾ ೧೩ ರಷ್ಟು ಸದಸ್ಯರಿಗೆ ಸರಕಾರವು ಮನೆಯನ್ನು ಕಟ್ಟಿಸಿಕೊಟ್ಟಿದೆ. ಶೇಕಡಾ ೭೨ ರಷ್ಟು ಸದಸ್ಯರ ಮನೆಗಳಿಗೆ ಸಂಡಾಸು ವ್ಯವಸ್ಥೆ ಇದೆ. ಸಂಡಾಸು ನಿರ್ಮಾಣದ ಸಾಧನಗಳನ್ನು ಸರಕಾರ ಒದಗಿಸಿದರೂ ಎಲ್ಲರ ಮನೆಗಳಿಗೆ ಸಂಡಾಸು ವ್ಯವಸ್ಥೆ ಇರುವುದಿಲ್ಲ. ಇದರಿಂದಾಗಿ ವಾಯುಮಾಲಿನ್ಯ ಮತ್ತು ಜಲಮಾಲಿನ್ಯ ಸಮಸ್ಯೆಗಳುಂಟಾಗಿವೆ.

೫.೫ ಉಳಿತಾಯ, ಸಾಲ ಮತ್ತು ಮರುಪಾವತಿ

ಸದಸ್ಯರ ಉಳಿತಾಯವನ್ನು ಕ್ರೋಢೀಕರಿಸಿ ಅದರ ಆಧಾರದ ಮೇಲೆ ಸಾಲ ನೀಡುವುದು ಪ್ರಗತಿ ಬಂಧು ಗುಂಪುಗಳ ಬಹುಮುಖ್ಯ ಕಾರ್ಯವಾಗಿರುತ್ತದೆ. ಕೋಷ್ಟಕ ೫.೬ ಸದಸ್ಯರ ಉಳಿತಾಯ ಮತ್ತು ಸಾಲದ ವಿವರವನ್ನು ನೀಡುತ್ತದೆ.


ಕೋಷ್ಟಕ ೫.೬ ಸದಸ್ಯರ ಸಾಲ ವಿವರ

ಉದ್ದೇಶ	ಪಡೆದ ಸದಸ್ಯರು	ಸಾಲದ ಮೊತ್ತ	ಸಾಲದ ಶೇಕಡವಾರು
ಸ್ವ ಉದ್ಯೋಗ	೩೨	೨೯೪೦೦೦	೩೭.೬೪
ಶಿಕ್ಷಣ	೦೩	೫೦೦೦	೦೦.೬೪
ಗೃಹಸಾಲ	೧೭	೧,೩೧,೦೦೦	೧೬.೭೮
ಕೃಷಿಕಾಲ	೩೧	೨,೮೭,೦೦೦	೩೬.೭೫
ಇತರ	೧೦	೬೪೦೦೦	೮.೨೦
ಒಟ್ಟು	**೯೩**	**೭,೮೧,೦೦೦**	**೧೦೦**

ಸಂದರ್ಶಿಸಿದ ೧೦೦ ಮಂದಿ ಸದಸ್ಯರ ಪೈಕಿ ೯೩ ಸದಸ್ಯರು ಸಾಲ ಪಡೆದುಕೊಂಡಿದ್ದಾರೆ. ೭ ಮಂದಿ ಸಾಲ ಪಡೆದಿಲ್ಲ. ಅವರಲ್ಲಿ ೩ ಮಂದಿಗೆ ಸಾಲದ ಅವಶ್ಯಕತೆ ಇಲ್ಲ ಎನ್ನುವುದು ಮಾತುಕತೆಯ ಸಂದರ್ಭದಲ್ಲಿ ತಿಳಿದುಬಂತು. ಉಳಿದ ನಾಲ್ವರು ತಮ್ಮ ಭವಿಷ್ಯವನ್ನು ಉತ್ತಮಗೊಳಿಸಲು ಇನ್ನಷ್ಟು ಉಳಿತಾಯ ಮಾಡುವ ಯೋಜನೆ ಹೊಂದಿದವರು.

ಪ್ರಗತಿ ನಿಧಿ ಸಾಲವನ್ನು ಉಳಿತಾಯದ ಆಧಾರದಲ್ಲಿ ನೀಡಲಾಗುತ್ತಿದೆ. ೨೦೦೬ ರ ಡಿಸೆಂಬರ್‌ಗೆ ಸದಸ್ಯರು ಒಟ್ಟು ರೂ. ೨,೧೩,೧೧೦ ಉಳಿತಾಯ ಮಾಡಿದ್ದರು. ಅವರು ಪಡೆದ ಸಾಲದ ಮೊತ್ತ ರೂ. ೭,೮೧,೦೦೦. ಸಾಲದ ಮೊತ್ತ ಮತ್ತು ಉಳಿತಾಯದ ಅನುಪಾತ ೭೯:೨೧. ನಿಯಮದ ಪ್ರಕಾರ ಉಳಿತಾಯದ ೪ ಪಟ್ಟು ಸಾಲ ಪಡೆಯಬಹುದಾಗಿದೆ. ಸದಸ್ಯರು ಅಷ್ಟು ಸಾಲ ಪಡೆಯದೇ ಇರುವುದು ನಿಯಮದ ಉಲ್ಲಂಘನೆಯಾಗಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಸಾಲದ ಉದ್ದೇಶಗಳನ್ನು ಚಿತ್ರ ೫.೫ ತೋರಿಸುತ್ತದೆ.



ಚಿತ್ರ ೫.೫: ಸಾಲದ ಉದ್ದೇಶಗಳು

ಒಟ್ಟು ಸಾಲದಲ್ಲಿ ಶೇಕಡಾ ೩೮ ರಷ್ಟು ಸ್ವ ಉದ್ಯೋಗಕ್ಕಾಗಿ ಪಡೆದ ಸಾಲಗಳಾಗಿವೆ. ಇದು ಗ್ರಾಮೀಣಾಭಿವೃದ್ಧಿ ಯೋಜನೆಯ ಯಶಸ್ಸಿನ ಒಂದು ಸಂಕೇತ ಎಂದು



ಭಾವಿಸಬಹುದು. ಬಡತನ ಮತ್ತು ನಿರುದ್ಯೋಗ ನಿವಾರಣೆಯು ಗ್ರಾಮಾಭಿವೃದ್ಧಿ ಯೋಜನೆಗಳ ಮುಖ್ಯ ಉದ್ದೇಶ ವಾಗಿರುತ್ತದೆ. ಪ್ರಗತಿ ಬಂಧು ಸದಸ್ಯರು ಅತ್ಯಧಿಕ ಸಾಲವನ್ನು ಉದ್ಯೋಗ ನಿರ್ಮಾಣಕ್ಕಾಗಿ ಬಳಸಿರುವುದು ಅವರು ಯೊಜನೆಯ ಉದ್ದೇಶವನ್ನು ಅರ್ಥ ಮಾಡಿಕೊಂಡಿರುವುದಕ್ಕೆ ಸಾಕ್ಷಿ ಎನಿಸುತ್ತದೆ.

ಶೇಕಡಾ ೩೭ ರಷ್ಟು ಸಾಲ ಕೃಷಿ ಉದ್ದೇಶಗಳಿಗಾಗಿ ಬಳಕೆಯಾಗಿದೆ. ಗ್ರಾಮೀಣ ಭಾರತದ ಬೆನ್ನೆಲುಬು ಈಗಲೂ ಕೃಷಿ ಎಂಬುದನ್ನು ಇದು ಸಾಬೀತು ಪಡಿಸುತ್ತದೆ. ಸಂದರ್ಶಿಸಿದ ಸದಸ್ಯರಲ್ಲಿ ಶೇಕಡಾ ೯೬ ಮಂದಿ ಒಂದು ಎಕರೆಗಿಂತಲೂ ಕಡಿಮೆ ಭೂಮಿ ಹೊಂದಿದವರು. ಇಲ್ಲದಿದ್ದರೆ ಕೃಷಿ ಸಾಲ ತೆಗೆದುಕೊಂಡವರ ಪ್ರಮಾಣ ಇನ್ನೂ ಹೆಚ್ಚಾಗುವ ಸಂಭವವಿತ್ತು.

ಗೃಹ ನಿರ್ಮಾಣ ಮತ್ತು ದುರಸ್ತಿಗಾಗಿ ಶೇಕಡಾ ೧೮ ರಷ್ಟು ಮತ್ತು ಇವರ ಉದ್ದೇಶಗಳಿಗಾಗಿ ಶೇಕಡಾ ೭ರಷ್ಟು ಸಾಲದ ಬಳಕೆಯಾಗಿದೆ. ಅದರಲ್ಲಿ ಶಿಕ್ಷಣಕ್ಕಾಗಿ ಕೇವಲ ಶೇಕಡಾ ೦.೬೪ ರಷ್ಟು ಸಾಲ ತೆಗೆದುಕೊಳ್ಳಲಾಗಿದೆ. ಸದಸ್ಯರಲ್ಲಿ ಹೆಚ್ಚಿನವರು ಬಹುತೇಕವಾಗಿ ಅನಕ್ಷರಸ್ಥರಾಗಿರುವುದು ಮತ್ತು ಶಿಕ್ಷಣದ ಬಗ್ಗೆ ಅಜ್ಞಾನಿಗಳಾಗಿರುವುದು ಇದಕ್ಕೆ ಕಾರಣವಾಗಿದೆ.


ಕೋಷ್ಟಕ ೫.೭ ಸ್ವ ಉದ್ಯೋಗ ಸಾಲದ ವಿತರಣೆಯುನ್ನು ತೋರಿಸುತ್ತದೆ.

ಸದಸ್ಯರು	ಸ್ವ ಉದ್ಯೋಗ	ಸಾಲದ ಮೊತ್ತ	ಶೇಕಡಾ
೧೧	ಹೈನುಗಾರಿಕೆ	೯೫,೦೦೦	೩೧.೮೦
೨	ಕೋಳಿ ಫಾರಂ	೫೦೦ ೦೦	೧೬.೭೮
೧೧	ಪುಷ್ಪ ಉದ್ಯಮ	೭೪೦೦೦	೨೪.೮೩
೦೨	ಜೇನುಸಾಕಣೆ	೧೨೦೦೦	೦೪.೦೨
೦೨	ಅಂಗಡಿ	೩೫೦೦೦	೧೧.೭೪
೦೨	ಹಂದಿ ಸಾಕಣೆ	೨೦೦೦೦	೦೮.೦೫
೦೩	ತಿಂಡಿತಿನಿಸು/ಟೈಲರಿಂಗ್	೮೩೦೦	೦೨.೦೬
ಒಟ್ಟು ೩೨		೨೯೪೦೦೦	೧೦೦.೦೦

೩೨ ಮಂದಿ ಸ್ವ ಉದ್ಯೋಗಕ್ಕಾಗಿ ಒಟ್ಟು ರೂ. ೨,೯೪,೦೦೦ ಸಾಲ ಪಡೆದಿರುತ್ತಾರೆ. ಈ ಸಾಲದ ಪೈಕಿ ದೊಡ್ಡ ಮೊತ್ತ ಹೈನುಗಾರಿಕೆಗೆ ಮತ್ತು ಪುಷ್ಪೋದ್ಯಮಕ್ಕೆ ಬಳಕೆಯಾಗಿದೆ.

ಕೆದಿಲ ಮತ್ತು ಕಡೇಶ್ವಾಲ್ಯ ಗ್ರಾಮಗಳಲ್ಲಿ ಸ್ವ ಉದ್ಯೋಗ ನಿರ್ಮಾಣದಲ್ಲಿ ಇವು ಎರಡು ಸಾಲಗಳು ಸಿಂಹ ಪಾಲು ಪಡೆದಿವೆ.

ಚಿತ್ರ ೫.೬ ಸ್ವ ಉದ್ಯೋಗ ಸಾಲದ ಶೇಕಡಾವಾರು ವಿತರಣೆ ತೋರಿಸುತ್ತದೆ.



ಚಿತ್ರ ೫.೬: ಸಾಲದ ವಿತರಣೆ

ಸ್ವ ಉದ್ಯೋಗದ ಆಯ್ಕೆಯಲ್ಲಿ ಪ್ರಗತಿ ಬಂಧು ತಂಡದ ಸದಸ್ಯರು ಹೈನುಗಾರಿಕೆಗೆ ಪ್ರಥಮ ಪ್ರಾಶಸ್ತ್ಯವನ್ನು ನೀಡಿದ್ದಾರೆ. ಪುಷ್ಪೋದ್ಯಮಕ್ಕೆ ದ್ವಿತೀಯ ಪ್ರಾಶಸ್ತ್ಯ ಲಭ್ಯವಾಗಿದೆ. ಪುಷ್ಪೋದ್ಯಮದೊಡನೆ ಸಾಗುವ ಜೇನುಸಾಕಣೆಗೆ ಶೇಕಡಾ ೪ ರಷ್ಟು ಸಾಲ ಬಳಕೆಯಾಗಿದೆ. ಹಂದಿ ಮತ್ತು ಕೋಳಿಸಾಕಣೆಗಾಗಿ ಒಟ್ಟು ಶೇಕಡಾ ೨೪ ರಷ್ಟು ಸಾಲದ ವಿನಿಯೋಗವಾಗಿದೆ.

ಸಣ್ಣ ಮತ್ತು ಗೂಡಂಗಡಿ ನಿರ್ಮಾಣಕ್ಕಾಗಿ ಶೇ ೪ ರಷ್ಟು ಸಾಲವನ್ನು ಉಪಯೋಗಿಸಲಾಗಿದೆ. ತಿಂಡಿ ತಿನಿಸು ಮಾರಾಟ ಮತ್ತು ಟೈಲರಿಂಗ್ ವೃತ್ತಿಗಾಗಿ ಶೇಕಡ ೩ ರಷ್ಟು ಸಾಲ ಬಳಕೆಯಾಗಿದೆ.

ಈ ಸಾಲಗಳಿಗೆ ಶೇಕಡ ೧೧ ರಷ್ಟು ಬಡ್ಡಿದರ ವಿಧಿಸಲಾಗುತ್ತದೆ. ಕರ್ನಾಟಕ ಸರಕಾರದ ಸಾಲಮನ್ನಾ ಘೋಷಣೆಯ ಬಗ್ಗೆ ಪ್ರಗತಿಬಂಧು ಸದಸ್ಯರಲ್ಲಿ ಮಿಶ್ರ ಅಭಿಪ್ರಾಯಗಳಿವೆ. ಕೆಲವರು ತಮ್ಮ ಸಾಲ ಮನ್ನಾ ಆದೀತೆಂಬ ಆಶಾ ಭಾವನೆ ಹೊಂದಿದ್ದಾರೆ.



ವಾಸ್ತವಾಗಿ ಪ್ರಗತಿಬಂಧು ಸಾಲಗಳು ಮನ್ನಾ ಆಗಲು ಸಾಧ್ಯವಿಲ್ಲ. ಸರಕಾರದ ಇನ್ನೊಂದು ಘೋಷಣೆಯಾದ ಶೇಕಡ ೪ ರ ಸಾಲದ ಬಡ್ಡಿಯ ಬಗ್ಗೆ ರೈತರು ಆಶೆ ಕಂಗಳಿಂದ ಕಾಯುತ್ತಿದ್ದಾರೆ. ಆದರೆ ಪ್ರಗತಿಬಂಧು ಸಾಲವನ್ನು ಈ ಬಡ್ಡಿದರದಲ್ಲಿ ನೀಡಲು ಸಾಧ್ಯವಾಗುವುದಿಲ್ಲ. ಪ್ರಗತಿಬಂಧು ಸದಸ್ಯರಿಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡುವ ಅಗತ್ಯವಿದೆ ಎನ್ನುವುದು ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಗಮನಕ್ಕೆ ಬಂದಿರುತ್ತದೆ.

ಕಡೇಶ್ವಾಲ್ಯ ಮತ್ತು ಕೆದಿಲ ಗ್ರಾಮದ ಪ್ರಗತಿ ಬಂಧು ತಂಡಗಳು ಎರಡು ವರ್ಷಗಳ ಹಿಂದೆಯಷ್ಟೆ ಕಾರ್ಯಾರಂಭಮಾಡಿರುತ್ತವೆ. ಆದುದರಿಂದ ಸಾಲ ಮರುಪಾವತಿಯ ಬಗ್ಗೆ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ. ಸಾಲದ ಉಪಯೋಗಗಳ ಬಗ್ಗೆಯೂ ಖಚಿತವಾದ ಮಾಹಿತಿ ದೊರೆಯುತ್ತಿಲ್ಲ. ಆದರೆ ಕೃಷಿ ಅಭಿವೃದ್ಧಿಗೆಂದು ತೆಗೆದ ಸಾಲಗಳು ಬೇರೆ ಉದ್ದೇಶಕ್ಕೆ ಬಳಕೆಯಾಗಿರುವುದು ಸಂದರ್ಶನದ ಕಾಲದಲ್ಲಿ ತಿಳಿದ್ ಬಂತು. ಸದಸ್ಯರ ಬಡತನ, ಸಾಮಾಜಿಕ ಪ್ರತಿಷ್ಠೆಯನ್ನು ಉಳಿಸಿಕೊಳ್ಳಬೇಕಾದ ಅನಿರ್ವಾಯತೆ, ಅಭಿವೃದ್ಧಿ ಬಗೆಗಿನ ಅಜ್ಞಾನ ಇದಕ್ಕೆ ಕಾರಣವಾಗಿರುವಂತೆ ಕಂಡುಬರುತ್ತದೆ.

೫.೬ ಪ್ರಗತಿ ಬಂಧು ತಂಡಗಳ ಇತರ ಕಾರ್ಯಗಳು

ಕೆದಿಲ ಮತ್ತು ಕಡೇಶ್ವಾಲ್ಯಗಳಲ್ಲಿ ಪ್ರಗತಿ ಬಂಧು ತಂಡಗಳು ೨೦೦೪ ರಲ್ಲಿ ಅಸ್ತಿತ್ವಕ್ಕೆ ಬಂದವು. ಜನರನ್ನು ಒಗ್ಗೂಡಿಸುವುದು ಮತ್ತು ಒಗ್ಗಟ್ಟನ್ನು ಉಳಿಸುವುದು ಭಾರತದಂತಹ ಬಹುಸಂಸ್ಕೃತಿಯ ದೇಶದಲ್ಲಿ ಸುಲಭದ ಮಾತಲ್ಲ, ಆದಕ್ಕಾಗಿ ಪ್ರಗತಿ ಬಂಧು ತಂಡಗಳು ಕೆಲವು ಆರ್ಥಿಕೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತವೆ. ಇವು ಪ್ರಗತಿ ಬಂಧು ಸದಸ್ಯರ ವ್ಯಕ್ತಿತ್ವ ವಿಕಸನಕ್ಕೆ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿರುತ್ತವೆ.

- **ವರ್ಧಂತಿ ಆಚರಣೆ:** ಪ್ರಗತಿ ಬಂಧು ತಂಡಗಳು ವಾರ್ಷಿಕ ವರ್ಧಂತಿಯನ್ನು ತಮ್ಮದೇ ರೀತಿಯಲ್ಲಿ ಆಚರಿಸುತ್ತವೆ. ಈ ಅವಧಿಯಲ್ಲಿ ಸದಸ್ಯರ ಸುಪ್ತ ಪ್ರತಿಭೆಗಳು ಪ್ರಕಾಶಿಸಲು ವೇದಿಕೆ ದೊರೆಯುತ್ತದೆ. ಸದಸ್ಯರಿಗೆ ಸಭೆಗಳನ್ನು ಸಂಯೋಜಿಸಲು, ಕಾರ್ಯ ನಿರ್ವಹಿಸಲು ಅವಕಾಶಗಳು ಸಿಗುತ್ತವೆ. ಹಾಡು ಕುಣಿತ, ನಾಟಕ ಇತ್ಯಾದಿ ಮನೋರಂಜನಾ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಿ ಜೀವನದ ಏಕತಾನತೆಯನ್ನು ಹೋಗಲಾಡಿಸುತ್ತಾರೆ.

- **ಸಾಂಸ್ಕೃತಿಕ ಕಾರ್ಯಕ್ರಮಗಳು :** ಪ್ರಗತಿ ಬಂಧು ತಂಡದ ಸದಸ್ಯರು ಕೃಷ್ಣಾಷ್ಟಮಿ, ಗಣೇಶ ಚತುರ್ಥಿ, ಸ್ವಾತಂತ್ರ್ಯೋತ್ಸವ, ಗಾಂಧಿಜಯಂತಿ, ರಾಜ್ಯೋತ್ಸವ, ಗಣರಾಜ್ಯೋತ್ಸವ ಮುಂತಾದ ದಿನಗಳನ್ನು ಸಡಗರದಿಂದ ಆಚರಿಸುತ್ತಾರೆ. ಆಗ ಭಜನೆ, ಭಾವಗೀತೆ, ದೇಶಭಕ್ತಿಗೀತೆ ಮುಂತಾದ ಸ್ಪರ್ಧೆಗಳು ನಡೆಯುತ್ತವೆ ಅಲ್ಲದೆ ಹಗ್ಗಜಗ್ಗಾಟ, ರಂಗೋಲಿ, ಮಡಿಕೆ ಒಡೆಯುವುದು, ಸಂಗೀತ ಕುರ್ಚಿ ಮುಂತಾದ ಕ್ರೀಡೆಗಳನ್ನು ಏರ್ಪಡಿಸಲಾಗುತ್ತದೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ಸದಸ್ಯರು ತಮ್ಮ ಬದುಕನ್ನು ಸಹನೀಯವಾಗಿಸಿಕೊಳ್ಳುತ್ತಾರೆ. ಅಲ್ಲದೆ ಸದಸ್ಯರಲ್ಲದವರ ಜೊತೆ ಮುಕ್ತವಾಗಿ ಬೆರೆತು ಸಹಬಾಳ್ವೆಯ ಮಹತ್ವವನ್ನು ಅನುಭವಿಸಿ ತೋರಿಸುತ್ತಾರೆ.

- **ಮಾಹಿತಿ ನೀಡಿಕೆ:** ಪ್ರಗತಿ ಬಂಧು ತಂಡಗಳು ತಮ್ಮ ಸದಸ್ಯರಿಗೆ ಅಗತ್ಯವಿರುವ ಮಾಹಿತಿಯನ್ನು ಒದಗಿಸುತ್ತವೆ. ಈ ಮಾಹಿತಿಗಳನ್ನು ಕಾರ್ಯಕರ್ತರು ಸಂಗ್ರಹಿಸಿ ಒದಗಿಸುತ್ತಾರೆ. ಅಗತ್ಯಬಿದ್ದರೆ ಬೇರೆ ಸಂಪನ್ಮೂಲ ವ್ಯಕ್ತಿಗಳನ್ನು ಕರೆತಂದು ಉಪನ್ಯಾಸ ಮತ್ತು ಪ್ರಾತ್ಯಕ್ಷಿತೆ ಏರ್ಪಡಿಸಲಾಗುತ್ತದೆ. ಹೊಸ ಕೃಷಿ ವಿಧಾನ, ಮಿತವ್ಯಯಕಾರಿ ಉತ್ಪಾದನಾ ಚಟುವಟಿಕೆ, ಜೀವನೋಪಾಯದ ಹೊಸ ಹೊಸ ಮಾರ್ಗಗಳು, ಬದಲಾಗುತ್ತಿರುವ ಪ್ರಪಂಚ, ಇತ್ಯಾದಿಗಳ ಜೊತೆಗೆ ಆರೋಗ್ಯ ಸಂರಕ್ಷಣೆ, ಪರಿಸರ ಸಂರಕ್ಷಣೆ, ಶಿಕ್ಷಣ ಪ್ರಸರಣ ಇತ್ಯಾದಿಗಳ ಬಗ್ಗೆ ಹೊಸ ಆಲೋಚನೆಗಳು ಸದಸ್ಯರಲ್ಲಿ ಮೂಡುವಂತೆ ಒಕ್ಕೂಟವು ಪ್ರಯತ್ನವನ್ನು ಮಾಡುತ್ತದೆ.

೫.೭ ಸಂಶೋಧನೆಯ ಕಾಣ್ಕೆಗಳು

ಪ್ರಕೃತ ಅಧ್ಯಯನದ ಆಧಾರದ ಮೇಲೆ ಕೆಲವು ತೀರ್ಮಾನಗಳಿಗೆ ಬರಲಾಗಿದೆ.

೧. ಸದಸ್ಯರಲ್ಲಿ ಮುಕ್ಕಾಲು ಭಾಗ ಹಿಂದೂ ಧರ್ಮಕ್ಕೆ ಸೇರಿದವರು. ಮುಸಲ್ಮಾನರ ಮತ್ತು ಕ್ರಿಶ್ಚಿಯನ್ನರ ಪ್ರಮಾಣ ತೀರಾ ಕಡಿಮೆ ಇದೆ. ಇವೆರಡು ಮತಗಳ ಮಂದಿಗಳು ಪ್ರಗತಿ ಬಂಧುವಿನ ಸದಸ್ಯರಾಗಲು ಮೀನ ಮೇಷ ಎಣಿಸುತ್ತಿದ್ದಾರೆ.

೨. ಇಪ್ಪತ್ತೈದು ವರ್ಷದ ಒಳಗಿನ ಪುರುಷರು ಪ್ರಗತಿ ಬಂಧು ಚಳುವಳಿಯಿಂದ ದೂರ ಉಳಿದಿದ್ದಾರೆ. ಹಾಗೆಯೇ ೫೦ ವರ್ಷಕ್ಕಿಂತ ಮೇಲಿನ ಪುರುಷರು ಮತ್ತು ಮಹಿಳೆಯರು ಈ ಚಳುವಳಿಯಲ್ಲಿ ಆಸಕ್ತಿ ವಹಿಸುತ್ತಿಲ್ಲ.

೩. ಪುರುಷರಿಗೆ ಹೋಲಿಸಿದರೆ ಮಹಿಳಾ ತಂಡಗಳ ಮತ್ತು ಸದಸ್ಯರ ಸಂಖ್ಯೆ ಇವೆರಡು ಗ್ರಾಮಗಳಲ್ಲಿ ಬಹಳ ಕಡಿಮೆ ಇದೆ. ಮಹಿಳೆಯರು ಪ್ರಗತಿ ಬಂಧು ಚಳುವಳಿಯತ್ತ ಪುರುಷರಷ್ಟು ಆಕರ್ಷಿತರಾಗಿಲ್ಲ.

೪. ಪ್ರಗತಿ ಬಂಧು ಚಳುವಳಿಯಲ್ಲಿ ಒಳಗೊಂಡಿರುವವರಲ್ಲಿ ಬಹುತೇಕರು ಶ್ರೇಣೀಕೃತ ಸಮಾಜ ವ್ಯವಸ್ಥೆಯ ಕೆಳ ಸ್ತರದವರು. ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿಯವರು ಪ್ರಗತಿ ಬಂಧು ಚಳುವಳಿಯಲ್ಲಿ ಭಾಗವಹಿಸಲು ಹಿಂದೇಟು ಹಾಕುತ್ತಿದ್ದಾರೆ.

೫. ಕೆಲವು ಪ್ರಗತಿ ಬಂಧು ಸದಸ್ಯರು ಸ್ವಸಹಾಯ ಗುಂಪುಗಳ ಮತ್ತು ಸ್ತ್ರೀಶಕ್ತಿ ಗುಂಪುಗಳ ಸದಸ್ಯರಾಗಿದ್ದಾರೆ. ಈ ರೀತಿಯ ದ್ವಿಸದಸ್ಯತನದಿಂದಾಗಿ ಅವರು ವಾರದಲ್ಲಿ ಎರಡು ದಿನಗಳನ್ನು ಸಭೆಗಾಗಿ ಕಳೆದುಕೊಳ್ಳಬೇಕಾಗುತ್ತದೆ. ವಾರದ ರಜೆಯನ್ನು ತೆಗೆದುಕೊಂಡರೆ ಒಟ್ಟು ಮೂರು ದಿನ ಸುಮ್ಮನೆ ವ್ಯರ್ಥವಾಗಿ ಹೋಗುತ್ತದೆ. ಪರಿಣಾಮವಾಗಿ ಅವರ ಗಳಿಕೆ ಬಹಳ ಕಡಿಮೆಯಾಗುತ್ತದೆ.

೬. ಹೆಬ್ಬೆಟ್ಟು ಮಹಾಶಯರನ್ನು ಸೇರಿಸಿದರೆ ಅಶಿಕ್ಷಿತರ ಪ್ರಮಾಣ ಶೇಕಡ ೭೬ ರಷ್ಟಾಗುತ್ತದೆ. ಯಾವುದೇ ಅಭಿವೃದ್ಧಿ ಯೋಜನೆಗಳು ಅನಕ್ಷರಸ್ತರು ಬಹುಮತೀಯರಾಗಿರುವಲ್ಲಿ ಯಶಸ್ವಿಯಾಗುವುದು ತೀರಾ ಕಷ್ಟಸಾಧ್ಯ.

೭. ಸದಸ್ಯರಲ್ಲಿ ಶೇಕಡ ೫೪ ಮಂದಿಗೆ ಸ್ವಂತ ನೀರಿನ ಮೂಲ ಇಲ್ಲ. ಕುಡಿಯುವ ನೀರಿಗೆ ಅನ್ಯರನ್ನು ಅವರು ಅವಲಂಬಿಸಬೇಕಾಗಿ ಬಂದಿದೆ.

೮. ಸದಸ್ಯರಲ್ಲಿ ಸ್ವಯಂಚಾಲೀ ಸ್ವಂತ ವಾಹನ ಹೊಂದಿರುವವರ ಸಂಖ್ಯೆ ಕೇವಲ ೭ ಮಾತ್ರ ಉಳಿದ ಸದಸ್ಯರು ಕನಿಷ್ಠ ದ್ವಿಚಕ್ರ ವಾಹನ ಹೊಂದುವುದು ಕೂಡಾ ಕನಸಿನ ಮಾತಾಗಿದೆ.

೯. ಸದಸ್ಯರಲ್ಲಿ ಶೇಕಡ ೭೨ ಮಂದಿ ಸ್ವಂತ ಸಂಡಾಸನ್ನು ಹೊಂದಿದ್ದಾರೆ. ಆದರೆ ನೀರಿನ ಸಮಸ್ಯೆಯಿಂದಾಗಿ ಅವರು ಬಹಿರಂಗವಾಗಿ ಬಹಿರ್ದೆಸೆಗೆ ಹೋಗುತ್ತಾರೆ. ಇದು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ.

೧೦. ಎಲ್ಲಾ ಸದಸ್ಯರಿಗೆ ಸ್ವಂತ ಮನೆ ಇದೆ. ಆದರೆ ಬಹುತೇಕ ಮನೆಗಳ ಪರಿಸ್ಥಿತಿ ಏನೇನೂ ಚೆನ್ನಾಗಿಲ್ಲ. ಬಿದಿರಗಳಗಳನ್ನು ಅಥವಾ ಈಚಲು ಮರದ ಪಕ್ಕಾಸನ್ನು ಮಾಡಿ ಛಾವಣಿ

ನಿರ್ಮಿಸಿಕೊಂಡಿದ್ದಾರೆ. ದೊಡ್ಡ ಗಾಳಿ ಬಂದರೆ ಛಾವಣಿ ಕುಸಿಯುವ ಭೀತಿ ಇದೆ. ಅನೇಕ ಸದಸ್ಯರ ಮನೆಯ ನೆಲ ಸಿಮೆಂಟನ್ನು ಕಂಡಿಲ್ಲ. ವಾತಾಯನ ವ್ಯವಸ್ಥೆಯಂತೂ ಏನೇನೂ ಚೆನ್ನಾಗಿಲ್ಲ.

೧೧. ಸದಸ್ಯರಲ್ಲಿ ಶೇಕಡ ೯೬ ಮಂದಿ ಒಂದು ಎಕರೆಗಿಂತ ಕಡಿಮೆ ಭೂಮಿ ಹೊಂದಿದ್ದಾರೆ. ಭೂಮಿಯ ಅಸಮಾನ ವಿತರಣೆ ಇವೆರಡು ಹಳ್ಳಿಗಳಲ್ಲಿ ಢಾಳಾಗಿ ಎದ್ದು ಕಾಣಿಸುತ್ತಿದೆ.

೧೨. ಸದಸ್ಯರು ತೆಗೆದುಕೊಂಡ ಸಾಲ ಉದ್ದೇಶಕ್ಕನುಗುಣವಾಗಿ ಬಳಕೆಯಾಗುತ್ತಿಲ್ಲ. ಮುಖ್ಯವಾಗಿ ನೀರಾವರಿ ಉದ್ದೇಶಕ್ಕಾಗಿ ತೆಗೆದುಕೊಂಡ ಸಾಲದಲ್ಲಿ ಈ ಅವ್ಯವಸ್ಥೆ ಅಧಿಕವಾಗಿದೆ.

೧೩. ರಾಜಕೀಯ ಘೋಷಣೆಗಳಿಂದ ಸಾಲಮನ್ನಾ ಮತ್ತು ಬಡ್ಡಿದರ ಇಳಿತ ಪ್ರಗತಿಬಂಧು ಸದಸ್ಯರಲ್ಲಿ ಮಿಶ್ರ ಪ್ರತಿಕ್ರಿಯೆಯನ್ನು ಉಂಟುಮಾಡಿದೆ. ತಮ್ಮ ಸಾಲ ಮನ್ನಾ ಆದೀತೆಂದು, ಇನ್ನು ಮುಂದೆ ಕಡಿಮೆ ಬಡ್ಡಿ ದರದಲ್ಲಿ ಸಾಲಸಿಕ್ಕೀತೆಂದು ಅನೇಕ ಸದಸ್ಯರು ಕಾದು ಕೂತಿದ್ದಾರೆ.

ಉಲ್ಲೇಖಗಳು

೧. ಸಂದರ್ಶನ ಕಾಲದಲ್ಲಿ ಹಿರಿಯರೊಬ್ಬರ ನೀಡಿದ ಮಾಹಿತಿ

೨. ದೇವಾಲಯಗಳಿಗೆ ಮತ್ತು ಊರಿನ ಹೆಸರುಗಳಿಗೆ ಸಂಬಂಧಪಟ್ಟಂತೆ ಸಾಮನ್ಯವಾಗಿ ಎರಡು ಅಭಿಪ್ರಾಯಗಳಿವೆ.

೩. ಸಂದರ್ಶನ ಕಾಲದಲ್ಲಿ ಹಿರಿಯರು ಹೇಳಿದ ಮಾತು

ಅಧ್ಯಾಯ ೬

ಸಲಹೆಗಳು ಮತ್ತು ಉಪಸಂಹಾರ

೬. ಸಲಹೆಗಳು ಮತ್ತು ಉಪಸಂಹಾರ

ಬಂಟ್ವಾಳ ತಾಲೂಕಿಗೆ ಶ್ರೀಕ್ಷೇತ್ರ ಧರ್ಮಸ್ಥಳದ ಪ್ರಗತಿಬಂಧು ಯೋಜನೆ ಕಾಲಿರಿಸಿ ೨ ವರ್ಷಗಳು ಉರುಳಿವೆ. ಯಾವುದೇ ಒಂದು ಸಂಘಟನೆ ಅಥವಾ ಚಳುವಳಿಯ ಪರಾಮರ್ಶೆಯನ್ನು ಕೇವಲ ೨ ವರ್ಷಗಳ ಸಾಧನೆ ಅಥವಾ ವೈಫಲ್ಯಗಳ ಆಧಾರದಲ್ಲಿ ಕರಾರುವಾಕ್ಕಾಗಿ ಮಾಡಲು ಸಾಧ್ಯವಾಗುವುದಿಲ್ಲ. ಆದರೆ ಬೆಳೆಯ ಸಿರಿ ಮೊಳಕೆಯಲ್ಲಿ ಎಂಬಂತೆ ಪ್ರಗತಿಬಂಧು ಚಳುವಳಿ ತೆಗೆದುಕೊಳ್ಳಬಹುದಾದ ಆಯಾಮಗಳನ್ನು ಲಭ್ಯವಿರುವ ದತ್ತಾಂಶಗಳಿಂದ ಊಹಿಸಬಹುದಾಗಿದೆ. ಚಳುವಳಿಯ ಯಶಸ್ಸಿಗೆ ಈ ಅಧ್ಯಾಯನದಲ್ಲಿ ಹಲವಾರು ಸಲಹೆಗಳನ್ನು ಮಾಡಲಾಗಿದೆ.

೬.೧ ಸದಸ್ಯತನದ ಬಗೆಗಿನ ಸಲಹೆಗಳು

೧. ಬಂಟ್ವಾಳ ತಾಲೂಕಿನಲ್ಲಿ ಸ್ವಸಹಾಯ ಗುಂಪುಗಳು ಮತ್ತು ಸ್ತ್ರೀಶಕ್ತಿ ಗುಂಪುಗಳು ಪ್ರಗತಿಬಂಧು ಗುಂಪುಗಳಿಂತ ಮೊದಲೇ ರೂಪುಗೊಂಡಿವೆ. ಸಹಜವಾಗಿ ಪ್ರಗತಿಬಂಧುವಿನತ್ತ ಜನರು ಹೆಚ್ಚು ಆಕರ್ಷಿತರಾಗಿಲ್ಲ. ಆದರೆ ತಾಲೂಕಿನಲ್ಲಿ ಬಡವರು ಮತ್ತು ಕಡುಬಡವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇವರನ್ನು ಗುರುತಿಸಿ ಪ್ರಗತಿಬಂಧುವಿನ ಮಹತ್ವದ ಬಗ್ಗೆ ಮಾಹಿತಿ ನೀಡಿ ತಂಡ ರಚಿಸಲು ಪ್ರೇರೇಪಿಸಬೇಕಾಗಿದೆ.

೨. ಇಪ್ಪತ್ತೈದು ವರ್ಷಗಳ ಒಳಗಿನ ಯುವಕರು ನಿರುದ್ಯೋಗಿ ಮತ್ತು ಬಡ ಯುವಕರು ಪ್ರಗತಿಬಂಧು ಚಳುವಳಿಯಿಂದ ವಿಮುಖರಾಗಿದ್ದಾರೆ. ಯವ್ವನ ತುಂಬಿರುವ ಮತ್ತು ಜವಾಬ್ದಾರಿ ಎಂದರೆ ಏನೆಂದು ಗೊತ್ತಿರದ ಈ ವಯೋಮಾನದಲ್ಲಿ ಭವಿಷ್ಯದ ಬಗ್ಗೆ ಯುವಕರು ಯೋಚಿಸುವಂತೆ ಮಾಡಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಪ್ರಗತಿಬಂಧು ಕ್ಷೇತ್ರ ಸೇವಾನಿರತರ ಎದುರು ಬಲು ದೊಡ್ಡ ಸವಾಲು ಇದೆ. ಅದನ್ನು ಸಮಾಧಾನವಾಗಿ ನಿಭಾಯಿಸಿ ಅರ್ಹರು ಪ್ರಗತಿಬಂಧುವಿನ ಪ್ರಯೋಜನವನ್ನು ಪಡೆಯುವಂತೆ ಮಾಡಬೇಕಾಗಿದೆ.

೩. ಪ್ರಗತಿಬಂಧು ಚಳುವಳಿಯಲ್ಲಿ ಐವತ್ತು ವರ್ಷಗಳ ಮೇಲಿನವರ ಪಾಲ್ಗೊಳ್ಳುವಿಕೆ ತೀರಾ ನಗಣ್ಯವಾಗಿದೆ. ಭಾರತದಲ್ಲಿ ಪುರುಷರ ಸರಾಸರಿ ವಯೋಮಿತಿ ೨೦೦೧ರ ಜನಗಣತಿಯ ಪ್ರಕಾರ ೬೪ ವರ್ಷ ಮತ್ತು ಮಹಿಳೆಯರ ಸರಾಸರಿ ವಯೋಮಿತಿ ೬೮ ವರ್ಷ. ಆರೋಗ್ಯ ಸವಲತ್ತುಗಳ ಲಭ್ಯತೆಯಿಂದಾಗಿ ಆಯುರ್ಮಾನದಲ್ಲಿ ಹೆಚ್ಚಳವಾಗಿದೆ. ಹಳ್ಳಿಗಳಲ್ಲಿ ಸಾಕಷ್ಟು ಶತಾಯುಷಿಗಳು ತಮ್ಮ ಕಣ್ಣೆದುರು ಆರೋಗ್ಯದಿಂದ ಓಡಾಡಿಕೊಂಡಿರುವುದನ್ನು ನಾವು ಕಾಣುತ್ತೇವೆ. ಐವತ್ತು ವರ್ಷಕ್ಕಿಂತ ಹೆಚ್ಚಿನವರ ಮತ್ತು ಹಿರಿಯ ನಾಗರಿಕರ ಒಳಗೊಳ್ಳುವಿಕೆಯಿಂದ ಪ್ರಗತಿಬಂಧು ಚಳುವಳಿ ಯಶಸ್ವಿಯಾಗುತ್ತದೆ. ದಾರ್ಶನಿಕ ಡಿ.ವಿ. ಗುಂಡಪ್ಪರವರು ಹೇಳಿದಂತೆ "ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು, ಹೊಸ ಯುಕ್ತ ಹಳೇ ತತ್ವ ಒಡಕೂಡಿ ಧರ್ಮ, ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ಜಸವು ಜನ ಜೀವನಕ್ಕೆ".

೪. ಪ್ರಗತಿಬಂಧು ಗುಂಪುಗಳಲ್ಲಿ ಮುಸಲ್ಮಾನರ ಮತ್ತು ಕ್ರೈಸ್ತರ ಸಂಖ್ಯೆ ಗಣನೀಯವಾಗಿಲ್ಲ. ಇದಕ್ಕೆ ಈಗಾಗಲೇ ತಾಲೂಕಿನಲ್ಲಿ ಕಾರ್ಯಾಚರಿಸುತ್ತಿರುವ ಸ್ವಸಹಾಯ ಗುಂಪುಗಳ ಯಶಸ್ಸು ಕಾರಣವಾಗಿದೆ. ಎರಡನೆಯದಾಗಿ ಹೊಸ ಯೋಜನೆಗಳು ಬಂದಾಗ ಸಹಜವಾಗಿ ಹಿಂಜರಿಯುವ ಭಾರತೀಯ ಮನಸ್ಸು ಮತ್ತು ಅಂತಹ ಯೋಜನೆ ಧಾರ್ಮಿಕ ಪೀಠವೊಂದರಿಂದ ಆರಂಭವಾದಾಗ ಅನ್ಯಧರ್ಮೀಯರಲ್ಲಿ ಮೂಡುವ ಅಳುಕು ಕೂಡಾ ಇದಕ್ಕೆ ಕಾರಣವಾಗಿದೆ. ಇದು ಅನಕ್ಷರತೆ ಮತ್ತು ಅಜ್ಞಾನದ ಪ್ರತಿಫಲವಾಗಿರುತ್ತದೆ. ಈ ಹಿಂಜರಿಕೆಯನ್ನು ಕ್ಷೇತ್ರ ಕಾರ್ಯಕರ್ತರು ಸ್ನೇಹ ಮತ್ತು ಪ್ರೀತಿಯ ಮೂಲಕ ಹೋಗಲಾಡಿಸಿ ಪ್ರಗತಿಬಂಧು ಚಳುವಳಿಯನ್ನು ಯಶಸ್ವಿಗೊಳಿಸಬೇಕಿದೆ.

೫. ತಾಲೂಕಿನ ಬಡವ ಮತ್ತು ಕಡುಬಡವರಲ್ಲಿ ಸ್ವಸಹಾಯ ಗುಂಪುಗಳ ಅಥವಾ ಪ್ರಗತಿಬಂಧು ಗುಂಪುಗಳ ಸದಸ್ಯರಾಗದವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸರಕಾರ ಆಗಾಗ ಘೋಷಿಸುವ ಜನಪ್ರಿಯ ಯೋಜನೆಗಳನ್ನು ಇಂತವರನ್ನು ಆಲಸಿಯನ್ನಾಗಿ ಮತ್ತು ಜವಾಬ್ದಾರಿ ರಹಿತರನ್ನಾಗಿ ಮಾಡಿವೆ. ಸರಕಾರ ಬಡತನ ಮತ್ತು ನಿರುದ್ಯೋಗ ನಿವಾರಣೆಗಾಗಿ ಆಕರ್ಷಕ ಯೋಜನೆಯನ್ನು ಕೈಗೆತ್ತಿಕೊಳ್ಳುವುದನ್ನು ಅಭಿವೃದ್ಧಿಯ

ದೃಷ್ಟಿಯಿಂದ ಆಕ್ಷೇಪಿಸುವಂತಿಲ್ಲ. ಆದರೆ ಇಂತಹ ಯೋಜನೆಗಳ ಫಲಾನುಭವಿಗಳು ಸ್ವಸಹಾಯ ಗುಂಪುಗಳ ಅಥವಾ ಪ್ರಗತಿ ಬಂಧುಗುಂಪುಗಳ ಸದಸ್ಯರಾಗಬೇಕು ಎಂಬ ನಿಯಮ ಕಡ್ಡಾಯವಾಗಿರಬೇಕು. ಆಗ ಎಲ್ಲಾ ಫಲಾನುಭವಿಗಳಲ್ಲಿ ದುಡಿಯುವ ಸಂಸ್ಕೃತಿ ಮೂಡುತ್ತದೆ. ಕಾಯಕವೇ ಕೈಲಾಸ ಎಂಬ ಮಾತು ಅರ್ಥ ಕಂಡುಕೊಳ್ಳುವುದು ಆಗ ಮಾತ್ರ.

೬. ಪ್ರಗತಿಬಂಧು ತಂಡದ ಸದಸ್ಯರುಗಳು ಸ್ವಸಹಾಯಗುಂಪುಗಳ ಅಥವಾ ಸ್ತ್ರೀ ಶಕ್ತಿ ಗುಂಪುಗಳ ಸದಸ್ಯರಾಗಿರುವುದು ಸರ್ವಸಾಮಾನ್ಯವಾಗಿದೆ. ಈ ರೀತಿಯ ದ್ವಿ ಸದಸ್ಯತನದಿಂದಾಗಿ ಅವರು ಎರಡು ಗುಂಪುಗಳ ಸಭೆಗಳಿಗೆ ವಾರದಲ್ಲಿ ಎರಡು ದಿನಗಳನ್ನು ಮತ್ತು ವಾರದ ರಜಾದಿನವನ್ನು – ಗಳಿಕೆ ಇಲ್ಲದೆ ಕಳೆಯುವಂತಾಗಿದೆ. ಅವರ ಪಾಲಿಗೆ ದುಡಿಮೆಗೆ ಸಿಗುವುದು ವಾರದಲ್ಲಿ ನಾಲ್ಕು ದಿನಗಳು ಮಾತ್ರ. ಅದರಲ್ಲಿ ಹಬ್ಬ ಹರಿದಿನಗಳು, ಮದುವೆ, ಜಾತ್ರೆ ಇತ್ಯಾದಿಗಳು ಬಂದರೆ ದುಡಿಮೆಯ ದಿನಗಳು ಮತ್ತಷ್ಟು ಕುಂಠಿತವಾಗುತ್ತವೆ. ಪ್ರತಿವಾರ ಅವರು ಒಂದು ಗುಂಪಿಗೆ ಕನಿಷ್ಠ ರೂ. ೧೦ ರಂತೆ ಉಳಿತಾಯ ಠೇವಣಿಗೆ ಹಣ ನೀಡಬೇಕಾಗುತ್ತದೆ. ದುಡಿಮೆಯ ದಿನಗಳು ಕಡಿಮೆಯಾದಾಗ ಗಳಿಕೆ ಕುಸಿಯುತ್ತದೆ. ಈ ದ್ವಿಸದಸ್ಯತನದ ಸಮಸ್ಯೆಗೆ ತಕ್ಷಣ ಪರಿಹಾರ ಕಂಡುಕೊಳ್ಳಬೇಕಾಗಿದೆ. ಒಂದು ಗುಂಪಿನಲ್ಲಿ ಇರುವವರು ಇನ್ನೊಂದು ಗುಂಪಿನ ಸದಸ್ಯರಾಗದ ಹಾಗೆ ಕಡ್ಡಾಯವಾಗಿ ನೋಡಿಕೊಳ್ಳಬೇಕಾಗಿದೆ.

೬.೨ ಮೂಲ ಸೌಕರ್ಯಗಳ ಬಗೆಗಿನ ಸಲಹೆಗಳು

೧. ಪ್ರಗತಿಬಂಧು ಸದಸ್ಯರು ಎಲ್ಲರೂ ಸ್ವಂತ ಮನೆಯನ್ನು ಹೊಂದಿದ್ದಾರೆ. ಬಹುತೇಕರದು ಪಿತ್ರಾರ್ಜಿತವಾದ ಮನೆ. ಅವುಗಳನ್ನು ದುರಸ್ತಿ ಮಾಡಬೇಕಾದ ಅನಿವಾರ್ಯತೆ ಇದೆ. ಬಿದಿರಿನ, ಈಚಲುಮರದ ಛಾವಣಿ, ತೀರಾ ಹಳೆಯದಾದ ಹಂಚುಗಳು, ಮಣ್ಣಿನ ಗೋಡೆ ಮತ್ತು ಬಿರಿದ ನೆಲ ಮಳೆಗಾಲದಲ್ಲಿ ಪ್ರಾಣಭೀತಿಯಿಂದ ಬದುಕಬೇಕಾದ ದುರ್ಭರ ಪರಿಸ್ಥಿತಿಯನ್ನು ನಿರ್ಮಾಣ ಮಾಡಿವೆ. ಅಧ್ಯಯನ ಕಾಲದಲ್ಲಿ ಶೇ. ೬೦ ಕ್ಕಿಂತ ಹೆಚ್ಚು ಮಂದಿ ಹೊಸ ಮನೆಯನ್ನು ನಿರ್ಮಿಸುವ ಕನಸನ್ನು ಕಾಣುತ್ತಿರುವುದು ಗಮನಕ್ಕೆ ಬಂತು. ಆದರೆ ಏರುತ್ತಿರುವ ವೆಚ್ಚದ ಸಂದರ್ಭದಲ್ಲಿ ಹೊಸ ಮನೆಯನ್ನು ನಿರ್ಮಿಸುವುದು ಸುಲಭದ ಮಾತಲ್ಲ.

ಪ್ರಗತಿಬಂಧು ಚಳುವಳಿಯು ಮನೆ ನಿರ್ಮಾಣಕ್ಕೆ ಮೊದಲ ಆದ್ಯತೆ ನೀಡಬೇಕಾದ ಅಗತ್ಯವಿದೆ. ಫಲಾನುಭವಿಗಳಲ್ಲಿ ಕೆಲವರ ಮನೆಗಳಂತೂ ಎಂತಹ ಶಿಥಿಲವಾಸ್ಥೆಯಲ್ಲಿ ಇದೆ ಎಂದರೆ ಅವರು ಅದು ಹೇಗೆ ಅದರ ಒಳಗಡೆ ದಿನ ಕಳೆಯುತ್ತಾರೆ ಎಂಬ ಆಶ್ಚರ್ಯವನ್ನು ಅವು ಮೂಡಿಸುತ್ತವೆ. "ಬೆಚ್ಚನೆಯ ಮನೆ ಇರಲು, ವೆಚ್ಚಕ್ಕೆ ಹೊನ್ನಿರಲು, ಇಚ್ಛೆಯನ್ನರಿತು ನಡೆವ ಸತಿ ಇರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ".

೨. ಕುಡಿಯುವ ನೀರಿನ ಸಮಸ್ಯೆ, ಮುಖ್ಯವಾಗಿ ಬೇಸಿಗೆಯ ದಿನಗಳಲ್ಲಿ, ಇವರನ್ನು ಭಾದಿಸುತ್ತದೆ. ಸ್ವಂತ ಭೂಮಿಯನ್ನು ಹೊಂದಿರುವವರ ಪ್ರಮಾಣ ಅರ್ಧಾಂಶಕ್ಕಿಂತಲೂ ಕಡಿಮೆ. ಬೇಸಗೆಯಲ್ಲಿ ಈ ಭೂಮಿಗಳಲ್ಲಿ ನೀರಿನ ಮಟ್ಟ ತೀವ್ರವಾಗಿ ಕುಸಿಯುತ್ತದೆ. ಪ್ರಗತಿಬಂಧು ಕಾರ್ಯಕರ್ತರು ಮಳೆ ಕೊಯ್ಲು, ಜಲ ಮರುಪೂರಣ, ಕಿರುಒಡ್ಡುಗಳ ನಿರ್ಮಾಣ, ಛಾವಣಿ ನೀರಿನ ಬಳಕೆ ಇತ್ಯಾದಿಗಳ ಬಗ್ಗೆ ಸದಸ್ಯರಿಗೆ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಬೇಕಾಗಿದೆ. ಈ ಕಾರ್ಯಕ್ರಮಗಳನ್ನು ಕಡ್ಡಾಯವೆಂದು ಬಿಂಬಿಸಬೇಕಾಗಿದೆ. ಆಗ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಸಾಧ್ಯವಿದೆ.

೩. ಅಧ್ಯಯನ ಸಂದರ್ಭದಲ್ಲಿ ಶೇಕಡಾ ೭೬ ರಷ್ಟು ಮನೆಗಳಲ್ಲಿ ಸಂಡಾಸು ಇರುವುದು ವೇದ್ಯವಾಯಿತು. ಆದರೆ ನೀರಿನ ಕೊರತೆಯಿಂದಾಗಿ, ಮುಖ್ಯವಾಗಿ ಬೇಸಿಗೆ ಕಾಲದಲ್ಲಿ ಸಂಡಾಸುಗಳ ಬಳಕೆ ತೀರಾ ಅಪರೂಪ ಎನಿಸಿಬಿಟ್ಟಿದೆ. ಶೇ. ೯೦ಕ್ಕಿಂತ ಹೆಚ್ಚು ಮಂದಿ ಎಲ್ಲಿ ಬೇಕೆಂದರಲ್ಲಿ ಮಲಮೂತ್ರ ವಿಸರ್ಜನೆ ಮಾಡಿ ವಾತಾವರಣ ಮಾಲಿನ್ಯಕ್ಕೆ ಕಾರಣರಾಗುತ್ತಾರೆ. ಬಡವರಿಗೆ ಮತ್ತು ಕಡುಬಡವರಿಗೆ ಸಂಡಾಸು ನಿರ್ಮಾಣಕ್ಕೆ ಸರಕಾರ ನೆರವಾಗುತ್ತದೆ. ಸಂಡಾಸು ಸಲಕರಣೆಗಳನ್ನು ತೆಗೆದುಕೊಂಡು ಹೋದ ಕೆಲವರು ಅವುಗಳನ್ನು ಬೇರೆಯವರಿಗೆ ಮಾರಿದ ಉದಾಹರಣೆಗಳಿವೆ. ಈ ಬಗ್ಗೆ ಪ್ರಗತಿಬಂಧು ಕಾರ್ಯಕರ್ತರು ಜನರ ಮನವನ್ನು ಒಲಿಸಿ ಸಂಡಾಸು ನಿರ್ಮಾಣ ಮತ್ತು ಅದರ ಕಡ್ಡಾಯ ಬಳಕೆಗೆ ಅವರನ್ನು ಪ್ರೇರೆಪಿಸಬೇಕಾಗಿದೆ. ಮನೆಗಳಲ್ಲಿ ಸಂಡಾಸು ಇಲ್ಲದವರು ಚುನಾವಣೆಗಳಲ್ಲಿ ಸ್ಪರ್ಧಿಸುವಂತಿಲ್ಲ ಮತ್ತು ಮತದಾನ ಮಾಡುವಂತಿಲ್ಲ ಎಂಬ ಕಾನೂನು ಜಾರಿಗೆ ಬಂದು ಕಟ್ಟುನಿಟ್ಟಾಗಿ

ಅನುಷ್ಠಾನಗೊಳ್ಳಬೇಕಾಗಿದೆ. ಇದು ಸರಕಾರ ಮಾಡಬೇಕಾದ ಕೆಲಸ. ಆದರೆ ಶ್ರೀಕ್ಷೇತ್ರ ಗ್ರಾಮೀಣಾಭಿವೃದ್ಧಿ ಯೋಜನೆಯ ಅಧಿಕಾರಿಗಳು ಸರಕಾರಕ್ಕೆ ಇದನ್ನು ಮನವರಿಕೆ ಮಾಡಿಕೊಟ್ಟರೆ ಕಡ್ಡಾಯ ಸಂಡಾಸು ಯೋಜನೆ ಯಶಸ್ವಿಯಾಗಲಿದೆ.

೪. ಸಂದರ್ಶನಕ್ಕೆ ಆಯ್ದ ಫಲಾನುಭವಿಗಳಲ್ಲಿ ಶೇಕಡಾ ೨೮ ಮಂದಿ ಅನಕ್ಷರಸ್ಥರಾದರೆ ಶೇಕಡಾ ೪೮ ಮಂದಿ ಪ್ರಾಥಮಿಕ ಹಂತದ ಶಿಕ್ಷಣ ಪಡೆದವರು. ಕಾಲಧರ್ಮಕ್ಕೆ ಅನುಗುಣವಾಗಿ ಪ್ರಾಥಮಿಕ ಹಂತದ ಶಿಕ್ಷಣ ಪಡೆದವರು ಕೂಡಾ ರುಜು ಹಾಕುವುದನ್ನು ಬಿಟ್ಟರೆ ಅನಕ್ಷರಸ್ಥರೇ ಆಗಿಬಿಟ್ಟಿದ್ದಾರೆ. ಅನಕ್ಷರಸ್ಥರಿಗೆ ಹೊಸ ವಿಷಯವಾಗಿ ಮನವರಿಕೆ ಮಾಡಿಕೊಡುವುದು ದೊಡ್ಡ ಕಷ್ಟದ ಕೆಲಸ. ವಾರದ ಶ್ರಮದಾನದ ದಿನಗಳಲ್ಲಿ ಕನಿಷ್ಠ ಎರಡು ಘಂಟೆ ಕಲಿಕೆಗೆ ಮೀಸಲಿಡಬೇಕಾದ ಅಗತ್ಯವಿದೆ. ಬರೆಯಲು ಮತ್ತು ಓದಲು ಗುಂಪಿನ ಸದಸ್ಯರುಗಳಿಗೆ ಪ್ರೇರೇಪಣೆ ಒದಗಿಸಬೇಕಾಗಿದೆ. ಇದಕ್ಕೆ ಆಯಾ ಪ್ರದೇಶಗಳ ನಿವೃತ್ತ ಶಿಕ್ಷಕರನ್ನು ಗೌರವ ನಿರ್ದೇಶಕರನ್ನಾಗಿ ಬಳಸಿಕೊಳ್ಳಬೇಕು. ಗುಂಪುಗಳ ನಡುವೆ ಹಸ್ತಾಕ್ಷರ ಸ್ಪರ್ಧೆ, ಪುಸ್ತಕ ಓದುವ ಸ್ಪರ್ಧೆ ಇತ್ಯಾದಿಗಳನ್ನು ನಡೆಸಬೇಕು. ನಿರಂತರ ಶಿಕ್ಷಣ ವ್ಯವಸ್ಥೆಯ ಕಾರ್ಯಕರ್ತರನ್ನು ಇದರಲ್ಲಿ ತೊಡಗಿಸಿಕೊಳ್ಳಬಹುದು.

೫. ಪ್ರಗತಿಬಂಧು ಫಲಾನುಭವಿಗಳ ೧೪ ವರ್ಷದ ಒಳಗಿನ ಎಲ್ಲಾ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಇದಕ್ಕೆ ಶಾಲಾ ಮಕ್ಕಳಿಗೆ ಸಿಗುವ ಬಿಸಿಯೂಟ, ಉಚಿತ ಸಮವಸ್ತ್ರ, ಪುಸ್ತಕ, ಇತ್ಯಾದಿಗಳು ಕಾರಣವಾಗಿವೆ. ಆದರೆ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಲು ಅವರಿಂದ ಸಾಧ್ಯವಾಗುತ್ತಿಲ್ಲ. ಪ್ರಗತಿನಿಧಿ ವಿತರಣೆಯ ಕಾಲದಲ್ಲಿ ಈ ಅಂಶವನ್ನು ಪರಿಗಣಿಸಬೇಕಾದ ಅಗತ್ಯವಿದೆ. ಕ್ಷೇತ್ರಾಧ್ಯಯನದಲ್ಲಿ ಕಂಡುಬಂದಂತೆ ಶಿಕ್ಷಣದ ಉದ್ದೇಶಕ್ಕಾಗಿ ಸಾಲ ತೆಗೆದುಕೊಂಡವರ ಪ್ರಮಾಣ ತೀರಾ ನಗಣ್ಯವಾಗಿದೆ. ಪ್ರಗತಿಬಂಧು ಸದಸ್ಯರ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಅತ್ಯಂತ ಕಡಿಮೆ ಬಡ್ಡಿದರದಲ್ಲಿ ದೀರ್ಘಾವಧಿ ಹಣಕಾಸನ್ನು ಒದಗಿಸುವ ಯೋಜನೆಯನ್ನು ರೂಪಿಸಬೇಕಾಗಿದೆ.

೬. ಪ್ರಗತಿಬಂಧು ಸದಸ್ಯೆಯರಲ್ಲಿ ಬಹುತೇಕರು ಬೀಡಿ ಕಟ್ಟುವವರು. ಹೊಗೆಸೊಪ್ಪಿನ ಹುಡಿಯ ವಾಸನೆ ಸೇವಿಸಿ ಅವರ ಶ್ವಾಸಕೋಶ ಸಂಬಂಧದ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಕೆಮ್ಮು ಕಫ, ಕ್ಷಯ ನಿಶ್ಶಕ್ತಿ, ತಲೆಸುತ್ತು, ರಕ್ತದ ಕೊರತೆ ಇವು

ಇವರ ಸಾಮಾನ್ಯ ರೋಗಗಳಾಗಿವೆ. ಅಧ್ಯಯನ ಸಂದರ್ಭದಲ್ಲಿ ಬಹುತೇಕರು ವೃತ್ತಿ ಬದಲಾವಣೆಯ ಆಶೆಯನ್ನು ತೋಡಿಕೊಂಡರು. ಆದರೆ ಮನೆವಾರ್ತೆ ನಿಭಾಯಿಸಿ ಕೈಗೊಳ್ಳಬಹುದಾದ ಸುಲಭದ ಬದಲಿ ವೃತ್ತಿ ಬೇರೊಂದು ದೊರೆಯುತ್ತಿಲ್ಲ. ಆದುದರಿಂದ ಈ ಸದಸ್ಯೆಯರ ಆರೋಗ್ಯ ಸುಧಾರಣೆಯ ಬಗ್ಗೆ ಹೆಚ್ಚಿನ ಗಮನ ನೀಡಬೇಕಾಗಿದೆ. ಸಮತೂಕದ ಆಹಾರ ಪರಿಕಲ್ಪನೆಯ ಜ್ಞಾನವನ್ನು ಮತ್ತು ಸಮತೂಕದ ಆಹಾರ ಅನುಭೋಗದ ಸಾಮರ್ಥ್ಯವನ್ನು ಉದ್ದೀಪನಗೊಳಿಸಬೇಕಾಗಿದೆ. ಇದು ರಾತ್ರಿ ಬೆಳಗಾಗುವುದರೊಳಗೆ ನಡೆಯುವ ಪವಾಡವಲ್ಲ. ಆದರೆ ಸದಸ್ಯೆಯರು ಪಶು ಸಾಕಣೆ ಮತ್ತು ಕೋಳಿ ಸಾಕಣೆ ಮಾಡಲು ಸಾಧ್ಯವಾದರೆ ಮತ್ತು ಹಾಲು, ಮೊಟ್ಟೆ, ಅನುಭೋಗಿಸುವ ಸಾಮರ್ಥ್ಯ ಪಡೆದರೆ ಪರಿಸ್ಥಿತಿ ಬದಲಾಗುತ್ತದೆ. ಈಗಾಗಲೇ ಸರಕಾರದ ಆರೋಗ್ಯ ಸಂದರ್ಶಕರು ಇವರ ಮನೆಗಳಿಗೆ ಭೇಟಿ ನೀಡಿ ಆರೋಗ್ಯ ಜಾಗೃತಿ ಮೂಡಿಸಲು ಯತ್ನಿಸುತ್ತಿದ್ದಾರೆ. ಆದರೆ ಆರೋಗ್ಯ ಸುಧಾರಿಸಬೇಕಾದರೆ ಅನುಭೋಗದ ಮಟ್ಟ ಎತ್ತರಿಸಬೇಕಾಗುತ್ತದೆ. ಅನುಭೋಗದ ಮಟ್ಟ ಎತ್ತರವಾಗಬೇಕಾದರೆ ಅವರ ಆದಾಯ ಹೆಚ್ಚಾಗಬೇಕು. ಹಾಗಾಗಿ ಪ್ರಗತಿಬಂಧು ಕಾರ್ಯಕರ್ತರು ಸದಸ್ಯರ ಆದಾಯ ವೃದ್ಧಿಯ ಸರಳ ಮತ್ತು ಸುಲಭ ಹಾದಿಗಳನ್ನು ತೋರಿಸಿ ಕೊಡಬೇಕಾಗಿದೆ.

೭. ಬಡವರ ಸಂಖ್ಯೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಸರಕಾರವು ಸ್ಥಿರ ದೂರವಾಣಿ ಹೊಂದಿರುವವರನ್ನು ಬಡತನ ರೇಖೆಯ ಮೇಲಿರುವವರು ಎಂದು ಪರಿಗಣಿಸುತ್ತದೆ. ದೂರವಾಣಿ ಇಲಾಖೆ ಆಕರ್ಷಕ ಯೋಜನೆಗಳನ್ನು ರೂಪಿಸಿ ಅನೇಕ ಬಡವರು ಸ್ಥಿರ ದೂರವಾಣಿಯನ್ನು ಹೊಂದುವಂತೆ ಮಾಡಿದೆ. ಸ್ಥಿರ ದೂರವಾಣಿ ಹೊಂದಿರುವವರು ನೇರ ಸರಕಾರಿ ಸೌಲಭ್ಯದಿಂದ ಮತ್ತು ಹಸಿರು ಕಾರ್ಡಿನಿಂದ ವಂಚಿತರಾಗುತ್ತಾರೆ. ಆದುದರಿಂದ ಸ್ಥಿರ ದೂರವಾಣಿಯನ್ನು ಬಡತನದ ರೇಖೆಯ ಮಾಪಕವಾಗಿಸುವ ಕ್ರಮವನ್ನು ಸರಕಾರ ಕೈಬಿಡಬೇಕಾಗಿದೆ. ಪ್ರಗತಿಬಂಧು ಯೋಜನಾ ನಿರ್ದೇಶಕರು ಈ ಅಂಶವನ್ನು ಸರಕಾರಕ್ಕೆ ಮನದಟ್ಟು ಮಾಡಿಕೊಡಬೇಕಾಗಿದೆ.

೬.೩ ಸೊತ್ತು ನಿರ್ಮಾಣದ ಬಗೆಗಿನ ಸಲಹೆಗಳು

೧. ಸಂದರ್ಶಿಸಿದ ಪ್ರಗತಿಬಂಧು ಸದಸ್ಯರಲ್ಲಿ ಶೇಕಡಾ ೯೬ ರಷ್ಟು ಮಂದಿ ಒಂದು ಎಕರೆಗಿಂತಲೂ ಕಡಿಮೆ ಭೂಮಿ ಹೊಂದಿದ್ದಾರೆ. ಇದು ಜನಸಂಖ್ಯೆಯ ಅನಿಯಂತ್ರಿತ ಹೆಚ್ಚಳ ಮತ್ತು ಭೂಸುಧಾರಣಾ ಕಾರ್ಯಕ್ರಮಗಳ ವೈಫಲ್ಯವನ್ನು ಸೂಚಿಸುತ್ತದೆ. ನಮ್ಮ ದೇಶದಲ್ಲಿ ಭೂ ಮಿತಿಯನ್ನು ನಿಗದಿಗೊಳಿಸಿ ಹೆಚ್ಚುವರಿ ಭೂಮಿಯನ್ನು ವಶಪಡಿಸಿ ಭೂ ರಹಿತರಿಗೆ ಹಂಚುವ ಕಾರ್ಯಕ್ರಮ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ಬಂದಿಲ್ಲ. ಭೂಮಿ ಬದುಕಿಗೆ ಮೂಲ ಮತ್ತು ಪ್ರತಿಷ್ಠೆಯ ಸಾಧನ. ಗ್ರಾಮೀಣ ಭಾರತದಲ್ಲಿ ಜನಸಾಮಾನ್ಯರು ಭೂಮಿ ಇಲ್ಲದೆ ಆರ್ಥಿಕ ಅಭಿವೃದ್ಧಿ ಸಾಧಿಸುವುದು ಸಾಧ್ಯವಿಲ್ಲದ ಮಾತು. ಇಂದಿನ ಈ ಜಾಗತೀಕರಣದ ಸಂದರ್ಭದಲ್ಲಿ ಭೂಮಿಯ ಮರು ವಿತರಣೆ ಮತ್ತು ಸಮಾಜವಾದಿ ಸಮಾಜದ ನಿರ್ಮಾಣ ಸಮಾನತೆಯ ಸಾಧನೆ ಇತ್ಯಾದಿಗಳು ಸೈದ್ಧಾಂತಿಕವಾಗಿ ಮಾತ್ರ ಮಹತ್ತ್ವಗಳಿಸಿಕೊಂಡಿವೆ. ಆದುದರಿಂದ ಇರುವ ಭೂಮಿಯನ್ನು ಆರ್ಥಿಕ ಹಿಡುವಳಿಯಾಗಿ ಹೇಗೆ ಬಳಸಬಹುದು ಮತ್ತು ಆದಾಯದ ಬದಲಿ ಮಾರ್ಗಗಳನ್ನು ಹೇಗೆ ಕಂಡುಕೊಳ್ಳಬಹುದು ಎಂಬ ಬಗ್ಗೆ ಗಮನಹರಿಸಬೇಕಾಗಿದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿಯ 'ಸಿರಿ' ಯೋಜನೆ ಈ ನಿಟ್ಟಿನಲ್ಲೊಂದು ಆವಿಷ್ಕಾರಿಕ ಪ್ರಯೋಗವಾಗಿದೆ. ಆದರೆ ದೊಡ್ಡ ಉದ್ದಿಮೆಗಳ ಉತ್ಪನ್ನಗಳಿಗೆ ಮುಖಾಮುಖಿಯಾದಾಗ ಸಿರಿ ಉತ್ಪನ್ನಗಳು ಗೆಲ್ಲುವ ಸಂದರ್ಭಗಳು ಕಡಿಮೆ. ಈ ಸಮಸ್ಯೆಗೆ ಸ್ವದೇಶಿ ಚಳುವಳಿಯ ಮಾದರಿಯ ಚಳುವಳಿಯೊಂದನ್ನು ಹುಟ್ಟುಹಾಕಬೇಕಾಗಿದೆ. ಒಂದು ಪ್ರದೇಶದ ಪ್ರಗತಿಬಂಧು ತಂಡಗಳು ಅಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಅನುಭೋಗೀ ಸರಕುಗಳನ್ನು ಉತ್ಪಾದಿಸಿ ಬೇರೆ ಪ್ರದೇಶಗಳಲ್ಲಿ ಮಾರಾಟ ಮಾಡಬೇಕು. ಉತ್ಪಾದಿಸಲು ಸಾಧ್ಯವಿಲ್ಲದ ಸರಕುಗಳನ್ನು ಅನ್ಯ ಪ್ರಗತಿಬಂಧು ತಂಡಗಳಿಂದ ತರಿಸಿಕೊಳ್ಳಬೇಕು. ಆಗ ಪ್ರತಿಯೊಂದು ಪ್ರಗತಿಬಂಧು ತಂಡದ ಉತ್ಪನ್ನಗಳಿಗೆ ಸಿದ್ಧ ಮಾರುಕಟ್ಟೆ ರೂಪುಗೊಳ್ಳುತ್ತದೆ. ಫ್ರೆಂಚ್ ಅರ್ಥಶಾಸ್ತ್ರಜ್ಞ ಜೆ.ಬಿ. ಸೇ ಮಾರುಕಟ್ಟೆ ನಿಯಮ ಒಂದನ್ನು ರೂಪಿಸಿ ಪೂರೈಕೆಯು ತನ್ನ ಬೇಡಿಕೆಯನ್ನು ತಾನೇ ಕಂಡುಕೊಳ್ಳುತ್ತದೆ

ಎಂದು ಹೇಳಿದ್ದಾನೆ. ಮೇಲಿನ ಸಲಹೆಯ ಅನುಷ್ಠಾನದಿಂದ ಪ್ರಗತಿಬಂಧು ತಂಡಗಳು ಈ ಹೇಳಿಕೆಯನ್ನು ಒಂದು ಮಿತಿಯೊಳಗೆ ನಿಜವಾಗಿಸಲು ಸಾಧ್ಯವಿದೆ.

೨. ಪ್ರಗತಿಬಂಧು ತಂಡಗಳ ಸದಸ್ಯರು ಬಹುತೇಕವಾಗಿ ಬಡವರು ಮತ್ತು ಕಡುಬಡವರು. ಇವರು ಸ್ವಯಂ ಚಾಲೀ ವಾಹನಗಳನ್ನು ಕೊಂಡುಕೊಳ್ಳುವುದು ಸುಲಭದ ಮಾತಲ್ಲ. ತೈಲೋತ್ಪನ್ನಗಳ ಕೊರತೆ ಮತ್ತು ಬೆಲೆ ಏರಿಕೆ, ಅವು ಉಂಟುಮಾಡುವ ಪರಿಸರ ಮಾಲಿನ್ಯ, ಇವುಗಳಿಂದಾಗಿ ಸ್ವಯಂ ಚಾಲೀ ವಾಹನಗಳಿಗೆ ಇನ್ನು ಪ್ರೋತ್ಸಾಹಿಸಕೂಡದು. ಬದಲಾಗಿ ಪ್ರಗತಿಬಂಧು ತಂಡದ ಸದಸ್ಯರುಗಳು ಬೈಸಿಕಲ್ಲು ಕೊಳ್ಳುವಂತೆ ಪ್ರೇರೇಪಿಸಬೇಕು. ಪ್ರಾಥಮಿಕ ಶಾಲಾ ಮಕ್ಕಳಿಗೂ ಬೈಸಿಕಲ್ಲು ಯೋಜನೆ ವಿಸ್ತರಿಸಲ್ಪಟ್ಟರೆ ಪ್ರಗತಿಬಂಧು ಮಕ್ಕಳಲ್ಲೂ ಬೈಸಿಕಲ್ಲುಗಳಿರುತ್ತವೆ. ಪ್ರಗತಿಬಂಧು ಕಾರ್ಯಕರ್ತರು ಈ ವಿಷಯವನ್ನು ಸರಕಾರದ ಗಮನಕ್ಕೆ ತರಬೇಕು. ಬೈಸಿಕಲ್ಲುಗಳು ಪರಿಸರ ಸ್ನೇಹೀ ವಾಹನಗಳು. ಹಳ್ಳಿರಸ್ತೆಗಳಲ್ಲಿ ಅವು ಸ್ವಯಂ ಚಾಲೀ ವಾಹನದಷ್ಟೇ ವೇಗದಲ್ಲಿ ಓಡಾಡಬಲ್ಲವು! ಅವುಗಳನ್ನು ಬಳಸುವವರ ದೈಹಿಕ ಆರೋಗ್ಯ ತುಂಬಾ ಸುಧಾರಿಸುತ್ತದೆ. ಚೀನಾದ ಬಳಿಕ ಅತ್ಯಧಿಕ ಬೈಸಿಕಲ್ಲು ಉತ್ಪಾದಿಸುವ ರಾಷ್ಟ್ರ ಭಾರತ. ಆದುದರಿಂದ ಬೈಸಿಕಲ್ ಬಳಕೆಯು ಉದ್ಯೋಗವನ್ನು ಸೃಷ್ಟಿಸುತ್ತದೆ. ಸದಸ್ಯರು ಬೈಸಿಕಲ್ಲು ಹೊಂದುವುದರಿಂದ ಇನ್ನೊಂದು ಉಪಯೋಗವಿದೆ. ತಮ್ಮ ಉತ್ಪನ್ನಗಳನ್ನು ಅವರು ಬೈಸಿಕಲ್ ಗಳಲ್ಲಿ ಮಾರಾಟ ಸ್ಥಳಕ್ಕೆ ಸಾಗಿಸಬಹುದು. ಇದರಿಂದ ಸಾಗಾಟ ವೆಚ್ಚ ಉಳಿಯುತ್ತದೆ ಮತ್ತು ಬೇಕೆಂಬಲ್ಲಿಗೆ ಉತ್ಪನ್ನಗಳನ್ನು ಸಾಗಿಸಲು ಸಾಧ್ಯವಾಗುತ್ತದೆ.

೩. ಪ್ರಗತಿಬಂಧು ಗುಂಪುಗಳ ಸದಸ್ಯರು ಸಂಪೂರ್ಣ ಸುರಕ್ಷಾ ವಿಮಾ ಯೋಜನೆಗೆ ಒಳಪಡುತ್ತಾರೆ. ಅದಕ್ಕಾಗಿ ಕುಟುಂಬವೊಂದು ವರ್ಷಕ್ಕೆ ೭೦೦ ರೂಪಾಯಿ ಕಟ್ಟಬೇಕಾಗುತ್ತದೆ. ಈಗ ಭಾರತದ ಜೀವವಿಮಾ ನಿಗಮವು ಅನೇಕ ಆಕರ್ಷಕ ಮತ್ತು ಸರಳವಾದ ವಿಮಾ ಯೋಜನೆಗಳನ್ನು ರೂಪಿಸಿದೆ. ಈ ಯೋಜನೆಗಳಲ್ಲಿ ಹಣ ತೊಡಗಿಸಲು ಪ್ರಗತಿಬಂಧು ಸದಸ್ಯರನ್ನು ಕಾರ್ಯಕರ್ತರು ಪ್ರೇರೇಪಿಸಬೇಕಾಗಿದೆ.

೪. ಪ್ರಗತಿಬಂಧು ಸದಸ್ಯರು ವಾರಕ್ಕೆ ಕನಿಷ್ಠ ೧೦ ರೂಪಾಯಿ ಉಳಿತಾಯ ಕಡ್ಡಾಯವಾಗಿ ಮಾಡಲೇಬೇಕು. ಇಡೀ ವರ್ಷಕ್ಕಾಗುವಾಗ ಅವರ ಉಳಿತಾಯ ರೂ.೪೮೦ ರಿಂದ

ರೂ. ೫೦೦ ರಷ್ಟಾಗುತ್ತದೆ. ಇಂದಿನ ಬೆಲೆ ಏರಿಕೆಯ ದಿನಗಳಲ್ಲಿ ಇದು ತೀರಾ ಚಿಕ್ಕ ಮೊತ್ತವಾಗಿರುತ್ತದೆ. ಅನೇಕ ಸಹಕಾರಿ ಸಂಘಗಳು ಉಳಿತಾಯ ಠೇವಣಿಗಳಿಗೆ ಶೇಕಡಾ ೧೦ಕ್ಕಿಂತಲೂ ಹೆಚ್ಚು ಬಡ್ಡಿಯನ್ನು ನೀಡುತ್ತವೆ. ಆದುದರಿಂದ ಕೇವಲ ಸಾಪ್ತಾಹಿಕ ಉಳಿತಾಯಕ್ಕಷ್ಟೇ ಸೀಮಿತಗೊಳ್ಳದೆ ಇತರ ರೀತಿಯ ಉಳಿತಾಯಗಳನ್ನು ಮಾಡಿ ಸದಸ್ಯರು ನಿರಖು ಠೇವಣಿಗಳಲ್ಲಿ ಇರಿಸಿ ತಮ್ಮ ಆದಾಯವನ್ನು ವೃದ್ಧಿಸಿಕೊಳ್ಳಬೇಕಾಗಿದೆ. ಈ ಬಗ್ಗೆ ಪ್ರಗತಿಬಂಧು ಕಾರ್ಯಕರ್ತರು ಸದಸ್ಯರ ಮನವೊಲಿಸುವ ಅಗತ್ಯವಿದೆ.

೬.೪ ಸಾಲದ ಬಗೆಗಿನ ಸಲಹೆಗಳು

೧. ಪ್ರಗತಿಬಂಧು ಸದಸ್ಯರು ಕೃಷಿ, ಸ್ವಉದ್ಯೋಗ, ಗೃಹನಿರ್ಮಾಣ, ಶಿಕ್ಷಣ ಮತ್ತಿತರ ಕಾರಣಗಳಿಗಾಗಿ ಸಾಲ ಪಡೆದುಕೊಳ್ಳುತ್ತಾರೆ. ಈ ಸಾಲವು ಗುಂಪುಗಳ ಉಳಿತಾಯದ ಗರಿಷ್ಠ ನಾಲ್ಕುಪಟ್ಟು ಇರುತ್ತದೆ. ಬಡ್ಡಿದರ ಶೇಕಡಾ ೧೧. ಮರುಪಾವತಿಯ ಅವಧಿ ಐದು ವರ್ಷಗಳು. ಸಮೀಕ್ಷೆಯ ಸಂದರ್ಭದಲ್ಲಿ ಎಲ್ಲಾ ಸದಸ್ಯರು ಮರುಪಾವತಿಯ ಅವಧಿಯನ್ನು ಹೆಚ್ಚಿಸಬೇಕು ಎಂಬ ಸಲಹೆಯನ್ನು ನೀಡಿರುತ್ತಾರೆ. ಸದಸ್ಯರಿಗೆ ಬ್ಯಾಂಕುಗಳು ಸಾಲವನ್ನು ನೀಡುವುದರಿಂದ ಮತ್ತು ಬ್ಯಾಂಕುಗಳಿಗೆ ದೀರ್ಘಾವಧಿ ಸಾಲವನ್ನು ನೀಡುವ ಅಧಿಕಾರ ಇಲ್ಲದಿರುವುದರಿಂದ ಇಲ್ಲೊಂದು ತಾಂತ್ರಿಕ ತೊಡಕಿದೆ. ಆದುದರಿಂದ ಸ್ವಸಹಾಯ ಗುಂಪುಗಳಿಗೆ ನಬಾರ್ಡ್ ನೀಡುವ ಹಣ ಬ್ಯಾಂಕುಗಳ ಬದಲಾಗಿ ಸಹಕಾರಿ ಸಂಸ್ಥೆಗಳಿಂದ ಗರಿಷ್ಠ ೧೦ ವರ್ಷಗಳ ಅವಧಿಯ ಸಾಲದ ರೂಪದಲ್ಲಿ ನೀಡಲ್ಪಟ್ಟರೆ ಗ್ರಾಮೀಣ ಬಡವರಿಗೆ ತುಂಬಾ ಪ್ರಯೋಜನವಾಗುತ್ತದೆ. ಗ್ರಾಮಾಭಿವೃದ್ಧಿಯಲ್ಲಿ ತೊಡಗಿರುವ ಸರಕಾರೇತರ ಸಂಘಗಳು ಒಟ್ಟಾಗಿ ವಿಷಯವನ್ನು ನಬಾರ್ಡ್‌ಗೆ ಮನಗಾಣಿಸುವ ಅಗತ್ಯವಿದೆ.

೨. ಸದಸ್ಯರು ಪಡೆಯುವ ಸಾಲದ ಬಳಕೆಯ ಮೇಲುಸ್ತುವಾರಿ ಸರಿಯಾಗಿ ನಡೆಯುತ್ತಿಲ್ಲ ಯಾವ ಉದ್ದೇಶಕ್ಕಾಗಿ ಸದಸ್ಯರು ಸಾಲ ಪಡೆದಿರುತ್ತಾರೆಯೋ, ಅದೇ ಉದ್ದೇಶಕ್ಕೆ ಸಾಲದ ಹಣ ಬಳಸಬೇಕಾದುದು ಧರ್ಮ. ಆದರೆ ಇತರ ಅನಿವಾರ್ಯತೆ, ಸಾಮಾಜಿಕ ನಂಬಿಕೆ ಇತ್ಯಾದಿಗಳಿಂದಾಗಿ ಸದಸ್ಯರು ತಾವು ತೆಗೆದುಕೊಂಡ ಸಾಲವನ್ನು

ಬೇರೆ ಉದ್ದೇಶಗಳಿಗೆ ಬಳಸಿದ ದೃಷ್ಟಾಂತಗಳಿವೆ. ಈ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾದ ಆಗತ್ಯವಿದೆ.

೩. ಸಾಲದ ಮರುಪಾವತಿಯ ಬಗ್ಗೆಯೂ ಆಕ್ಷೇಪಗಳಿವೆ. ಸಾಲಪಡೆದ ಪ್ರಗತಿಬಂಧು ಸದಸ್ಯರು ಪ್ರತಿವಾರ ಸಾಲದ ಕಂತಿನೊಡನೆ ಬಡ್ಡಿಯನ್ನು ಸೇರಿಸಿ ಕಟ್ಟಬೇಕಾಗುತ್ತದೆ. ಸಾಲ ಮರುಪಾವತಿಯ ದೃಷ್ಟಿಯಿಂದ ಇದೊಂದು ಒಳ್ಳೆಯ ಕ್ರಮ. ಆದರೆ ಸಾಲಕ್ಕೊಂದು ಉದ್ದೇಶವಿರುತ್ತದೆ. ಉತ್ಪಾದನೆಯಲ್ಲಿ ಬಳಕೆಯಾದ ಬಂಡವಾಳಕ್ಕೆ ನಿರ್ದಿಷ್ಟ ಗರ್ಭಾವಧಿ ಇರುತ್ತದೆ. ಹಾಗಾಗಿ ಸದಸ್ಯರಿಗೆ ಪ್ರತಿವಾರ ಕಂತು ಮತ್ತು ಬಡ್ಡಿಯನ್ನು ಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ. ಸಾಲದ ಅವಧಿಯನ್ನು ಹೆಚ್ಚಿಸಿ ಪಾವತಿಯನ್ನು ತಿಂಗಳಿಗೊಮ್ಮೆ ಮಾಡುವ ಕ್ರಮವನ್ನು ಅನುಷ್ಠಾನಗೊಳಿಸಬೇಕೆಂದು ಅವರು ಬಯಸುತ್ತಾರೆ. ಈ ಬಗ್ಗೆ ಪ್ರಗತಿಬಂಧು ಯೋಜನಾಧಿಕಾರಿಗಳು ನಿರ್ಧಾರ ಕೈಗೊಳ್ಳಬೇಕಾಗಿದೆ.

೪. ಈಗ ಕೇಂದ್ರ ಮತ್ತು ರಾಜ್ಯಗಳಲ್ಲಿ ಸಂಮಿಶ್ರ ಸರಕಾರಗಳಿವೆ. ಯಾವುದೇ ಚುನಾವಣೆಯಲ್ಲಿ ಏಕೈಕ ಪಕ್ಷವು ಬಹುಮತ ಪಡೆಯಲು ಸಾಧ್ಯವಿಲ್ಲದಾಗ ರಾಜಕೀಯ ಪಕ್ಷಗಳು ಕೆಲವು ಆಕರ್ಷಕ ಯೋಜನೆಗಳನ್ನು ಘೋಷಿಸುತ್ತವೆ. ಅಧಿಕಾರದಲ್ಲಿರುವ ಪಕ್ಷಗಳು ಹಾಗೆ ಮಾಡಬೇಕಾಗುತ್ತದೆ. ಅಂತಹ ಯೋಜನೆಗಳಲ್ಲಿ ಸಾಲ ಮನ್ನಾ ಮತ್ತು ಬಡ್ಡಿ ಮನ್ನಾ ಯೋಜನೆಗಳು ಅತ್ಯಂತ ಮಹತ್ವವನ್ನು ಹೊಂದಿವೆ. ಸಹಕಾರಿ ಸಂಸ್ಥೆಗಳಿಂದ ತೆಗೆದ ಸಾಲಗಳು ಮನ್ನಾ ಆಗುವುದಾದರೆ ಸ್ವಸಹಾಯ ಗುಂಪುಗಳ ಸದಸ್ಯರು ತೆಗೆದು ಕೊಂಡ ಬ್ಯಾಂಕು ಸಾಲಗಳು ಯಾಕೆ ಮನ್ನಾ ಆಗಬಾರದು ಎಂಬ ಪ್ರಶ್ನೆಯನ್ನು ಪ್ರಗತಿಬಂಧು ಸದಸ್ಯರು ಮುಂದೊಡ್ಡುತ್ತಾರೆ. ಈ ಪ್ರಶ್ನೆಯ ಹಿಂದಿರುವ ತರ್ಕವನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಆದರೆ ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆದ ಪ್ರಗತಿಬಂಧು ಸದಸ್ಯರ ಸಾಲ ಯಾವುದೇ ಕಾರಣಕ್ಕೆ ಮನ್ನಾ ಆಗಲು ಸಾಧ್ಯವಿಲ್ಲ. ಹಾಗಾಗಿ ಸಾಲ ಮನ್ನಾ ಯೋಜನೆಯ ರಾಜಕೀಯದ ಬಗ್ಗೆ ಶ್ರೀಕ್ಷೇತ್ರದ ಗ್ರಾಮಾಭಿವೃದ್ಧಿ ಯೋಜನೆಯು ಇತರ ಸರಕಾರೇತರ ಸಂಘಗಳ, ವಾಣಿಜ್ಯ ಬ್ಯಾಂಕುಗಳ, ಸಹಕಾರಿ ಸಂಘಗಳ ಮತ್ತು ಸರಕಾರದ ಪ್ರತಿನಿಧಿಗಳನ್ನು ಸೇರಿಸಿ ಒಂದು ಆರೋಗ್ಯಕರ ಚರ್ಚೆಯನ್ನು ಮಾಡಿ ಸರ್ವ ಸಮ್ಮತ ಸೂತ್ರವೊಂದನ್ನು ಸಿದ್ಧಪಡಿಸಬೇಕಾಗಿದೆ.

೬.೫ ಇತರ ಸಲಹೆಗಳು

೧. ಬಂಟ್ವಾಳ ತಾಲೂಕಿನ ಪ್ರಗತಿಬಂಧು ತಂಡಗಳು ಸಮವಸ್ತ್ರ ಧರಿಸುವುದಿಲ್ಲ. ಸಮವಸ್ತ್ರವು ಒಗ್ಗಟ್ಟು ಮತ್ತು ಸಮಾನತೆಯ ದ್ಯೋತಕವಾಗಿರುತ್ತದೆ. ಆದುದರಿಂದ ಪ್ರಗತಿಬಂಧು ತಂಡಗಳು ತಮ್ಮದೇ ಆದ ಸಮವಸ್ತ್ರ ರೂಪಿಸಿಕೊಳ್ಳಬೇಕಾಗಿದೆ.

೨. ಗ್ರಾಮಾಭಿವೃದ್ಧಿಗೆ ದಿಕ್ಸೂಚಿಯಾಗಿ ಗ್ರಾಮಸಭೆಗಳು ನಡೆಯುತ್ತವೆ. ಬಹುತೇಕ ಪ್ರಗತಿಬಂಧು ಸದಸ್ಯರುಗಳು ಗ್ರಾಮ ಸಭೆಯಲ್ಲಿ ಭಾಗವಹಿಸುವುದಿಲ್ಲ. ಅವರು ಗ್ರಾಮ ಸಭೆಗಳಲ್ಲಿ ಭಾಗವಹಿಸಬೇಕು ಮತ್ತು ಅವರ ಜ್ಞಾನ ಹಾಗೂ ಕೌಶಲ್ಯಗಳ ಪ್ರಯೋಜನ ಇಡೀ ಗ್ರಾಮಕ್ಕೆ ದೊರೆಯುವಂತಾಗಬೇಕು.

೩. ಗ್ರಾಮೀಣ ಭಾರತದ ಜನರು ಸ್ವ ಉದ್ಯೋಗಗಳ ಮೂಲಕ ತಮ್ಮ ಅಭಿವೃದ್ಧಿಯನ್ನು ಸಾಧಿಸಬೇಕಾಗಿದೆ. ಪ್ರಗತಿಬಂಧು ತಂಡಗಳಿಗೆ ಸ್ವ ಉದ್ಯೋಗ ಮಾಹಿತಿ ಮತ್ತು ತರಬೇತಿ ನೀಡಬೇಕಾಗುತ್ತದೆ. ಇಂಡಸ್ಟ್ರಿಯಲ್ ಎಸ್ಟೇಟ್ ಗಳಿಗೆ ಅವರನ್ನು ಕರೆದೊಯ್ದು ಅವರಲ್ಲಿ ಹೊಸ ಉತ್ಸಾಹ ಮೂಡಿಸಬೇಕಾಗಿದೆ. ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾದ ಉತ್ಪನ್ನಗಳನ್ನು ಉತ್ಪಾದಿಸುವಂತೆ ಅವರನ್ನು ಪ್ರೇರೇಪಿಸಬೇಕಾಗಿದೆ. ಉದಾ: ದ.ಕನ್ನಡದ ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಅಡಿಕೆ ಕೃಷಿ ಅತ್ಯಂತ ಮಹತ್ವವನ್ನು ಪಡೆದಿದೆ. ಕಂಗಿನ ಹಾಳೆಗಳು ಊಟದ ತಟ್ಟೆಗಳಾಗಿ ಬಹಳ ಬೇಡಿಕೆಯನ್ನು ಪಡೆದಿವೆ. ಸುಳ್ಯದ ಶ್ರೀ ಕ್ಷೇತ್ರ ಸುಬ್ರಹ್ಮಣ್ಯಕ್ಕೆ ಮತ್ತು ಬೆಳ್ತಂಗಡಿಯ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ದೇಶದ ನಾಲ್ಕೂ ಮೂಲೆಗಳಿಂದ ಭಕ್ತಾದಿಗಳು ಬರುತ್ತಾರೆ. ಹರಿಕೆ ಮಂಡೆ ಸೇವೆ ಸಲ್ಲಿಸಿ ಬೋಳು ತಲೆಗೆ ಬಟ್ಟೆ ಟೊಪ್ಪಿ ಹಾಕಿಕೊಳ್ಳುತ್ತಾರೆ. ಬುದ್ಧಿವಂತ ಆವಿಷ್ಕಾರಿಯೊಬ್ಬ ಹಾಳೆಯ ವಿವಿಧ ಡಿಸ್ಯಾನಿನ ಟೊಪ್ಪಿಗಳನ್ನು ನಿರ್ಮಿಸಿದರೆ ಈ ಭಕ್ತಾದಿಗಳು ಖಂಡಿತ ಕೊಳ್ಳುತ್ತಾರೆ. ಶ್ರೀ ಕ್ಷೇತ್ರ ಸುಬ್ರಹ್ಮಣ್ಯದಲ್ಲಿ ಪ್ರಗತಿಬಂಧು ತಂಡಗಳು ಇಂತಹ ಕೆಲಸವನ್ನು ಧಾರಾಳವಾಗಿ ಮಾಡಬಹುದು. ಬಂಟ್ವಾಳದ ಪ್ರಗತಿಬಂಧು ತಂಡಗಳು ಇದರಲ್ಲಿ ಕೈ ಜೋಡಿಸಬಹುದು.

೪. ಪ್ರಗತಿಬಂಧು ಒಕ್ಕೂಟವು ತನ್ನದೇ ಆದ ಗ್ರಂಥಾಲಯವೊಂದನ್ನು ಮಾಡುವ ಅಗತ್ಯವಿದೆ. ಈ ಗ್ರಂಥಾಲಯವು ಅಭಿವೃದ್ಧಿಯ ವಿವಿಧ ಪಥಗಳನ್ನು ತೋರಿಸುವ ಗ್ರಂಥಗಳಿಂದ ಸಮೃದ್ಧವಾಗಿರಬೇಕು. ವಿಶ್ವದ ಯಾವುದೇ ಭಾಗದ ಸ್ವಸಹಾಯ ಗುಂಪುಗಳ ಯಶೋಗಾಥೆ ಇಲ್ಲಿ ಲಭ್ಯವಿರಬೇಕು. ಇದರಿಂದ ಪ್ರಗತಿಬಂಧು

ಸದಸ್ಯರಲ್ಲಿ ಓದುವ ಹವ್ಯಾಸದೊಡನೆ ಆವಿಷ್ಕಾರ ಬುದ್ಧಿ ಮೂಡುತ್ತದೆ. ಪರಿಣಾಮವಾಗಿ ಅವರ ಆರ್ಥಿಕ ಅಭಿವೃದ್ಧಿ ಸಾಧಿತವಾಗುತ್ತದೆ.

ಉಪಸಂಹಾರ

ಜಾಗತೀಕರಣದ ಎಲ್ಲಾ ತಲ್ಲಣಗಳಿಗೆ ಸೌಮ್ಯವಾಗಿ ತಿರುಗೇಟು ನೀಡುವ ಸಾಮರ್ಥ್ಯವನ್ನು ಗ್ರಾಮಾಭಿವೃದ್ಧಿ ಯೋಜನೆಗಳು ಹೊಂದಿವೆ. ಅವುಗಳ ಪ್ರಾಮಾಣಿಕ ಅನುಷ್ಠಾನದಿಂದ ದೇಶ ತಳ ಹಂತದಿಂದ ಆರ್ಥಿಕವಾಗಿ ಬಲಿಷ್ಠವಾಗಿ ಬರುತ್ತದೆ. ಚೈನಾ ದೇಶವು ಆರ್ಥಿಕವಾಗಿ ಬಲಿಷ್ಠವಾಗಲು ಅದು ತನ್ನ ಆರ್ಥಿಕತೆಯ ಬೇರುಗಳನ್ನು ಭದ್ರಪಡಿಸಿದುದು ಕಾರಣವಾಗಿದೆ. ಭಾರತಕ್ಕೆ ಹಾಗೆ ಮಾಡಲು ಸಾಧ್ಯವಾಗದಿರುವುದೇ ಅದರ ಆರ್ಥಿಕ ಹಿಂದುಳಿಕೆಗೆ ಕಾರಣವಾಗಿದೆ. ಸ್ವಸಹಾಯ ಚಳುವಳಿಯ ಮೂಲಕ ಗ್ರಾಮೀಣ ಭಾರತವನ್ನು ಬಲಿಷ್ಠಗೊಳಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ ಕಳೆದ ಇಪ್ಪತ್ತೈದು ವರ್ಷಗಳಿಂದ ಸಾರ್ಥಕವಾದ ಅನೇಕ ಯೋಜನೆಗಳನ್ನು ರೂಪಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಾ ಬಂದಿದೆ. ಡಾ। ಹೆಗ್ಗಡೆಯವರ ಯೋಚನೆ, ಯೋಜನೆ, ಬುದ್ಧಿಮತ್ತೆ, ದೂರದೃಷ್ಟಿ, ಸಾಮಾಜಿಕ ಕಳಕಳಿ, ಜಾತ್ಯಾತೀತತೆ, ಸಮಾನತೆಗಾಗಿ ತುಡಿಯುವ ಮನಸ್ಸು ಈ ಯಶಸ್ಸಿನ ಹಿಂದಿರುವ ಪ್ರೇರಕ ಶಕ್ತಿ. ಅದಕ್ಕೆ ಪೂರಕವಾಗಿ ತ್ಯಾಗ ಮನೋಭಾವದ ತಾಳ್ಮೆಯ ಪ್ರತಿರೂಪವಾದ ಗ್ರಾಮೀಣ ಜನರ ನಾಡಿಮಿಡಿತ ಅರಿತು ವ್ಯವಹರಿಸಬಲ್ಲ ಚತುರ ಕ್ಷೇತ್ರ ಕಾರ್ಯಕರ್ತರ ಒಂದು ದೊಡ್ಡ ದಂಡು ಸ್ವಹಿತಕ್ಕಿಂತ ಸೇವೆ ಮಿಗಿಲು ಎಂಬುದನ್ನು ತೋರಿಸಿಕೊಡುತ್ತಿದೆ. ಗ್ರಾಮೀಣ ಭಾರತದಲ್ಲಿ ತಾಂಡವವಾಡುವ ಜಾತೀಯತೆ ಶ್ರೇಣೀಕೃತ ವ್ಯವಸ್ಥೆ, ಅಪ್ರಾಮಾಣಿಕತೆ, ಮೈಗಳ್ಳತನ, ಅನಕ್ಷರತೆ ಉದ್ದೇಶರಾಹಿತ್ಯ ಜೀವನ, ಚಟಗಳ ದಾಸ್ಯತ್ವ ಇತ್ಯಾದಿಗಳು ಪ್ರಗತಿಬಂಧು ಯೋಜನೆಗೆ ದೊಡ್ಡ ಸವಾಲನ್ನು ಒಡ್ಡುತ್ತಿವೆ. ಗ್ರಾಮಾಭಿವೃದ್ಧಿಯಲ್ಲಿ ತೊಡಗಿರುವ ಸರಕಾರೇತರ ಸಂಸ್ಥೆಗಳು ಪರಸ್ಪರ ಒಗ್ಗೂಡಿ ಇಂತಹ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕಾಗಿದೆ. ಆಗ ಗ್ರಾಮೀಣಾಭಿವೃದ್ಧಿ ಯೋಜನೆಗಳು ಸಫಲವಾಗಿ ನಮ್ಮ ಕನಸಿನ ರಾಮರಾಜ್ಯ ನಿಜವಾದ ಅರ್ಥದಲ್ಲಿ ರೂಪುಗೊಳ್ಳುತ್ತದೆ.

ಅನುಬಂಧ I

ಪ್ರಶ್ನಾವಳಿ

I ಗುಂಪಿನ ಪರಿಚಯ

A. ಗುಂಪಿನ ಹೆಸರು ಮತ್ತು ವಿಳಾಸ

B. ಸ್ಥಾಪನೆಯ ವರ್ಷ

C. ಸ್ಥಾಪನೆಗೆ ಪ್ರೇರಣೆ

D. ಪ್ರತ್ಯೇಕ ಕಛೇರಿ :- ಇದೆ / ಇಲ್ಲ - ಎಲ್ಲಿ

E. ಮೊದಲು ಉಳಿತಾಯ ಮಾಡುವ ಅಭ್ಯಾಸ ಇತ್ತೇ :- ಹೌದು / ಇಲ್ಲ

F. ಉಳಿತಾಯ ಸ್ವರೂಪ (ವಾರಕ್ಕೆ) 10ರೂ /10ರಿಂದ 20 /20 ಹೆಚ್ಚು
ಹೆಚ್ಚು ಉಳಿತಾಯದ ಉದ್ದೇಶ

G. ಸಮವಸ್ತ್ರ ಇದೆ / ಇಲ್ಲ.

II ಸದಸ್ಯತ್ವದ ಮಾಹಿತಿ

A. ತಂಡದಲ್ಲಿರುವ ಸದಸ್ಯರ ಒಟ್ಟು ಸಂಖ್ಯೆ :/ ಒಟ್ಟು / ಆರಂಭ / ಈಗ

B. ಸದಸ್ಯರ ಸರಾಸರಿ ವಯೋಮಾನ 18-25 /26-35 / 36-50/ 50ಕ್ಕಿಂತ ಹೆಚ್ಚು

C. ಕುಟುಂಬ ವಿವರ
ತಂದೆ ತಾಯಿ : ಇದ್ದಾರೆ / ಇಲ್ಲ ವಯಸ್ಸು : ವೃತ್ತಿ :
ಗಂಡ ಹೆಂಡತಿ :
ಮಕ್ಕಳು : ವಯಸ್ಸು : ವಿದ್ಯಾರ್ಹತೆ : ವೃತ್ತಿ :

D. ಶಿಕ್ಷಣದ ಮಟ್ಟ ಅನಕ್ಷರಸ್ಥರು ಪ್ರಾಥಮಿಕ / ಪ್ರೌಢ /ಕಾಲೇಜು / ಇತರ

E. ಸದಸ್ಯರ ಸಂಪನ್ಮೂಲ ವಿವರ
ಭೂಮಿ : ಪಿತ್ರಾರ್ಜಿತ /ಸ್ವಯಾರ್ಜಿತ / ದರಖಾಸ್ತು / ಅಕ್ರಮ ಸಕ್ರಮ
ಮನೆ : ಪಿತ್ರಾರ್ಜಿತ / ಸ್ವಯಾರ್ಜಿತ / ಸರಕಾರದಿಂದ / ಇತರ

F. ವರದಕ್ಷಿಣೆ : ಇದೆ / ಇಲ್ಲ
ರೂಪ : ಚಿನ್ನ / ನಗದು
ಕೊಟ್ಟದ್ದು ಹೇಗೆ ಉಳಿತಾಯ /ಸಾಲ

G. ಮೂಲ ಸವಲತ್ತು
a. ಮನೆಯವರೆಗೆ ರಸ್ತೆಯ ಸೌಲಭ್ಯ : ಇದೆ / ಇಲ್ಲ
b. ವಿದ್ಯುತ್ ಸೌಲಭ್ಯ : ಇದೆ / ಇಲ್ಲ
c. ದೂರವಾಣಿ ಸೌಲಭ್ಯ : ಇದೆ / ಇಲ್ಲ
d. ಸ್ವಂತ ವಾಹನ : ಇದೆ / ಇಲ್ಲ (ಸೈಕಲ್ / ಮೊಪೆಡ್ / ದ್ವಿಚಕ್ರ / ಕಾರು, ಜೀಪು)
e. ನೀರು ಪೂರೈಕೆ : ಸ್ವಂತ ಬಾವಿ / ಸಾರ್ವಜನಿಕ ಬಾವಿ / ಕೊಲವೆ ಬಾವಿ / ಇತರ

H. ಸರಕಾರದಿಂದ ಸಿಕ್ಕ ಸೌಲಭ್ಯ
ಯಾಕೆ, ಯಾವ ರೂಪದಲ್ಲಿ

I ವೃತ್ತಿಯ ವಿವರಣೆ ಕೂಲಿ / ಕೃಷಿ / ಬೀಡಿ / ಇತರ (

J. ಮನೆಯಿಂದವಾರದ ಸಭೆಯ ಸ್ಥಳಕ್ಕೆ ಇರುವ ದೂರ
1.km. ಕಡಿಮೆ / 1km ರಿಂದ 3.km / 3.km ಗಿಂತ ಹೆಚ್ಚು

K. ವಾರದ ಸಭೆ ಯಾವ ಸ್ಥಳ : - / ಸಮಯ

L. ಸದಸ್ಯರು ಸಭೆಗೆ ಹಾಜರಾಗುತ್ತಾರೋ ಹೌದು / ಇಲ್ಲ

M. ಗೈರು ಹಾಜರಾದರೆ ದಂಡ ವಿಧಿಸಲಾಗುತ್ತದೆಯೇ ? ಹೌದು/ ಇಲ್ಲ

N. ಗುಂಪಿನ ಸದಸ್ಯ ಆದ ಬಳಿಕ ಸ್ವ ಉದ್ಯೋಗ ಮಾಡಿದ್ದೀರಾ ? ಹೌದು / ಇಲ್ಲ ಯಾವುದು ?

O. ಬೇರೆ ಧರ್ಮಕ್ಕೆ ಸೇರಿದವರು ಇದ್ದಾರೆ / ಇಲ್ಲ ಯಾವ ಧರ್ಮ

III ಸಂಘಟನೆ

A. ಅಧ್ಯಕ್ಷರ ಆಯ್ಕೆ :- ಮತದಾನ / ಅವಿರೋಧ

B. ತಂಡ ರಚಿಸುವಾಗ ಸಂಕಷ್ಟಗಳು ಎದುರಾಗಿದೆಯೇ ? ಹೌದು / ಇಲ್ಲ

C. ಯಾರದಾದರೂ ಸದಸ್ಯತ್ವ ರದ್ದು ಪಡಿಸಿದೆಯೇ ? ಹೌದು / ಇಲ್ಲ

D. ಗುಂಪಿನ ಮೇಲ್ವಿಚಾರಕರು ಸರಿಯಾಗಿ ಮೇಲ್ವಿಚಾರಣೆ ಮಾಡುತ್ತಾರೆಯೇ ಹೌದು / ಇಲ್ಲ

E. ಗುಂಪಿನ ಮೇಲ್ವಿಚಾರಕರು ಶಿಬಿರಗಳನ್ನು ಸಂಘಟಿಸುತ್ತಿದ್ದಾರೆಯೇ ? ಹೌದು / ಇಲ್ಲ ಯಾವುದು ?

IV ಸಾಲ ಮತ್ತು ಮರುಪಾವತಿ

1. ಆಂತರಿಕ ಸಾಲ

ಉದ್ದೇಶ	ಪಡೆದುಕೊಂಡ ಸದಸ್ಯರ ಸಂಖ್ಯೆ	ಸಾಲದ ಮೊತ್ತ	ಉಳಿತಾಯ	ಬಡ್ಡಿ
ಸ್ವ ಉದ್ಯೋಗ				
ಶಿಕ್ಷಣ				
ಗೃಹ ಸಾಲ				
ಕೃಷಿ ಸಾಲ				
ಇತರ				

2. ಬಾಹ್ಯ ಸಾಲ

ಉದ್ದೇಶ	ಪಡೆದುಕೊಂಡ ಸದಸ್ಯರ ಸಂಖ್ಯೆ	ಸಾಲದ ಮೊತ್ತ	ಉಳಿತಾಯ	ಬಡ್ಡಿ ದ
ಸ್ವ ಉದ್ಯೋಗ				
ಶಿಕ್ಷಣ				
ಗೃಹ ಸಾಲ				
ಕೃಷಿ ಸಾಲ				
ಇತರ				

3. ಪಡೆದುಕೊಂಡಸಾಲಕ್ಕೆ ನೀಡುವ ಜಾಮೀನು ಯಾವುದು ?
4. ಸಾಲ ಮರುಪಾವತಿಯ ಅವಧಿ 6 ತಿಂಗಳಿಗಿಂತಕಡಿಮೆ / 6ರಿಂದ 12ತಿಂಗಳು /13ರಿಂದ 24ತಿಂಗಳು / 2ವರ್ಷಕ್ಕಿಂತ ಆಗಿಲ್ಲ
5. ಸಂಘದ ಲೆಕ್ಕ ಪತ್ರ ಇಟ್ಟುಕೊಳ್ಳುವವರು ಯಾರು ? ಅಧ್ಯಕ್ಷ / ಕಾರ್ಯದರ್ಶಿ /ಇತರ

V ಚಟುವಟಿಕೆಗಳು /ಸಹಭಾಗಿತ್ವ

1. ಗುಂಪಿಗೆ ಸೇರಿದ ಬಳಿಕ ಆರ್ಥಿಕವಾಗಿ ಸ್ವತಂತ್ರರಾಗಿದ್ದೀರಾ ಹೌದು / ಇಲ್ಲ
2. ಗುಂಪಿನಿಂದ ಮಾಹಿತಿಯನ್ನು ಒದಗಿಸಲಾಗುತ್ತಿದೆಯೇ ? ಹೌದು / ಇಲ್ಲ ಯಾವುದು ?
3. ನಿಮ್ಮ ಗುಂಪು ನಿಮ್ಮನ್ನು ರಾಜಕೀಯ ಚಟುವಟಿಕೆಗೆ ಉತ್ತೇಜಿಸುತ್ತದೆಯೇ ? ಹೌದು / ಇಲ್ಲ
4. ಧಾರ್ಮಿಕ / ಜಾತಿ ಸಮ್ಮೇಳನಗಳಲ್ಲಿ ಭಾಗವಹಿಸುತ್ತೀರಾ ಹೌದು / ಇಲ್ಲ
5. ಗುಂಪು ನಡೆಸಿದ ಜಾಗೃತಿ ಕಾರ್ಯಕ್ರಮದಿಂದ ನಿಮಗೆ ಪ್ರಯೋಜನವಾಗಿದೆಯೇ ? ಹೌದು/ ಇಲ್ಲ

ಜಾಗೃತಿ ಕಾರ್ಯಕ್ರಮ / ಉಳಿತಾಯ / ಗ್ರಾಹಕ ಚಳುವಳಿ / ಕುಷ್ಟ ರೋಗ ನಿವಾರಣೆ / ಸಾವಯವ ಕೃಷಿ / ಸಾಕ್ಷರತೆ / ಏಡ್ಸ್ ಜನಜಾಗೃತಿ / ಪರಿಸರ ಸಂರಕ್ಷಣೆ/ ನೀರಿನ ಕ್ಯೊಲು / ಆರೋಗ್ಯ ಕಾರ್ಯಕ್ರಮ

6. ನಿಮ್ಮ ಗುಂಪಿನಿಂದ ನಿಮಗೆ ಪ್ರಯೋಜನವಾಗಿದೆಯೇ ? ಹೌದು / ಇಲ್ಲ ಯಾವ ಪ್ರಯೋಜನ ?

7. ನೀವು ಇತರ ಕಾರ್ಯಕ್ರಮಗಳನ್ನು ಸಂಘಟಿಸಿದ್ದೀರಾ ?

   ರಾಷ್ಟ್ರೀಯ ಹಬ್ಬ / ಕನ್ನಡ ರಾಜ್ಯೋತ್ಸವ/ ದೀಪಾವಳಿ / ರಂಜಾನ್ / ಕ್ರಿಸ್ಮಸ್

8. ನಿಮ್ಮ ನಿರೀಕ್ಷೆಗೆ ತಕ್ಕ ಹಾಗೆ ಗುಂಪಿನ ಕೆಲಸಗಳು ನಡೆಯುತ್ತಿದೆಯೇ ಹೌದು / ಇಲ್ಲ

9. ಎಲ್ಲಾ ಸದಸ್ಯರು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆಯೇ ? ಹೌದು / ಇಲ್ಲ

10. ಸಭೆಗಳಲ್ಲಿ ಉಳಿತಾಯ ಹೊರತಾಗಿ ಇತರ ಚಟುವಟಿಕೆ ಮಾಡುತ್ತೀರಾ ? ಹೌದು / ಇಲ್ಲ

    ಹಾಸ್ಯ, ಮನರಂಜನೆ, / ಮಾಹಿತಿ ವಿನಿಮಯ / ಅಜ್ಜಿಕತೆ / ಇತರ

11. ನಿಮ್ಮ ಕುಟುಂಬದ ಸಮಸ್ಯೆಗಳು ಮಧ್ಯಪಾನ / ಜೂಜು / ಕೋಳಿ ಅಂಕ / ಲಾಟರಿ / ಹೆಣ್ಣಿನ ಶೋಕಿ

12. ಸಮಸ್ಯೆಗಳನ್ನು ಸರಿಪಡಿಸಲು ಕೈಗೊಂಡ ಕ್ರಮ

    ಮಧ್ಯವರ್ಜನಾ ಶಿಬಿರ / ವೈದ್ಯರ ಸಲಹೆ / ಹಿರಿಯರ ಉಪದೇಶ / ಆಣೆ ಪ್ರಮಾಣ

13. ಮನೆಯಲ್ಲಿ ಪ್ರಮುಖ ತೀರ್ಮಾನ ಹೇಗೆ ಕೈಗೊಳ್ಳುತ್ತೀರಿ ? ಕುಟುಂಬದ ಯಜಮಾನ / ಗಂಡ ಹೆಂಡತಿ / ಸಾಮೂಹಿಕ

14. ಇತರ ಮಾಹಿತಿಗಳು :-

    a. ವೃತ್ತಿ ಬದಲಾವಣೆಯ ಯೋಜನೆ

    b. ಆಸ್ತಿ ಕೊಳ್ಳುವ ಬಗ್ಗೆ

    c. ಮಕ್ಕಳ ಭವಿಷ್ಯದ ಬಗ್ಗೆ

    d. ಮನೆ ಬದಲಾವಣೆ ಬಗ್ಗೆ

    e. ವಾಹನ ಕೊಳ್ಳುವ ಬಗ್ಗೆ

    f. ಪಂಚಾಯತಿಯ ಸ್ಪರ್ಧಿಸುವ ಬಗ್ಗೆ

    g. ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳುವುದು.

    h. ಮತದಾನ (ಸ್ವತಂತ್ರ ನಿರ್ಧಾರ / ಪ್ರಭಾವ)

    i. ಪ್ರವಾಸ - ಪ್ರೇಕ್ಷಣೀಯ/ ಕೃಷಿ / ಧಾರ್ಮಿಕ / ಕೃಷಿಯೇತರ

ಅನುಬಂಧ II

ಸಂದರ್ಶಿಸಿದ ಸದಸ್ಯರ ಹೆಸರು

ಕ್ರಮ ಸಂಖ್ಯೆ	ಸದಸ್ಯರ ಹೆಸರು	ವಯಸ್ಸು
1	ಅಬೂಬ್ಬಕರ್	30
2	ಆದಂ ಕುಂಞಿ	28
3	ಅಕ್ಕಮ್ಮ	47
4	ಆಲ್ಬಾರ್ ಕ್ರಾಸ್ಟಾ	32
5	ಅಮ್ಮು ಮುಗೇರ	53
6	ಅಂಗ್ಡಿರ	29
7	ಆನಂದ ಕುಲಾಲ್	43
8	ಆನಂದ ನಾಯ್ಕ	40
9	ಅಸ್ಮಾ	28
10	ಅಶ್ರಫ್	37
11	ಅವ್ವಮ್ಮ	40
12	ಅವ್ವಂಜ್ಞಿ	38
13	ಬಾಲಕ್ಕ	44
14	ಬಾಲಕೃಷ್ಣ	48
15	ಬಾಸ್ಕರ ರಾವ್	40
16	ಬೆನ್ನಿ ಲಾಸ್ರಾದೋ	45
17	ಚಂದ್ರವತಿ	46
18	ಚಿದಾನಂದ	28
19	ದರ್ಮಣ್ಣ	47
20	ದೇವಕಿ	32
21	ದುಗ್ಗೆ	47
22	ಗಣೇಶ	43
23	ಗೋಪಾಲ	32
24	ಹಾಜಿರಾ	40

25	ಹನೀಫ್	32
26	ಐತಪ್ಪ ನ್ಾಯ್ಕ್	53
27	ಇಸ್ಮಾಯಿಲ್	48
28	ಇಸ್ಮಾಯಿಲ್	43
29	ಜಗದೀಶ ಶೆಟ್ಟಿ	27
30	ಜಗನ್ನಾಥ ಪೂಜಾರಿ	42
31	ಜಲಜ	38
32	ಜಾನಕಿ	27
33	ಜಯ	44
34	ಜಯಲಕ್ಷ್ಮಿ	38
35	ಜಯಂತಿ	40
36	ಜಯಂತಿ	28
37	ಜಯಶ್ರೀ	27
38	ಕಾಂತಪ್ಪ	41
39	ಕಲ್ಯಾಣಿ	22
40	ಖತೀಜ	37
41	ಕೊರಗಪ್ಪ	38
42	ಕೃಷ್ಣಪ್ಪ ನ್ಾಯ್ಕ್	42
43	ಕುಸುಮ	28
44	ಲಕ್ಷ್ಮಿ	28
45	ಲಲಿತಾ	37
46	ಲಲಿತಾ	38
47	ಲಲಿತಾ ಶೆಟ್ಟಿ	41
48	ಲೀಲಾ	36
49	ಮಾಧವ	47
50	ಮಹಮ್ಮದ್	44
51	ಮಹಮ್ಮದ್ ಜಿ	54
52	ಮಾಲತಿ	28

53	ಮೋಹಿನಿ	28
54	ನಳಿನಿ ಕೆ	29
55	ನಳಿನಾಕ್ಷಿ	32
56	ನಾರಾಯಣ ಬಿ	38
57	ನಾರಾಯಣ ಉಬರಳೆ	43
58	ಫಕೀರ	46
59	ಪ್ರೇಮ	21
60	ಪ್ರೇಮ	24
61	ರಫೀಕ್	42
62	ರಾಮ ಮೂಲ್ಯ	38
63	ರಾಮ ನಾಯ್ಕ	56
64	ರಾಮಣ್ಣ ಬಂಗೇರ	38
65	ರೇವತಿ	39
66	ರೂಪವಾಣಿ	24
67	ಶಾಪಿಯಾ	37
68	ಸಾಜಿದಾ	19
69	ಸಾಜಿರಾ	28
70	ಶಮೀರ್	38
71	ಸತ್ಯನಾರಾಯಣ	37
72	ಸತ್ಯ ಪ್ರಕಾಶ್	42
73	ಶಂಕರ ಎನ್	28
74	ಶಾರದಾ	23
75	ಸಾರಮ್ಮ	29
76	ಸರೋಜ	28
77	ಸರೋಜಿನಿ	39
78	ಸೆಬಾಸ್ಟಿಯನ್ ಫಾಯಸ್	42
79	ಸೆಫಿಯಾ	44
80	ಶೇಷಪ್ಪ	47

81	ಶೇಷಪ್ಪ	29
82	ಶಶಿಕಲಾ	27
83	ಸುಜಾತ	23
84	ಸುಕೇಶ್	29
85	ಸುಮತಿ	22
86	ಸುಂದರ	39
87	ಸುಂದರ	28
88	ಸುನೀತಾ	29
89	ಸುಶೀಲಾ	29
90	ಸುರೇಂದ್ರ	34
91	ಸೂರ್ಯ ನಾರಾಯಣ ಪ್ರಭು	48
92	ವಾರಿಜ	40
93	ವೆಂಕಪ್ಪ	41
94	ವೆಂಕಪ್ಪ ಗೌಡ	42
95	ವಸಂತಿ	28
96	ವಸಂತಿ	38
97	ವಿಜಯ	29
98	ವಿಜಯಾ ಜಿ	28
99	ವಿಶಾಲಾಕ್ಷಿ	38
100	ವಿಶ್ವನಾಥ	39

ಅನುಬಂಧ III

ಛಾಯ ಚಿತ್ರಗಳು



ಪ್ರಗತಿ ಬಂಧು ಒಕ್ಕೂಟದ ಉದ್ಘಾಟನೆ



ಪ್ರಗತಿ ಬಂಧು ಗುಂಪು ಮಾಹಿತಿ ನೀಡಿಕೆ



ಮಾಹಿತಿ ನೀಡಿಕೆ ಕಾರ್ಯಕ್ರಮದಲ್ಲಿ ಮಹಿಳೆಯರು



ಶ್ರೀ ಕ್ಷೇತ್ರ ಗ್ರಾಮಾಭಿವೃದ್ಧಿ ಯೋಜನೆಯ ಫಲಾನುಭವಿ



ಪ್ರಗತಿ ಬಂಧು ಶ್ರಮ ವಿನಿಮಯ



ಸದಸ್ಯರಿಗೆ ಸಸಿ ವಿತರಣೆ



ಮಲ್ಲಿಗೆ ಕೃಷಿ ಪ್ರಾತ್ಯಕ್ಷಿಕೆ



ಕೋಳಿ ಸಾಕಾಣೆ ಯೋಜನೆ

ಗ್ರಂಥಸೂಚಿ

ಪುಸ್ತಕಗಳು

೧. ಆನಂದ್ ಸ್ವಾಮಿ; ಸುಭಾಷ್ ಪಾಳೇಕರರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ, ಅಗ್ನಿ ಪ್ರಕಾಶನ, ಜಗಳೂರು – ೨೦೦೬.

೨. ಬಸವಾ ಕೆ.ಡಿ.; ಭಾರತದ ಆರ್ಥಿಕ ಅಭಿವೃದ್ಧಿ, ವಿದ್ಯಾವಾಹಿನಿ ಪ್ರಕಾಶನ, ೨೦೦೬.

೩. ಬಸವರಾಜ್; ಮಹಾತ್ಮ ಗಾಂಧೀಜಿಯ ದೃಷ್ಟಿಯ ಸಹಕಾರ ಪದ್ಧತಿ, ಕವಲುದಾರಿಯಲ್ಲಿ ಸಹಕಾರ, ಚೇತನ ಬುಕ್ ಹೌಸ್, ೨೦೦೨.

೪. ಭೈರಪ್ಪ ಕೆ.; ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ಧಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೫.

೫. Bhramananda P. R; 50 years of Free Indian Economy, Indian Economic Association Trust for Research and Development, New Delhi, 1997.

೬. ಚಂದ್ರಶೇಖರ್ ಟಿ.ಆರ್; ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು: ಸಿವಿಜಿ ಪಬ್ಲಿಕೇಶನ್, ಹಂಪಿ, ೨೦೦೩.

೭. ಚಂದ್ರಶೇಖರ್ ಟಿ. ಆರ್; ಮಹಿಳೆ, ಆರ್ಥಿಕತೆ ಮತ್ತು ಅಭಿವೃದ್ಧಿ, ಹಂಪಿ ವಿದ್ಯಾಲಯ ಅಪ್ರಕಟಿತ.

೮. ಎರ್ರಿ ಸ್ವಾಮಿ ಎನ್.ಟಿ; ಸ್ವಸಹಾಯ ಸಂಘಗಳು ಒಂದು ಪರಿಕಲ್ಪನೆ, ಬದುಕು ಸ್ವಯಂ ಸೇವಾ ಸಂಸ್ಥೆ, ಜಗಳೂರು, ೨೦೦೬.

೯. ಗಣಪತಿ ಭಟ್ ಪುಂಡಿಕ್ಯಾ; ಬಂಟ್ವಾಳ ಇತಿಹಾಸ ದರ್ಶನ, ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ಬಂಟ್ವಾಳ.

೧೦. ಕೃಷ್ಣಯ್ಯ ಗೌಡ ಎಚ್.ಆರ್; ಸ್ವಸಹಾಯ ಗುಂಪುಗಳು, ಚಿಂದಿಯಿಂದ ಸಿರಿತನದೆಡೆಗಿನ ಒಂದು ಕತೆ, ಗುರುಕೃಪಾ ಪ್ರಕಾಶನ, ಮಾನಸ ಗಂಗೋತ್ರಿ ೫೭೦೦೦೬, ಮೈಸೂರು, ೨೦೦೪.

೧೧. ಕೃಷ್ಣಯ್ಯ ಗೌಡ ಎಚ್.ಆರ್; ಪರಿಸರ ಅರ್ಥಶಾಸ್ತ್ರ, ಸ್ಪಂದನ ಪ್ರಕಾಶನ, ಬೆಂಗಳೂರು.

೧೨. ಲೆಸ್ಟರ್ ಆರ್. ಬ್ರೌನ್, ಕ್ರಿಸ್ಟೋಫರ್ ಬ್ಲೇವಿನ್, ಹಿಲರಿ ಫ್ರೈಲಟ್, ವಿಶ್ವ ಪರಿಸ್ಥಿತಿ, ನಾಗರಿಕ ಸೇವಾ ಟ್ರಸ್ಟ್, ಗುರುವಾಯನಕೆರೆ, ೨೦೦೧-೨೦೦೦.

೧೩. ಒಡೆಯರ ಡಿ. ಹೆಗ್ಗಡೆ ಮತ್ತು ಕೆ.ಎಂ. ವೀರಯ್ಯ, (ಸಂ), ಕವಲು ದಾರಿಯಲ್ಲಿ ಸಹಕಾರ, ಪುನರುಜ್ಜೀವನದ ಅಗತ್ಯತೆ, ಚೇತನ ಬುಕ್ ಹೌಸ್, ೨೦೦೭.

೧೪. ರಘುಪತಿ ಭಟ್ ಕೆಮ್ತಾರು; ತುಳುನಾಡ ಸ್ಥಳನಾಮಗಳು, ಕನ್ನಡ ಸಾಹಿತ್ಯ ಪರಿಷತ್ತು, ೧೯೭೯.

೧೫. ರುದಾರ್ ದತ್ತ್ ಮತ್ತು ಸುಂದರಂ, ಭಾರತದ ಆರ್ಥಿಕತೆ, ಎಸ್. ಚಂದ್ ಮತ್ತು ಕಂಪನಿ, ೨೦೦೭.

೧೬. Schumacher E.F; Small is Beautiful, Radhakrishna Publishers, New Delhi, 1997.

೧೭. ಶಿಶಿಲ ಪ್ರಭಾಕರ; ಆರ್ಥಿಕ ಚಿಂತನವಾಹಿನಿ, ಮಂಗಳ ಪ್ರಕಾಶನ, ೨೦೦೨.

೧೮. ---,, ----; ಆರ್ಥಿಕ ಭಾರತ, ಮಂಗಳ ಪ್ರಕಾಶನ, ೨೦೦೬.

೧೯. ---,, ----; ಅಭಿವೃದ್ಧಿಯ ಆಯಾಮಗಳು, ಮಂಗಳ ಪ್ರಕಾಶನ, ೨೦೦೬.

೨೦. ---,, ----; ಮಹಾನ್ ಅರ್ಥಶಾಸ್ತ್ರಜ್ಞರು, ಕಲಾ ಪ್ರಕಾಶನ, ಬೆಂಗಳೂರು, ೧೯೯೭.

೨೧. ಶಿಶಿಲ ಪ್ರಭಾಕರ ಮತ್ತು ಕುಮಾರ ಸ್ವಾಮಿ: ಭಾರತದ ಆರ್ಥಿಕ ಅಭಿವೃದ್ಧಿ, ಮಂಗಳ ಪ್ರಕಾಶನ, ೨೦೦೫.

೨೨. ಶ್ರೀಪತಿ ಕಲ್ಲೂರಾಯ ಪಿ., ಜಯವಂತ್ ನಾಯಕ್, ಶಮೀನ ಮೆಹ್ತಾಬ್: ಭಾರತದ ಆರ್ಥಿಕ ಅಭಿವೃದ್ಧಿ, ಮಂಗಳ ಪ್ರಕಾಶನ ೨೦೦೬.

೨೩. ಸುಶೀಲ ಸುಬ್ರಹ್ಮಣ್ಯ, ಜೀವನ್ ಕುಮಾರ್ ಡಿ, ಜಯಂತಿ ಕೆ.ವೈ.: ಕರ್ನಾಟಕ ಮುನ್ನೋಟ, ೨೦೦೫, ಬೆಂಗಳೂರು ವಿಶ್ವವಿದ್ಯಾಲಯ, ೨೦೦೨.

೨೪. ಸೋಮಶೇಖರ್ ನೇ.ತಿ.; ಕರ್ನಾಟಕ ಅರ್ಥಶಾಸ್ತ್ರ, ಸಮುಖ ಪ್ರಕಾಶನ, ೨೦೦೬.

25. Thingalaya N.K; Micro finance, Justice K.S Hegde Foundation, 2006.

ಲೇಖನಗಳು

೧. ಬಸವರಾಜ ಸಂಪಳ್ಳಿ; "ಗ್ರಾಮ ಸ್ವರಾಜ್ಯದ ಯಶೋಗಾಥೆ", ಪ್ರಜಾವಾಣಿ, ಎಪ್ರಿಲ್ ೧೨, ೨೦೦೭.

೨. ಆಶಾಲತಾ ಸುವರ್ಣ; "ಸ್ವಸಹಾಯ ಸಂಘಗಳು ಆರ್ಥಿಕ ಸ್ವಾವಲಂಬನೆಗೊಂದು ಯಶಸ್ವಿ ಪ್ರಯೋಗ", ತತ್ವಾನ್ವೇಷಣೆ, ರಾಣಿ ಅಬ್ಬಕ್ಕ ಪ್ರಕಾಶನ, ಬಂಟ್ವಾಳ, ೨೦೦೬.

೩. Gangaiah C., B. Nagaraj, Vasudev Naidu: "Impact of SHG on Income and Employment, Kurukshetra, 2006, Vol. 54. No. 8

೪. Gupta M.L. and Namitha Gupta: "Economic Empowerment of women through SHG's, Kurukshetra, 2006. Vol. 54, 2005

೫. Kumaran K.P.: "Self Help Group and Rural Poor", National Book News Review, 2001.

೬. Malcom haber and others: "SHG – Banking linkage a tool for reforms in co-operatives", EPW, April, 2005.

೭. Mahendra Varman: "Impact of Self Help Group on formal banking habits". EPW, April 2005.

೮. Rajaram Gupta Das: "Impact of Micro finance to rural self help groups", Indian general of Agricultural Economics, Vol. 56, No. 3, 2006.

೯. Ritu Jain and others: "Social and Economic impact of self help of groups", Yojana, Vol. 47, No. 7, 2005.

೧೦. Subah Sing Yadav: "Self help groups movement in Rajasthan", Kurukshethra, Vol. 54, No. 11, 2006.

೧೧. Subbaya A. and Selva kumar M. – "Self help group and rural development" Third concept, 2006.

೧೨. Subhya sachi Das: "Self help groups and minor credit", Kurukshetra, Vol. 51, No. 10, 2003.

೧೩. Vijayachand Pille and Harikumar: "SHG of Kerala", Kurukshethra, Vol. 54, 2006.

೨. ವರದಿಗಳು / ದಾಖಲೆಗಳು / ಸ್ಮರಣ ಸಂಚಿಕೆಗಳು

೧. ದಕ್ಷಿಣ ಕನ್ನಡ ಜಿಲ್ಲಾ ಅಂಕಿ–ಅಂಶಗಳು – ೨೦೦೬–೦೭.

೨. ಹೊಸಮನೆ ವಿ.ಭಾ.; ವಾಣಿ, ಸಂಸ್ಕರಣಾ ಸಂಚಿಕೆ, ವಟವಾಳ ಮತ್ತು ಬಂಟ್ವಾಳ.

೩. ಕೃಷಿಮೇಳ ವಿಶೇಷ ಸಂಚಿಕೆ – ೨೦೦೨.

೪. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ; ಬಂಟ್ವಾಳ, ವರದಿ ೨೦೦೫–೨೦೦೬.

೫. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ; ಬಂಟ್ವಾಳ, ಅರ್ಧವಾರ್ಷಿಕ ವರದಿ – ೨೦೦೬.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯ ಬಂಟ್ವಾಳದ ಪ್ರಗತಿ – ೨೦೦೫ ರಿಂದ ೩೧.೦೧.೨೦೦೬

೬. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೈಪಿಡಿ

೭. ಸಂಪೂರ್ಣ ಸುರಕ್ಷಾ ಆರೋಗ್ಯ ವಿಮೆ, ಬಂಟ್ವಾಳ, ಇವರ ದಾಖಲೆಗಳು

೮. ತಾಲೂಕುಗಳ ಬಗೆಗಿನ ಕೈಪಿಡಿ, ಉದಯವಾಣಿ, ದೀಪಾವಳಿ ವಿಶೇಷ ಸಂಚಿಕೆ – ೨೦೦೬.

೯. ತುಕಾರಾಂ ಪೂಜಾರಿ: ತತ್ವಾನ್ವೇಷಣೆ, ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಡಾ। ಅಮ್ಮೆಂಬಳ ಬಾಳಪ್ಪ ಅಭಿನಂದನಾ ಗ್ರಂಥ – ೨೦೦೫.

ಇತರ

೧. ಚಂದ್ರಶೇಖರ ದಾಮ್ಲೆ; ಪಾರಿಭಾಷಿಕ ಪದಕೋಶ, ಕನ್ನಡ ವಿಶ್ವವಿದ್ಯಾಲಯ ಹಂಪಿ – ೨೦೦೩.

೨. ಮಧುರಾ ಎಂ.ಆರ್; Comparative study of SHG functioning under Govt. and Ngo, Unpublished – 2006.

೩. ಪೊಲಿ ಕೆನರಾ ೨೦೦; ಜಿಲ್ಲಾಧಿಕಾರಿ ಪ್ರಕಟನೆ, ದ.ಕ. ಜಿಲ್ಲೆ ಮಂಗಳೂರು.

೪. Rev. F. Kittel; A Kannada-English Dictionary, Asian Educational Services, New Delhi, Madras – 1994.